ಬೆಲೆ : 4 ರೂ.

ಕಲ್ಯಾಣ ಕಿರಣ

ಸಪ್ಟಂಬರ್
1995



ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು
ಲಿಂಗಾನಂದ ಮಹಾಸ್ವಾಮಿಗಳು

ಕಲ್ಯಾಣ ಕಿರಣ

ಮಾಸಪತ್ರಿಕೆ, ಆಗಸ್ಟ್-ಸಪ್ಟಂಬರ್ 95, ಬಿಡಿ ಸಂಚಿಕೆ 4 ರೂ.

ಸಂಪುಟ : 25 ಸಂಚಿಕೆ : 2 ಬಸವ ಶಕೆ : 862.

ವಾರ್ಷಿಕ ಚಂದಾ : 40 ರೂ. ಆಜೀವ ಸದಸ್ಯತ್ವ : 400 ರೂ.

ಕಿರಣಗನ್ನಡಿ

ಮುಖಪುಟ ಮತ್ತು ಹೊದ್ದಿಕೆಯ 4 ನೇ ಪುಟದಲ್ಲಿ :
ಲಿಂಗೈಕ್ಯರಾದ ಬಸವ ಧರ್ಮ ಮಹಾಜಗದ್ಗುರು ಪೀಠದ ಪ್ರಥಮ ಅಧಿಕಾರಿ **ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರು.**

KALYANA KIRANA-Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560074. Ph :8437234

— ನುಡಿ ನೈವೇದ್ಯ —

ಸ್ಫೂರ್ತಿ ಚೇತನ

'ಇಂಥವರು ಅಗಲಿದರು, ಜಗಕೆ ತುಂಬಿ ಬಾರದ ನಷ್ಟ'
ಎಂಬ ಉಪಚಾರದ ಮಾತು ಲೋಕದಲಿ ಬಹು ಸಹಜ.
ಆದರೆ, ಇಲ್ಲಿ ಹಾಗಲ್ಲ, ನಿಜಕ್ಕೂ ತುಂಬಿ ಬಾರದ ನಷ್ಟ !
ಇನ್ನಾರು, ಇನ್ನಾರು ?
ಬಸವ ತತ್ತ್ವದ ಸಾಮ್ರಾಜ್ಯವ ವಿಸ್ತರಿಸುವವರು ?
ಆಹ್ವಾನ ನೀಡಿ ಬಸವ ತತ್ತ್ವದ ಹಿರಿಮೆ ಸಾರುವವರು ?
ಆನೆಯ ಒಂದು ಹೊರೆ ಎತ್ತಲು ಎಷ್ಟು ಆಡಿಗೆ ಸಾಧ್ಯ ?
ಅಡಿಯಿಟ್ಟಲ್ಲಿ ಬಸವ ಧರ್ಮದ ಬೆಳಕು
ನುಡಿಯಾಡಿದಲ್ಲಿ ವಚನ ವಾಙ್ಮಯದ ಡಿಂಡಿಮ !
ಬಸವ ಸಾಮ್ರಾಜ್ಯದ ಗಡಿ ವಿಸ್ತರಿಸುತ್ತಲಿತ್ತು ;
ನೀವು ನುಡಿದಾಡಿದಲ್ಲಿ, ನಡೆದಾಡಿದಲ್ಲಿ.
ಶಿಷ್ಯರ ಬಾಯಲ್ಲಿ ಅಪ್ಪಾಜಿ, ಅಪ್ಪಾಜಿ
ಪ್ರವಚನದ ಕೇಳುಗರ ಬಾಯಲ್ಲಿ ಅಪ್ಪಾಜಿ ಅಪ್ಪಾಜಿ
ಎಲ್ಲರ ಹೃನ್ಮನಮತಿಗಳ ಮೇಲೆ ಎಂತಹ ಛಾಪು !
ಆ ನಗೆಮೊಗದ ವಾತ್ಸಲ್ಯದ ನೋಟಕ್ಕೆ ಹಂಬಲಿಸುವವರೆಷ್ಟೊ
ಸಿಡಿಮಿಡಿ ಮಾಡುವ ಸಿಟ್ಟಿನ ಸೊಬಗನ್ನು
ಒಳಗೊಳಗೆ ಹರ್ಷಿಸುತ್ತ ನೋಡಲು ಆಶಿಸುವವರೆಷ್ಟೊ
ಭಕ್ತಿ-ಗೌರವಗಳ ಜೊತೆಗೆ ಭಕ್ತರಲ್ಲಿ ಅತುಳ ಆತ್ಮೀಯತೆ.
ಅಂತೆಯೇ ಅಗಲಿ ಹೋದಾಗ ಆಳವರಿಯದ ಮೌನ ವ್ಯಥೆ
ಎಲ್ಲರ ಮನಗೆದ್ದ ಮೋಡಿಗಾರರು ನೀವು !
ಒಳಹೊರಗೊಂದಾದ ಅಂತಃಕರಣ ಶುದ್ಧಿ
ಹಸುಗೂಸಿನ ನಿಷ್ಕಲ್ಮಶ ನಿರಾಳ ಮಂದಸ್ಮಿತ ನಗೆ
ಇಲ್ಲಿಯೂ ಸಂದು, ಅಲ್ಲಿಯೂ ಸಂದ ಶರಣ ವೀರ !
ಘಮಘಮಿಸಿ ಮುದ ನೀಡ್ವ ಈ ಜ್ಞಾನ ಪುಷ್ಪದ ಸೌರಭ
ಇನ್ನಷ್ಟು ಕಾಲ ಬೇಕು ಎಂದು ಜಗವು ಬಯಸುವಾಗಲೇ
ತನ್ನ ಅಡಿಯಲ್ಲಿ ಅಡಗಿಸಿಕೊಂಡ ಲಿಂಗದೇವನ ಲೀಲೆಗೆ
ದುಃಖಾಶ್ರುಗಳ ಸುರಿಸಿದರೂ, ತಲೆ ಬಾಗಲೇ ಬೇಕಲ್ಲವೆ,
ಬಸವ ಹಸ್ತಾಂಗುಲಿಯ ಉಂಗುರದ ಮಾಣಿಕ್ಯ ಓ ಪೂಜ್ಯ ಅಪ್ಪಾಜಿ
ಇಂದು ಉಳಿದಿರಿ ನೀವು ಒಂದು ದಿವ್ಯ ನೆನಪಾಗಿ,
ಎಂದೆಂದೂ ಮಾರ್ಗ ತೋರುವ ಸ್ಫೂರ್ತಿ ಚೇತನವಾಗಿ.

20-8-1995 —ಮಾತಾಜಿ

ಡಾ|| ಎಸ್. ಎಲ್. ಭೈರಪ್ಪನವರ

ಅಪಕ್ವ ಚಿಂತನೆ

ಕರ್ಮವೀರ, ಜುಲೈ 9, 1995 ರ ಸಂಚಿಕೆಯನ್ನು ಧಾರವಾಡದಲ್ಲಿದ್ದಾಗ ಶರಣ ಜಿ. ಜಿ. ಚನ್ನಿಯವರು ತಂದುಕೊಟ್ಟರು ; ಇದಕ್ಕೆ ಪ್ರತಿಕ್ರಿಯೆಯನ್ನು ನೀಡಬೇಕು ಎಂದು ಮನವಿ ಮಾಡಿದರು. ಡಾ|| ಎಸ್. ಎಲ್. ಭೈರಪ್ಪನವರ ಸಂದರ್ಶನ ಲೇಖನ ಪ್ರಕಟವಾಗಿತ್ತು. ಕಣ್ಣು ಹಾಯಿಸಿದೆ. ದಿ. 28-6-1995 ರಂದು ಧಾರವಾಡದ ಲಿಂಗಾಯತ ಟೌನ್ ಹಾಲದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಉತ್ತರ ನೀಡಿದೆ. ಕರ್ಮವೀರಕ್ಕೆ ಬರೆಯಬೇಕು ಎನ್ನುವಾಗಲೇ ದಿ. 30-6-95 ರಂದು ಪೂಜ್ಯ ಅಪ್ಪಾಜಿಯವರು ಲಿಂಗೈಕ್ಯರಾದ ಘಟನೆ ಸಂಭವಿಸಿ, ವಾಗ್ಯುದ್ಧಕ್ಕೆ ಕಾಲವಲ್ಲ ಎಂದು ಸುಮ್ಮನಾದೆ. ಮನಸ್ಸೂ ಮುದುಡಿತ್ತು.

ನನ್ನ ಪ್ರತಿಕ್ರಿಯೆ ಬರೆದು ಕಳಿಸಿದ್ದರೆ 'ಕರ್ಮವೀರ' ಪತ್ರಿಕೆಯವರು ಹಾಕುತ್ತಿದ್ದರೇನೊ ? ನಾನೇ ಬರೆದು ಕಳಿಸಲಿಲ್ಲ. ಏಕೆಂದರೆ ಇಂದಿನ ಹಲವಾರು ಪತ್ರಿಕೆಗಳಿಂದ ಅಪ್ರಾಮಾಣಿಕ ವರ್ತನೆಯನ್ನು ನಿರೀಕ್ಷಿಸಿ ಮಾನಸಿಕ ಘಾಸಿಗೆ ಒಳಗಾಗಬಾರದೆಂದು ನಿರ್ಧರಿಸಿದ್ದೆನು. ಬಹುಪಾಲು ಪತ್ರಿಕೆಗಳು ವೈದಿಕ ಧರ್ಮಕ್ಕೆ ಪೋಷಕವಾದುದನ್ನು ಅವರು ಎಷ್ಟು ಮನ ಉಬ್ಬಿ ಕೊಡುವರೋ ಅಷ್ಟು ಪ್ರಾಮಾಣಿಕವಾಗಿ ಶರಣ ಧರ್ಮಕ್ಕೆ ಸಂಬಂಧಿಸಿದುದನ್ನು ಮತ್ತು ವೈದಿಕ (ವೈಷ್ಣವ) ಧರ್ಮಕ್ಕೆ ವಿರೋಧವಾದುದನ್ನು ಎಂದೂ ಕೊಡರು. ಬರೆದು ಕಳಿಸಿದರೂ ಹಾಕುವುದಿಲ್ಲ ; ಹಾಕಿದರೂ ಎಷ್ಟು ಬೇಕೋ ಅಷ್ಟು ಕತ್ತರಿ ಆಡಿಸಿಯೋ ಹಾಕುವರು. ಆದ್ದರಿಂದ ಬರೆದು ಸಮಯವನ್ನೇಕೆ ವ್ಯರ್ಥ ಮಾಡಿಕೊಳ್ಳಬೇಕು. ? " ಎಂದು ನನ್ನಲ್ಲಿ ನಾನೇ ಆಲೋಚಿಸಿ ಬರೆಯುವ ಗೋಜಿಗೆ ಹೋಗಲಿಲ್ಲ.

ಹಿಂದೆ ಆಗಲೇ ಕಹಿ ಅನುಭವವಾಗಿತ್ತು. ಮಹಾಚೈತ್ರಕ್ಕೆ ಸಂಬಂಧಿಸಿ, ಬಸವಾದಿ ಪ್ರಮಥರನ್ನು ಹೀನಾಮಾನವಾಗಿ ನಿಂದಿಸುವ ಆ ಪುಸ್ತಕವನ್ನು ಸಮರ್ಥಿಸಿ ಕೊಳ್ಳುವವರ ಬರಹಗಳನ್ನು ಆಯ್ದು ಆಯ್ದು ಪ್ರಕಟಿಸುವ, ಆ ನಾಟಕ ಕೃತಿಯನ್ನು ವಿರೋಧಿಸುವವರ ಬರಹಗಳನ್ನು ಬದಿಗಿಡುವ ಕೆಲಸವನ್ನು ಅನೇಕ ಪತ್ರಿಕೆಗಳು [illegible] ನಿರ್ವಹಿಸಿದ್ದವು. ಮಹಾಚೈತ್ರ ಸಮರ್ಥಿಸಿದ ಸಿರಿಗೆರೆಯ ಶ್ರೀ [illegible] ಲೇಖನವನ್ನು ಪ್ರಮುಖ ಪತ್ರಿಕೆಗಳು ಪ್ರಕಟಿಸಿದ್ದವು. ಅದಕ್ಕೆ ಉತ್ತರವಾಗಿ [illegible] ಬರೆದು ನಾನು ಕಳಿಸಿದ ಲೇಖನವನ್ನು ಪ್ರಕಟಿಸುವ ಕನಿಷ್ಠ ಸೌಜನ್ಯವನ್ನು ಆ ಪತ್ರಿಕೆಗಳು ತೋರಿಸಿರಲಿಲ್ಲ. ಯಾವುದೇ ಅಭಿಪ್ರಾಯ ಪ್ರಕಟಿಸಿದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಬರೆದ ಲೇಖನವನ್ನು ಮುದ್ರಿಸುವುದು ಪತ್ರಿಕಾ ಧರ್ಮ. ಆ ಶಿಷ್ಟಾಚಾರವನ್ನು ಪಾಲಿಸಬೇಕೆಂಬ ಸನ್ನಡತೆಯನ್ನು ಪತ್ರಿಕೆಗಳಿಗೆ ಯಾರು ಕಲಿಸಬೇಕು ? !

ಈ (ಕಹಿ) ಅನುಭವದ ಹಿನ್ನೆಲೆಯಲ್ಲೇ ಕರ್ಮವೀರದಲ್ಲಿ ಡಾ|| ಭೈರಪ್ಪನವರ ಸಂದರ್ಶನದಲ್ಲಿ ನಮ್ಮ ಹೆಸರು-ವಿಚಾರ ಪ್ರಸ್ತಾಪವಾಗಿದ್ದರೂ ನಾನು ಪ್ರತಿಕ್ರಿಯೆ ಬರೆದು ಕೈ, ಮನ ನೋಯಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಆದರೆ, ಇದೀಗ ನಮ್ಮ ಕಲ್ಯಾಣ ಕಿರಣದ ಓದುಗರಿಗಾದರೂ ನಾನು ಶ್ರೀ ಭೈರಪ್ಪನವರ ಅಪರಿಪಕ್ವ ವಿಚಾರ ಧಾರೆಯ ಪರಿಚಯ ಮಾಡಿಕೊಡುವುದು ಅಗತ್ಯವೆನಿಸಿ ಈ ಲೇಖನ ಬರೆಯುತ್ತಲಿರುವೆ. ಇದಕ್ಕೆ ಇನ್ನೊಂದು ಪ್ರೇರಣೆಯೂ ಉಂಟು. ಬಸವಾದಿ ಪ್ರಮಥರು ಅತ್ಯಂತ ಕ್ರಾಂತಿಕಾರಿ ವಿಚಾರಧಾರೆಯನ್ನು ಪ್ರತಿಪಾದಿಸಿದರು. ಆಗಿನ ಸಮಾಜ ಪೂರ್ಣವಾಗಿ ಅರ್ಥಮಾಡಿಕೊಳ್ಳದಿದ್ದರೂ ಮುಂದಿನ ಜನಾಂಗವಾದರೂ ಅರ್ಥಮಾಡಿಕೊಳ್ಳುತ್ತಾರೆಂಬ ಭರವಸೆಯಿಂದ ತಮ್ಮ ವಿಚಾರಧಾರೆಯನ್ನು ವಚನಗಳ ರೂಪದಲ್ಲಿ ದಾಖಲಿಸಿದರು. ಶ್ರೀ ಡಾ|| ರಾಮ ಮನೋಹರ ಲೋಹಿಯಾ ಅವರು, "ನನ್ನ ಜನರು ನನ್ನನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ ಅಥವಾ ನಾನು ಸತ್ತ ನಂತರ ನನ್ನನ್ನು ಅವರು ಅರ್ಥ ಮಾಡಿಕೊಳ್ಳುತ್ತಾರೆ." ಎಂದು (ಬಂಡವಾಳಶಾಹಿ ಮತ್ತು ಸಮತಾವಾದಿ ತತ್ತ್ವಗಳು ಪುಟ-3) ಹೇಳಿದರಾದರೂ ತಮ್ಮ ಆಲೋಚನಾ ಸರಣಿಯನ್ನು ಬರವಣಿಗೆಯಲ್ಲಿ ದಾಖಲಿಸಿದರು. ಧರ್ಮಪಿತ ಬಸವಣ್ಣನವರು ಅಂದು ವೈದಿಕ ಪುರೋಹಿತಶಾಹಿಯನ್ನು ಎದುರಿಸಬೇಕಾಯಿತು. ಇಂದು ಅವರ ತತ್ತ್ವ ಸಿದ್ಧಾಂತಗಳು ವೈದಿಕ ಪುರೋಹಿತಶಾಹಿಯೊಡನೆ ವೀರಶೈವ ಪುರೋಹಿತಶಾಹಿಯನ್ನೂ ಎದುರಿಸಬೇಕಾಗಿದೆ. ಈ ಎರಡು ಕೂಟಗಳ ವ್ಯವಸ್ಥಿತ ಸಂಚಿನ ಮಧ್ಯೆಯೇ ಬಸವ ಧರ್ಮೀಯರು ಬಸವ ತತ್ತ್ವದ ಸಾರವನ್ನು ಮನಗಂಡು, ಲೋಕಕ್ಕೆ ಪ್ರತಿಪಾದನೆ ಮಾಡಬೇಕಾಗಿದೆ.

ಶ್ರೀ ಭೈರಪ್ಪನವರ ಆಲೋಚನಾ ಸರಣಿಯ ರಂಗವನ್ನು ಪ್ರವೇಶಿಸೋಣ. ಹಿನ್ನೆಲೆ-'ಮಹಾಚೈತ್ರ' ಎಂಬ ಕೆಟ್ಟ ನಾಟಕ ಕೃತಿಯೊಂದು ಕಲುಬುರ್ಗಿ ಮತ್ತು ಕುವೆಂಪು ವಿಶ್ವವಿದ್ಯಾಲಯಗಳಿಗೆ ಪಠ್ಯಪುಸ್ತಕವಾಗಿದ್ದು ಅದರ ರದ್ದತಿಗಾಗಿ ಚಳುವಳಿ ನಡೆಯಿತಷ್ಟೆ. ಬಸವ ತತ್ತ್ವಾನುಯಾಯಿಗಳ ನೋವು-ಆಕ್ರೋಶ ಗಮನಿಸಿ ಸರ್ಕಾರವು ರಾಜ್ಯ ಪಾಲರಿಗೆ ಶಿಫಾರಸು ಮಾಡಿ ಪುಸ್ತಕವನ್ನು ಪಠ್ಯಕ್ರಮದಿಂದ ರದ್ದು ಮಾಡಿತ್ತು.

(ಕರ್ಮವೀರ ಜುಲೈ, ಪುಟ 13-14)

ಸಂದರ್ಶಕರ ಪ್ರಶ್ನೆ : "ಕನ್ನಡದಲ್ಲಿ ಇಂದು ಮೂಲಭೂತವಾದಿಗಳು ಕಾಣಿಸಿಕೊಳ್ಳುತ್ತಿದ್ದಾರೆ. ಇದರ ಪರಿಣಾಮ ಏನಾಗಬಹುದು ?"

ಡಾ|| ಭೈರಪ್ಪನವರ ಉತ್ತರ : ಬುದ್ಧ, ಯೇಸು, ಮಹಮ್ಮದ್ ಇವರುಗಳ ಸತ್ಯವನ್ನು ಪ್ರಶ್ನಿಸಿದರೆ ಅವರ ಭಾರೀ ಸಂಖ್ಯೆಯ ಮತದ ಅಸ್ತಿತ್ವವೇ ಅಲುಗಾಡುತ್ತದೆ. ಆದ್ದರಿಂದ ಅವರು "ಇದು ನಮ್ಮ ಶ್ರದ್ಧೆ (faith). ಆದ್ದರಿಂದ ಯಾರೂ ಇದನ್ನು ಮುಟ್ಟಲೂ ಕೊಡಬಾರದು." ಎಂದುಬಿಡುತ್ತಾರೆ.

ಯಾವ ಮತವು ತನ್ನ ಅಸ್ತಿತ್ವಕ್ಕೆ ಒಬ್ಬ ಮತಸ್ಥಾಪಕನ ಸತ್ಯವನ್ನು ಅವಲಂಬಿಸುತ್ತದೆಯೋ ಆ ಮತದಲ್ಲಿ ವಿಚಾರಕ್ಕೆ ಅಸ್ಪದವಿರುವುದಿಲ್ಲ. ವೀರಶೈವ ಮತ, ವೀರಶೈವ ಧರ್ಮೀಯರು ಸಂಘಟಿತರಾಗುವ ಪರಿಕ್ರಮದಲ್ಲಿ ಬಸವಣ್ಣನವರನ್ನು ಅವರ ಮತ ಸೃಷ್ಟಿ ಮಾಡಿದ ಮತಸ್ಥಾಪಕನ ಮಟ್ಟಕ್ಕೆ ಏರಿಸತೊಡಗಿದರು. ಅವರನ್ನು ಟೀಕಿಸುವುದೆಂದರೆ ತಮ್ಮ ಇಡೀ ಸಮಾಜದ ಅಸ್ತಿತ್ವಕ್ಕೇ ಕುತ್ತು ಎಂಬ ಭಯ ಅವರನ್ನು ಕಾಡುತ್ತದೆ. ಆದರೆ ವಾಸ್ತವಾಂಶವೆಂದರೆ ಬಸವಣ್ಣನವರೊಬ್ಬರೇ ವೀರಶೈವ ಧರ್ಮದ ಸ್ಥಾಪಕರಲ್ಲ. ಆತ ಒಂದು ಚಳುವಳಿಯ ಪ್ರಮುಖನಾಗಿದ್ದ ಎಂಬುದನ್ನು ಗುರುತಿಸಿದರೆ ಅವರಲ್ಲಿ ಈ ಭಯಕ್ಕೆ ಕಾರಣವಿರುವುದಿಲ್ಲ. ಇದೇ ರೀತಿ ಅದ್ವೈತಿಗಳು ಶಂಕರಾಚಾರ್ಯರನ್ನು, ವಿಶಿಷ್ಟಾದ್ವೈತಿಗಳು ರಾಮಾನುಜಾಚಾರ್ಯರನ್ನು, ದ್ವೈತಿಗಳು ಮಧ್ವಾಚಾರ್ಯರನ್ನು ಮತ ಸ್ಥಾಪಕ ಸ್ಥಾನದಲ್ಲಿಟ್ಟು ಪೂಜಿಸುತ್ತಾರೆ. ಈ ಆಚಾರ್ಯರುಗಳನ್ನು ಟೀಕಿಸಿದರೆ ಅವರಿಗೂ ಕಸಿವಿಸಿಯಾಗುತ್ತದೆ. ಆದರೆ ಸಂಖ್ಯೆ, ಓಟು, ರಾಜಕಾರಣ ಮತ್ತು ಸಂಸ್ಥೆಗಳ ಬಲವಿಲ್ಲದ್ದರಿಂದ ಅವರು ತಮ್ಮ ಕಸಿವಿಸಿಗಳನ್ನು ಕೇವಲ ಗೊಣಗುವ ಮಟ್ಟದಲ್ಲಿ ಅಭಿವ್ಯಕ್ತಿಸುತ್ತಾರೆ.

ಮಾತೆ ಮಹಾದೇವಿಯಂತಹ ನಾಯಕರು ಬಸವಣ್ಣನವರನ್ನು ಮುಕ್ತ ಮನಸ್ಸಿನ ವಿಚಾರವಾದಿ ಎಂದೂ ಹೊಗಳುತ್ತಾರೆ. ಆದರೆ ವಿಚಾರವಾದಿಗೆ ಸಹಜವಾಗಿ ಇರುವ ಮಿತಿಗಳನ್ನು ತೋರಿಸ ಹೊರಟರೆ ಸಿಡಿದು ಬೀಳುತ್ತಾರೆ. ಅವರ ಕಲ್ಪನೆಯ ಬಸವಣ್ಣ ಯಾವ ವರ್ಗೀಕರಣಕ್ಕೆ ಸೇರಿದವನೆಂಬುದನ್ನು ಅವರು ಮೊದಲು ಸ್ಪಷ್ಟೀಕರಿಸುವುದು ಒಳ್ಳೆಯದು.

ಪ್ರಾಚೀನ ಹಿಂದು ಧರ್ಮಕ್ಕೆ ಇಂತಹ ಯಾವ ಸ್ಥಾಪಕನೂ ಇರಲಿಲ್ಲ. ವೇದ ಉಪನಿಷತ್ತಿನ ಋಷಿಗಳು, ಅನಂತರದ ರಾಮ, ಕೃಷ್ಣ ಮೊದಲಾದ ನಾಯಕರುಗಳು ಕೂಡ ಈ ಧರ್ಮದ ಸ್ಥಾಪಕರಲ್ಲ. ಹೀಗಾಗಿ ಇವರನ್ನೆಲ್ಲ ನಮ್ಮ ಪರಂಪರೆಯಲ್ಲಿ ಸಾಕಷ್ಟು ವಿಮರ್ಶಿಸಿದ್ದಾರೆ, ಟೀಕಿಸಿದ್ದಾರೆ. ಅವರ ಮೇಲೆ ನಾನಾ ದೃಷ್ಟಿಕೋನಗಳಿಂದ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಸಾಹಿತ್ಯ ಕೃತಿಯನ್ನು ರಚಿಸುವುದೆಂದರೆ ವಿಮರ್ಶಿಸಿದಂತೆಯೆ.ಮೂಲ ಹಿಂದೂ ಧರ್ಮಕ್ಕಿರುವ ವೈಚಾರಿಕ ಸ್ವಾತಂತ್ರ್ಯ ಈ ನೆಲೆಯದು. ಹೇಳಿರುವ ತತ್ತ್ವವನ್ನು ಅನುಭವದಿಂದ ಸಾಕ್ಷಾತ್ಕರಿಸಿಕೊಳ್ಳುವ

ತನಕ ನಂಬಬೇಡ ಎನ್ನುವ ಸ್ವಾತಂತ್ರ್ಯವನ್ನು ಗುರುತಿಸುವುದು ಈ ಧರ್ಮದ ವೈಶಿಷ್ಟ್ಯ. ದೇವರ ಅಸ್ತಿತ್ವವನ್ನು ತಿರಸ್ಕರಿಸುವವನೂ ದಾರ್ಶನಿಕನೆ. ಲೋಕಾಯತ ಮತವನ್ನು ಸ್ಥಾಪಿಸಿದ ಬೃಹಸ್ಪತಿಯನ್ನು ಕೂಡ ನಮ್ಮ ಪರಂಪರೆಯ ಋಷಿ ಎಂದು ಕರೆದು, ಅನಂತರ ಅವನ ತತ್ತ್ವಗಳನ್ನು ಖಂಡಿಸಿದೆ."

ಮುಂದಿನ ವಿಷಯ ನಮಗೆ ಸಂಬಂಧವಿಲ್ಲದುದು, ಕೆಲವು ಬರಹಗಾರರು, ಸಾಹಿತಿಗಳು 'ಮೂಲಭೂತವಾದಿಗಳು' ಎಂದು ಧಾರ್ಮಿಕ ಜನರನ್ನು ವಿಡಂಬಿಸಿ, ವ್ಯಂಗ್ಯವಾಡುವ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ಈ ಪದದ ವಿಶ್ಲೇಷಣೆ ಮಾಡೋಣ. ಇದಕ್ಕೆ ಇನ್ನೊಂದು ಅನ್ವಯಾರ್ಥದ ಪದ 'ವ್ಯವಸ್ಥೆಯ ಪ್ರೋತ್ಸಾಹಕರು' ಎಂದು. ಯಾವುದೋ ಒಂದು ವ್ಯವಸ್ಥೆ ಮಡುಗಟ್ಟಿ ನಿಂತು ಕೊಳೆತು ನಾರುತ್ತ ಜನ ಸಾಮಾನ್ಯರ ಶೋಷಣೆಗೆ ಕಾರಣವಾಗಿರುತ್ತದೆ. ಇದು ತಪ್ಪು ಇದ್ದರೂ ಅದನ್ನು ಸಮರ್ಥಿಸಿಕೊಳ್ಳುತ್ತಾ, ಅದು ಉಳಿಯಬೇಕು ಎಂದು ಪ್ರಗತಿಪರ ವಿಚಾರಗಳನ್ನು ವಿರೋಧಿಸುವವರು ಮೂಲಭೂತವಾದಿಗಳು.

ನಾವು, ಅಂದರೆ ಬಸವ ಧರ್ಮೀಯರು ಮೂಲಭೂತವಾದಿಗಳೇ ? ಸರ್ವಥಾ ಅಲ್ಲ. ಸ್ವತಃ ಬಸವಣ್ಣನವರೇ ಮೂಲಭೂತವಾದದ ವಿರುದ್ಧ ಕ್ರಾಂತಿ ಕಹಳೆಯೂದಿ ಮಡುಗಟ್ಟಿ ನಿಂತ ವ್ಯವಸ್ಥೆ ತೊಲಗಿ, ಪ್ರಗತಿಪರ ಚಿಂತನೆಯ ಶುದ್ಧಗಾಳಿ ಬೀಸಬೇಕು ಎಂದು ಹೋರಾಡಿದವರು. ನಾವು ಅದೇ ಜಾಡಿನಲ್ಲಿ ಸಾಗುತ್ತ ಜಾತಿ ಪದ್ಧತಿ ವಿರುದ್ಧ ಧ್ವನಿ ಎತ್ತಿದವರು. ಸ್ತ್ರೀ ಸಮಾನತೆ, ಎಲ್ಲರ ಸಮಾನತೆ ಪ್ರತಿಪಾದಿಸುವವರು. ಮೂಢನಂಬಿಕೆ ತೊಲಗಿ ಏಕದೇವ ಉಪಾಸನೆ ರೂಢಿಗೊಳ್ಳಬೇಕು; ವರ್ಣವರ್ಗವಾದ ತೊಲಗಬೇಕು ಎಂದು ಪ್ರತಿಪಾದಿಸಿ ಅದರಂತೆ ಪ್ರಚಾರ ಮಾಡುತ್ತ ಜನ ಜಾಗೃತಿ ಮಾಡುತ್ತಿರುವವರು. ಜನಗಳಲ್ಲಿ ಮುಕ್ತ ಮನಸ್ಸಿನಿಂದ ಚಿಂತನೆ ಮಾಡುವ ಪ್ರವೃತ್ತಿ ಬೆಳೆಯಬೇಕೆಂದು ಜನರನ್ನು ವಿಚಾರ ಮಾಡಲು ಪ್ರೇರೇಪಿಸುತ್ತಿರುವವರು. ನಮ್ಮನ್ನು ಸಂಕುಚಿತ ವಿಚಾರದವರು, ಮತಾಂಧರು ಎಂದು ಕರೆದರೆ ಅಂಥ ವ್ಯಕ್ತಿಗಳು ತಲೆಯಿಲ್ಲದವರು ಎಂದು ನಿಸ್ಸಂದೇಹಪೂರ್ವಕವಾಗಿ ಹೇಳಬಹುದು.

ನಾವು ಅನ್ಯಾಯದ ವಿರುದ್ಧ ಪ್ರತಿಭಟಿಸಲು, ಕೆಲವು ಮಂದಮತಿ ಸಾಹಿತಿಗಳು ಧರ್ಮದ ಮರ್ಮವನ್ನರಿಯದೆ, ಧಾರ್ಮಿಕ ಮಹಾಪುರುಷರ ನಿಲುವನ್ನರಿಯದೆ ಒರೆದ ಮಹಾಚೈತ್ರದಂತಹ ಕೊಳಕು ಪುಸ್ತಕದ ವಿರುದ್ಧ ಧ್ವನಿ ಎತ್ತಿದವರು. ಸಾಹಿತಿಗಳಿಗೆ ಪತ್ರಿಕೋದ್ಯಮದ ಮಾಧ್ಯಮ, ಬೆಂಬಲವಿದೆ ಎಂದು ಶಿವಪ್ರಕಾಶರಂತಹ ಮತಿಗೆಟ್ಟ ಸಾಹಿತಿಯು ವಿಕೃತ ಮನಸ್ಸಿನಿಂದ ಬರೆದ ಒಂದು ಕು–ಪತ್ಯವನ್ನು ಸಮರ್ಥಿಸಿಕೊಳ್ಳುವ ಮತಾಂಧತೆ ಅನೇಕ ಸಾಹಿತಿಗಳು ಪ್ರದರ್ಶಿಸಿದರು. ಮತಾಂಧತೆ

ಎಂದರೆ ಧಾರ್ಮಿಕ ಮತ ಕುರಿತು ಅಂಧಃಶ್ರದ್ಧೆಯಷ್ಟೇ ಅಲ್ಲ ಯಾವುದೇ ಮತ (opinion) ಕುರಿತು ಪ್ರಾಂಜಲ ಮನಸ್ಸಿನಿಂದ ಆಲೋಚಿಸದೆ ಇರುವುದು. ಪುಸ್ತಕವನ್ನು ಓದದೆ ಪಟಪಟನ ಸಮರ್ಥಿಸಿಕೊಂಡು ಹೇಳಿಕೆ ಕೊಟ್ಟ ಅನೇಕ ಸಾಹಿತಿಗಳು ಪುಸ್ತಕ ಓದಿ ಒಳಗಣ ಬಣ್ಣ ಅರಿತ ಪ್ರಾಜ್ಞ ಜನರ ಕಣ್ಣಲ್ಲಿ ನಿಜಕ್ಕೂ ಕುಬ್ಜರಾದರು.

ಆದ್ದರಿಂದ ಸತ್ಯ ವಿಶ್ವಾಸಿಗಳು, ನಿಜ ಧರ್ಮಪಾಲಕರು ಆದ ಧಾರ್ಮಿಕ ಜನರು ಅಪಕ್ವಮತಿಯ ಕೆಲವು ಸಾಹಿತಿಗಳು ಧರ್ಮವಂತರನ್ನು ಮೂಲಭೂತವಾದಿಗಳು ಎಂದು ಕರೆದ ಮಾತ್ರಕ್ಕೆ ಇವರು ವಿಚಲಿತರಾಗಬೇಕಾಗಿಲ್ಲ; ಮಾನಸಿಕವಾಗಿ ಕುಗ್ಗಬೇಕಿಲ್ಲ.

"ಬುದ್ಧ, ಯೇಸು, ಮಹಮ್ಮದ್ ಇವರುಗಳ ಸತ್ಯವನ್ನು ಪ್ರಶ್ನಿಸಿದರೆ ಅವರ ಭಾರಿ ಸಂಖ್ಯೆಯ ಮತದ ಅಸ್ತಿತ್ವವೇ ಅಲುಗಾಡುತ್ತದೆ. ಆದ್ದರಿಂದ ಅವರು ಇದು ನಮ್ಮ ಶ್ರದ್ಧೆ (faith). ಆದ್ದರಿಂದ ಯಾರೂ ಇದನ್ನು ಮುಟ್ಟಲೂ ಕೊಡ-ಬಾರದು ಎಂದು ಬಿಡುತ್ತಾರೆ." ಎನ್ನುತ್ತಾರೆ ಭೈರಪ್ಪನವರು. ಇವರು ಆ ಮಹಾಪುರುಷರ ಜೀವನವನ್ನು ಸರಿಯಾಗಿ ಓದಿದಂತೆ, ಅರ್ಥಮಾಡಿಕೊಂಡಂತೆ ತೋರದು. ಅವರ ಅನುಯಾಯಿಗಳು ಏಕಿಷ್ಟು ಭಕ್ತಿಯನ್ನು ಇಟ್ಟುಕೊಂಡಿರುತ್ತಾರೆ? ಎಂಬ ಮರ್ಮವೂ ಭೈರಪ್ಪನವರಿಗೆ ತಿಳಿದಂತೆ ತೋರದು. ಇಲ್ಲಿ ಧರ್ಮಪಿತ ಬಸವಣ್ಣನವರ ಹೆಸರನ್ನು ಭೈರಪ್ಪನವರು ಬಳಸಿಲ್ಲ; ಇಂಥದೇ ಸನ್ನಿವೇಶದಲ್ಲಿ ಮುಂದೆ ತೆಗೆದುಕೊಂಡಿದ್ದಾರೆ. ಆದ್ದರಿಂದ ನಾನು ಧರ್ಮಗುರು ಬಸವಣ್ಣನವರ ಹೆಸರನ್ನು ತೆಗೆದುಕೊಂಡು ಉತ್ತರಿಸುವೆ.

ಜಗತ್ತಿನಲ್ಲಿ ಎರಡು ಪ್ರಕಾರದ ಧರ್ಮಗಳಿವೆ. ನೈಸರ್ಗಿಕ ಧರ್ಮ, ಸುಧಾರಣಾ ಧರ್ಮ ಎಂಬುದಾಗಿ. ಸುಧಾರಣಾ ಧರ್ಮಗಳಿಗೆ ವಿಶ್ವಧರ್ಮ ಎಂಬ ವಿಶ್ಲೇಷಣ ಸೇರಿಸಲು ಸಾಧ್ಯ. ಪ್ರಚಲಿತವಿರುವ ಸ್ವತಂತ್ರ ಧರ್ಮಗಳು ಒಂಬತ್ತು. ವೈದಿಕ ಧರ್ಮ ಮತ್ತು ಯಹೂದಿ ಧರ್ಮಗಳು ನೈಸರ್ಗಿಕ ಧರ್ಮಗಳು. ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ, ಲಿಂಗಾಯತ, ಸಿಖ್, ಇವು ಸುಧಾರಣಾತ್ಮಕ ವಿಶ್ವಧರ್ಮಗಳು. ಹಿಂದೂ ಧರ್ಮ ಎಂಬ ಪ್ರಯೋಗವೇ ತಪ್ಪು. ಹಿಂದೂ ಎನ್ನುವ ಯಾವುದೇ ಒಂದು ವಿಶಿಷ್ಟ, ಸ್ಪಷ್ಟ ಧರ್ಮವಿಲ್ಲ. ಹಿಂದೂ ಮಹಾಸಭಾದ ಶ್ರೀ ವೀರಸಾವರ್ಕರ್, ವಿಶ್ವ ಹಿಂದೂ ಪರಿಷತ್ ಸಹಿತ ಈ ವಿವರಣೆ ಪ್ರತಿಪಾದಿಸುತ್ತವೆ. ಹಿಂದೂ ಕೇವಲ ಸಮೂಹವಾಚಕ ಪದ ಮಾತ್ರ, ಧರ್ಮ ವಾಚಕ ಪದವಲ್ಲ.

[ನನ್ನ ದೃಷ್ಟಿಯಲ್ಲಿ ಯೋಗಿರಾಜ ಶಿವನಿಂದ ಸ್ಥಾಪಿತವಾದ ಶೈವ ಧರ್ಮ ಒಂದು ಸ್ವತಂತ್ರ ಧರ್ಮ; ವೇದಪೂರ್ವದ ಕಾಲದ್ದು, ಹರಪ್ಪಾ-ಮೊಹೆಂಜೋ-

ದಾರೋ ಸಂಸ್ಕೃತಿಗಿಂತಲೂ ಪೂರ್ವದ್ದು. ಶಿವನೂ ಒಬ್ಬ ಮಹಾನ್ ಪ್ರವಾದಿ, ಬುದ್ಧ, ಏಸು, ಮೊಹಮ್ಮದರಂತೆ; ಬಹಳ ಅಮೋಘ ವ್ಯಕ್ತಿತ್ವ ಉಳ್ಳವನು. ಆದರೆ ಶಿವನು ಕೊಟ್ಟ ಶ್ರೇಷ್ಠ ಒಂದು ಧರ್ಮ ತನ್ನ ಮೂಲ ಸ್ವರೂಪವನ್ನೇ ಕಳೆದುಕೊಂಡು ಸಂಪೂರ್ಣವಾಗಿ ವಿಕೃತಗೊಂಡಿರುವುದರಿಂದ ಆ ಬಗ್ಗೆ ಚಿಂತನೆಯ ಆಳಕ್ಕೆ ಇಳಿಯಲು ನನಗೆ ಉತ್ಸಾಹವಿಲ್ಲ. ಈ ದೃಷ್ಟಿಯಿಂದ ನನ್ನ ತಿಳುವಳಿಕೆ ಪ್ರಕಾರ ಸ್ವತಂತ್ರ ಧರ್ಮಗಳು, ಪಾರ್ಸಿ ಧರ್ಮವೂ ಸೇರಿ ಒಟ್ಟು 10]

ಈ ಹತ್ತು ಧರ್ಮಗಳಲ್ಲಿ ನೈಸರ್ಗಿಕ ಧರ್ಮಗಳಾದ ವೈದಿಕ ಮತ್ತು ಯಹೂದಿ ಧರ್ಮಗಳಿಗೆ ಮಾತ್ರ ಸ್ಥಾಪಕರಿಲ್ಲ. ಬಾಕಿ ಎಂಟು ಧರ್ಮಗಳಿಗೆ ಸ್ಥಾಪಕರುಂಟು.

ಧರ್ಮ ಸ್ಥಾಪಕರು		ಸ್ಥಾಪಿಸಿದ ಧರ್ಮ
1. ಶಿವ	—	ಶೈವ ಧರ್ಮ
2. ಬುದ್ಧ	—	ಬೌದ್ಧ ಧರ್ಮ
3. ಮಹಾವೀರ	—	ಜೈನ ಧರ್ಮ
4. ಏಸುಕ್ರಿಸ್ತ	—	ಕ್ರೈಸ್ತ ಧರ್ಮ
5. ಮೊಹಮ್ಮದ್	—	ಇಸ್ಲಾಂ ಧರ್ಮ
6. ಬಸವಣ್ಣ	—	ಲಿಂಗಾಯತ ಧರ್ಮ
7. ಗುರುನಾನಕ	—	ಸಿಖ್ ಧರ್ಮ
8. ಝರತುಷ್ಟ್ರ	—	ಪಾರ್ಸಿ ಧರ್ಮ

ಈ ಸ್ವತಂತ್ರ ಧರ್ಮಗಳ ಪ್ರವಾದಿಗಳನ್ನು ಅವರ ಜೀವನ-ಸಾಧನೆ-ಸಂದೇಶಗಳನ್ನು ನೋಡಿದರೆ ಅವರು ದೇವರ ಸೃಷ್ಟಿಯ ಅನರ್ಘ್ಯರತ್ನಗಳು. ವಿಚಾರ ಶುದ್ಧಿ-ಆಚಾರ ಶುದ್ಧಿ, ಮಾನವ ಸಮಾಜದ ಮೇಲೆ ಅನುಕಂಪ ಮುಂತಾದ ಸದ್ಗುಣಗಳನ್ನು ಕಾಣುತ್ತೇವೆ. ಮಾನವ ದೇಹಧಾರಿಗಳು ಅಂದ ಮೇಲೆ ಏನಾದರೂ ಅಲ್ಪಸ್ವಲ್ಪ ಲೋಪಗಳು ಇರಬಹುದು. ಅಥವಾ ಒಂದು ಸಂಸ್ಕೃತಿಯ ಆಚಾರ-ವಿಚಾರಗಳ ಹಿನ್ನೆಲೆಯಲ್ಲಿ ಅನ್ಯ ಪ್ರವಾದಿಗಳ ನಡೆ-ನುಡಿ ಕೊಂಚ ವಿಲಕ್ಷಣ ಎನಿಸಬಹುದು. ಸಾಮಾನ್ಯವಾಗಿ ಧರ್ಮ ಸಂಸ್ಥಾಪಕರುಗಳು ಮಾನವರ ಅಳತೆಗೋಲಿನಿಂದ ನೋಡಿದಾಗ ಅತಿ ಮಾನವರು, ಶ್ರೇಷ್ಠರು, ನಿಷ್ಕಲಂಕ ಚರಿತ್ರರಾಗಿ ದೇವಸಾಕ್ಷಿಯ ಬದುಕನ್ನು ಬದುಕಿದ ಪಾವನಾತ್ಮರು. ಅವರು ನುಡಿದ ಮಾತುಗಳಿಗಿಂತಲೂ ಅವರ ಜೀವನವೇ ಒಂದು ಮಾದರಿ (model) ಆಗಿರುತ್ತದೆ. ಅವರ ಸಮಕಾಲೀನರು ಮತ್ತು ಅವರ ಅನುಯಾಯಿಗಳು ತಮ್ಮ ಪ್ರವಾದಿಗಳ ಸಂದೇಶ-ಜೀವನಗಳನ್ನು ಮನನ ಮಾಡುತ್ತ, ಮಾದರಿಯಾಗಿಟ್ಟುಕೊಂಡು ಬದುಕಲು ಯತ್ನಿಸುತ್ತಿರುತ್ತಾರೆ.

ದೇವರು ಸೃಷ್ಟಿಯನ್ನು ರಚಿಸಿದ್ದು ನಿಜವಾದರೂ, ಈ ಸೃಷ್ಟಿಯಲ್ಲಿ ಹೇಗೆ ಬದುಕಬೇಕೆಂಬ ಕಲೆ ಕಲಿಸಿದವರು ಧರ್ಮ ಸಂಸ್ಥಾಪಕರುಗಳು. ಇಂಥವರ ಬಗ್ಗೆ ಯಾವುದೊಂದೂ ಆಳವಾದ ಅಧ್ಯಯನವಿಲ್ಲದೆ ತಾವೇ ಪ್ರಾಜ್ಞರು, ವಿಚಾರಶೀಲರೆಂಬ ಹಮ್ಮಿನಿಂದ ಕೆಲವು ಸಾಹಿತಿಗಳು ಬರೆದರೆ, ಮಹಾಪುರುಷರ ಜೀವನದ ಬಗೆಯನ್ನರಿತವರಿಗೆ ಸಹ್ಯವಾಗುವುದಾದರೂ ಹೇಗೆ ?

ಭೈರಪ್ಪನವರು ತಿಳಿದಂತೆ ಆ ಮಹಾಪ್ರವಾದಿಗಳ ಬಗ್ಗೆ ನಂಬಿಕೆ ಸಡಲಿದರೆ ಧರ್ಮ ಶಿಥಿಲವಾಗುತ್ತದೆ ಎಂದು ನಿಷ್ಠಾವಂತ ಅನುಯಾಯಿಗಳು ತಿಳಿದಿರುವುದಿಲ್ಲ. ಯಾರ ಮಾತು ಕೇಳಿಯೋ ಅನುಯಾಯಿಗಳು ನಂಬಿಕೆ ಬೆಳೆಸಿಕೊಂಡಿರುವುದಿಲ್ಲ; ಧರ್ಮಸಂಸ್ಥಾಪಕರ ಸಂದೇಶ ತಿಳಿದೇ ಅಭಿಮಾನಿಗಳು ಅನುಯಾಯಿಗಳೂ, ಅಭಿಮಾನಿಗಳೂ ಆಗಿರುತ್ತಾರೆ. ಹೀಗಾಗಿ ಯಾರ ಮಾತೋ ಕೇಳಿ ಅವರ ಶ್ರದ್ಧೆ ಕೆಡುವುದೂ ಇಲ್ಲ. ಕೋಪ ಬರುವುದು ಏಕೆಂದರೆ, ತಮಗೆ ಪರಿಣತಿ–ಅಧ್ಯಯನ ಇಲ್ಲದ ಕ್ಷೇತ್ರದಲ್ಲಿ ಪ್ರವೇಶಿಸಿ ಕೆಲವು ಸಾಹಿತಿಗಳು ತಾವೇ ಸರ್ವಜ್ಞರೆಂಬಂತೆ ಧಾರ್ಷ್ಟ್ಯದ ಹೇಳಿಕೆ–ಅಭಿಪ್ರಾಯ ಕೊಡುತ್ತಾರಲ್ಲ, ಕಾಲ್ಪನಿಕ ಕಥೆಗಳನ್ನು ಸೃಷ್ಟಿಸುತ್ತಾರಲ್ಲಾ ಎಂಬ ಕಾರಣಕ್ಕಾಗಿ.

ಸಾಹಿತ್ಯವು ಜೀವನವನ್ನು ವ್ಯಾಪಿಸಿರುವ ಹಲವಾರು ಅಂಶಗಳಲ್ಲಿ ಕೇವಲ ಒಂದು ಅಂಶ. ಧರ್ಮವು ಇಡೀ ಜೀವನವನ್ನೇ ಬಳಸಿರುವ ಬೃಹತ್ ತತ್ತ್ವ. ಸಾಹಿತ್ಯವು ಒಂದು ಅಭಿವ್ಯಕ್ತಿ ಮಾಧ್ಯಮ ಮಾತ್ರ. ಅದು ಪ್ರಯೋಗಿಸಲ್ಪಡಬೇಕಾದರೆ ಆಯಾ ಕ್ಷೇತ್ರಗಳಲ್ಲಿ ಪ್ರಾವೀಣ್ಯತೆ ಬೇಕು. ಸಾಹಿತ್ಯವು ವಿಜ್ಞಾನ ಕುರಿತು ವಿವರಿಸುವಾಗ ಆ ಕ್ಷೇತ್ರದಲ್ಲಿ ಸಾಹಿತಿ ಪರಿಣತಿ ಹೊಂದಿರಬೇಕು. ಹೇಗೆ ಒಂದು ಮಗುವು ಹುಟ್ಟುವುದಕ್ಕೆ ಒಂದು ವಿಶಿಷ್ಟ ಜೈವಿಕ ಕ್ರಮ ಇರುವುದೋ ಒಂದು ಧರ್ಮವು ಹುಟ್ಟುವುದಕ್ಕೂ ಒಂದು ವಿಶಿಷ್ಟ ಕ್ರಮ ಇರುತ್ತದೆ. ಅತ್ಯಂತ ದುರ್ಬಲವು, ದೋಷಾತ್ಮಕವು ಆಗಿರುವ ವೈದಿಕ ಧರ್ಮದ ಜನ್ಮ–ಕ್ರಮವನ್ನೇ ಜಗತ್ತಿನ ಇನ್ನಿತರ ಧರ್ಮಗಳ ಬಗ್ಗೆ ಅನ್ವಯಿಸಿ ಮಾತನಾಡಿರುವ ಭೈರಪ್ಪನವರ ಅಭಿಪ್ರಾಯ ಧಾರ್ಷ್ಟ್ಯದಿಂದ ಕೂಡಿದ್ದು ಮಾತ್ರವಲ್ಲ ಅಪರಿಪಕ್ವತೆಯ ದ್ಯೋತಕವಾಗಿದೆ.

ತಮಗೆ ಪಾಂಡಿತ್ಯ–ಪರಿಣತಿ–ಅಧ್ಯಯನ ಆ ಕ್ಷೇತದಲ್ಲಿ ಇಲ್ಲದಿದ್ದರೂ ಅಸೀಮ ಆತ್ಮವಿಶ್ವಾಸದಿಂದ ಬರೆಯುವ ಲೇಖಕರು ಕೆಲವರಾದರೆ ಮತ್ತೆ ಕೆಲವರು ದೊಡ್ಡವರ ಬಗ್ಗೆ ಅಲ್ಲಸಲ್ಲದ್ದು ಬರೆದರೆ ತಾವು ದಿಢೀರ್ ಖ್ಯಾತಿ ಪಡೆದು ಅಂಥ ವಿವಾದಾತ್ಮಕ ಕೃತಿಗಳ ಮೂಲಕ ಬೇಗನೆ ಹಣ ಗಳಿಸಬಹುದೆಂಬ ದುರಾಕಾಂಕ್ಷೆ-

[53 ನೇ ಪುಟಕ್ಕೆ ಮುಂದುವರಿಯುವುದು]

'ವಚನ ವಸುಧಾವಲಯದ ವಾಗ್ವಟಿ ಸ್ವಾಮಿ ಲಿಂಗಾನಂದ'

—ಶಂನೋ

ತಾಯಿ ಕರುಳ ಬಳ್ಳಿ ಕಡಿದು ತೊಡೆ ಹರಿದು ಮಣ್ಣು ಮುಟ್ಟುವ ಮಗುವಿನ ನಿರುದ್ದಿಷ್ಟವಾದ ರೋದನದ ಹಿಂದೊಂದು ನಾದವಿದೆ. ಭೂಮಿಯ ಮೇಲ್ಪದರವಲ್ಲಿ ಉನ್ಮುಖವಾಗಿ ಮಲಗಿ ಅಳುವಿಗೆ ಅನುಗುಣವಾಗಿ ಶೂನ್ಯದಲ್ಲಿ ಬಡಿವ ಬಲಹೀನ ಕೈಕಾಲುಗಳ ಅಸಂಕಲ್ಪಿತವಾದ ಚೇಷ್ಟೆಯ ಹಿಂದೊಂದು ಲಯವಿದೆ. ಹುಟ್ಟುತ್ತಲೇ ಉನ್ಮುಖ ಜೀವನಕ್ಕೆ ತೊಡಗಿದ ಶೈಶವವು ದೌರ್ಬಲ್ಯಕ್ಕೆ ಪ್ರತಿಮೆ ಆಗಿ, ಮೂಳೆ ನರಗಳಲ್ಲಿ ಅಷ್ಟಷ್ಟು ಬಲ ತುಂಬುತ್ತಿದ್ದಂತೆ ಮಗುಲು ಮರಳಿಸಿ, ಕ್ರಮೇಣ ಅಧೋಮುಖವಾಗಿ ಮುಗುಚಿ ಮುಂಡಿ ಎಳೆಯುವುದು ಸೌಬಲ್ಯದ ಸಂಕೇತವಾಗುವುದು, ವ್ಯಕ್ತಿಯ ವ್ಯಕ್ತ ಜೀವನದ ಪ್ರಾಕೃತಿಕವಾದ ಅಣಕು ನಾದ, ಲಯ ಪ್ರಕೃತಿಯ ಮೂಲದ್ರವ್ಯ. ನಾದಲಯಗಳ ಪ್ರಕಾರಾಂತರ ವಿನ್ಯಾಸನನ್ನು ಕಾಡಿವೆ, ಚಿಂತನೆಗೆ ದೂಡಿವೆ. ಬಹುಶಃ ಈ ಹುಡುಕಾಟದಿಂದ ಇನ್ನೂ ವಿರಮಿಸಿಲ್ಲ. ಜೀವನ ಸಮೃದ್ಧತೆಗೆ ಬೇಕಾದ ಸಾಮಗ್ರಿಗಳ ಸಂಗ್ರಹವೂ ನಿಸರ್ಗ ಮೂಲದಿಂದಲೇ ಬರಬೇಕಾದಾಗ, ತನ್ನ ಮನೋಜೀವಿಕೆಯನ್ನು ಹದಗೊಳಿಸಿ ಸುತ್ತಲೂ ಚೆಂದವನ್ನು ಅರಸುತ್ತಾ ಚೆಲುಗಣ್ಣು ಚಲಿಸಿದಾಗ, ಒಂದೊಂದು ಸ್ವಾರಸ್ಯವನ್ನು ತನ್ನಲ್ಲಿ ಅಡಕಗೊಳಿಸಿಕೊಳ್ಳಲು ಮನುಷ್ಯ ಹವಣಿಸಿದ್ದಾನೆ. ಅನುಕರಣ, ಅನುಸರಣ, ಅನಾವರಣಾದಿ ಅವಸ್ಥಾನುಕೃತಿಗಳಿಂದ ಸಮಸ್ತ ಪ್ರಕೃತಿಯನ್ನು ತನ್ನೊಳಗೆ ಕಂಡುಕೊಳ್ಳಲು ಪ್ರಯತ್ನಿಸಿದ್ದಾನೆ. ತನ್ನಲ್ಲಿ ಎಲ್ಲವನ್ನೂ ಎಲ್ಲದರಲ್ಲಿ ತನ್ನನ್ನೂ ಕಾಣಲು ತವಕಿಸಿದ್ದಾನೆ ಪ್ರಕೃತಿಯೊಂದಿಗಿನ ತನ್ನ ಈ ಹೊಯ್ದಾಟ ಮೇಲಾಟಗಳ ನಿರಂತರ ಅನುಸಂಧಾನದಿಂದ ಸತ್ ಅಸತ್‌ಗಳ ವಿಂಗಡಣೆ ಸಾಧ್ಯವಾಗಿಸಿಕೊಂಡಿದ್ದಾನೆ. ತನ್ನ ಭಾಷೆಯನ್ನು ಕೊರೆದಾತ ಇಡೀ ಲೋಕ

> ವಿಶ್ವಕಲ್ಯಾಣ ಮಿಷನ್ ಸಂಸ್ಥಾಪಕರಾದ ಸ್ವಾಮಿ ಶ್ರೀ ಲಿಂಗಾನಂದರು ಬಸವಧರ್ಮದ ಮಹಾ ಜಗದ್ಗುರು ಪೀಠವನ್ನು ಸ್ಥಾಪಿಸಿದಾಗ ಅದಕ್ಕೆ ಸಮಾಜದ ಅನೇಕ ಪ್ರತಿಷ್ಠಿತರಿಂದ, ಮಠಾಧೀಶರುಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಈ ಸವಾಲನ್ನು ಯಶಸ್ವಿಯಾಗಿ ನಿಭಾಯಿಸಿ ಅಕ್ಕಮಹಾದೇವಿಯ ಪಟ್ಟಪರಂಪರೆಯನ್ನು ಹುಟ್ಟುಹಾಕಿದ ಕ್ರಾಂತಿಪುರುಷ.

ಜನಾಂಗಕ್ಕೊಂದು ಸಾಮಾನ್ಯವಾದ ಭಾಷೆಯನ್ನು ಅನುಶಾಸನ ಮಾಡಿಲ್ಲ. ಒಂದೊಂದು ಜನಾಂಗಕ್ಕೆ ಒಂದೊಂದು ಭಾಷೆ, ಒಬ್ಬನ ಭಾಷೆ ಇನ್ನೊಬ್ಬನಿಗೆ ಸಂವಹನಯೋಗ್ಯವಲ್ಲ. ಆದರೂ ಸಾವಿರಾರು ಯೋಜನ ದೂರದಲ್ಲಿರುವ ದಾರ್ಶನಿಕರ ಚಿಂತನೆ ಬಹುತೇಕ ಸಾಮ್ಯವಾದುದು ಅಚ್ಚರಿಯ ಸಂಗತಿ. ನಾವೀಗ ಸರಳೀಕರಿಸಿ ಹೇಳುವ ಆಸ್ತಿಕ ನಾಸ್ತಿಕ ವಿಚಾರಧಾರೆಗಳೂ ಅನ್ಯಾನ್ಯ ಜನಾಂಗಗಳಲ್ಲಿ ಒಂದೇ ರೀತಿ ಇರುವುದೂ ಗಮನಾರ್ಹವಾಗುತ್ತದೆ. ಅಂದರೇನಂದಾಯಿತು ?

> ಕೃಷ್ಣಾನದೀ ತೀರದ ಶ್ರೀಶೈಲಕ್ಕೊಮ್ಮೆ ಹೋಗಿ ಬರುವಾಗ ಹಾದಿಯಲ್ಲಿ ತೀವ್ರ ಅಸ್ವಸ್ಥನಾಗಿದ್ದ ಸಜ್ಜನ ಸಾಧಕನೊಬ್ಬನನ್ನು ಹೆಗಲ ಮೇಲೆ ಹೊತ್ತು ಮೈಲಿಗಟ್ಟಲೆ ನಡೆದೇ ಚಿಕಿತ್ಸೆಗೆ ಏರ್ಪಾಡು ಮಾಡಿದ್ದು ಸ್ವಾಮಿ ಶ್ರೀ ಲಿಂಗಾನಂದರ ಮಾನವೀಯತೆಗೆ ಹಿಡಿದ ಹೊಳೆಗನ್ನಡಿ.

ಲೋಕ ಹಿತಕಾಂಕ್ಷಿಗಳು ಎಲ್ಲೇ ಇದ್ದರೂ ಅವರ ಚಿಂತನಕ್ರಮ, ಚಿಂತನಫಲಿತ ಪರಸ್ಪರ ಅನುಗುಣವಾಗಿರುತ್ತದೆ. 'ಮೊದಲೊಂದು ವಾಕ್ಯವಿತ್ತು, ಅದು ದೇವರ ಬಳಿಯಲ್ಲಿತ್ತು. ಅದೇ ದೇವರಾಗಿತ್ತು' ಎಂಬ ಬೈಬಲ್ಲಿನ ವರ್ಣನೆಗೂ 'ಓಮಿತ್ಯೇಕಾಕ್ಷರಂ ಬ್ರಹ್ಮ' ಎಂಬ ಉಪನಿಷದ್ವರ್ಣನೆಗೂ ಏನಾದರೂ ವ್ಯತ್ಯಾಸ ಕಂಡೀತೇ? ಭಾಷೆ ಇನ್ನೂ ವೈಯಕ್ತಿಕವಾಗಿ ಬೆಳೆಯುವ ಸ್ಥಿತಿಯಲ್ಲಿ ತನಗೆ ತಾನೇ ಅದು ಜಿಡುಕಾಗಿ ಜಗುಟಾಗಿ ಹ್ರಸ್ವವಾಗಿರುವ ಸಾಧ್ಯತೆ ಇದ್ದು, ಮುಂದೆ ಶಾಖೋಪಶಾಖೆಗಳಾಗಿ ಭಾಷೆ ಬೆಳೆದಂತೆ, ಶಬ್ದ ಭಂಡಾರವೂ ಬೆಳೆಬೆಳೆದು, ವಾಕ್ಯ ರಚನೆ, ಪ್ರಯೋಗ ಗ್ರಹಿಕೆಗಳಲ್ಲಿ ಸರಳತೆ ಸುಭಗತೆ ಬಂದು, ತನ್ನ ಗಡಸುತನವನ್ನು ಗಂಭೀರತೆಯನ್ನು ಸಾಕಷ್ಟು ನೀಗಿಕೊಂಡುದು ಭಾಷಾ ಚರಿತ್ರೆಯಿಂದ ನಮಗೆ ತಿಳಿದು ಬರುತ್ತದೆ. ಭಾಷೆ ಸಲಿಲವಾದ ಮಾತ್ರಕ್ಕೆ ವಿಷಯದ ವಸ್ತುವಿನ ಗಹನತೆಯೇನೂ ಗೌಣವಾಗುವುದಿಲ್ಲ. ಬದಲಿಗೆ, ಚರ್ಚೆಗೊಳಪಡುವ ವಸ್ತುವಿನ ಕುರಿತು ತಮ್ಮದೇ ಶಬ್ದಗಳಲ್ಲಿ ಯೋಚಿಸುವ ಮಾತಾಡುವ ಜನಸಾಮಾನ್ಯರ ಸಂಖ್ಯೆ ಕಾಲದೊಂದಿಗೆ ಬೆಳೆಯುತ್ತಾ ಹೋಗುತ್ತದೆ ಅಥವಾ ತನ್ನ ಕಾಲದ ಜನರ ಭಾಷೆಯ ಮಟ್ಟವನ್ನೂ ಭಾವದ ತೀವ್ರತೆಯನ್ನೂ ಗ್ರಹಿಸಬಲ್ಲ ಒಬ್ಬ ಮೇಧಾವಿ, ಆ ಜನರ ಆಡುಮಾತಿನ ಲಯದಲ್ಲಿ ಶಬ್ದದ ನಾದದಲ್ಲಿ ಆ ಅಷ್ಟು ಪ್ರವಚನನ್ಯಗ್ರೋಧ ಶ್ರೀ ಲಿಂಗಾನಂದರು. ಬಸವ ವಚನದ ವಕ್ತಾರರಾಗಿ ಶ್ರೀಗಳು ಬೆಳೆದದ್ದು ಅಭಿಜಾತ ಸಂಸ್ಕಾರದಿಂದಲೂ ಅಲ್ಲ, ಸಂಕಲ್ಪದಿಂದಲೂ ಅಲ್ಲ; ತಾನು ಹುಟ್ಟಿದ ಬಿಜಾಪುರ ಜಿಲ್ಲೆಯ ಬಿಸಿಲಿನಷ್ಟೇ ತಾಪದಾಯಕವಾದ ಪರೇಚ್ಛಾಪ್ರಾಪ್ತವಾದ

ನಿರ್ಧನತೆಯಿಂದ ವ್ಯಗ್ರವಾದ ಸಂಗಮೇಶನ (ಪೂರ್ವಾಶ್ರಮದ ಹೆಸರು) ಮನಸ್ಸು ವಾಲಿದ್ದು, ಒಲಿದದ್ದು ಕಾರ್ಲ್ ಮಾರ್ಕ್ಸ್‌ನ ಸಾಮ್ಯವಾದವನ್ನು. ತನ್ನ ಹಾಗೂ ತನ್ನ ಸುತ್ತಲಿನ ಸಮಾಜದ ಅಸಾಮಂಜಸ್ಯಕ್ಕೆ, ಅಸಮತೆಗೆ, ವಿಷಮತೆಗೆ ಸಿಡಿದು, ದೇವರನ್ನು ಧರ್ಮವನ್ನು ದೂರೀಕರಿಸಿ, ಸಾಮ್ಯವಾದಿಗಳಾದ ಧುರೀಣರ ಉಪನ್ಯಾಸದಿಂದ ಪ್ರಭಾವಿತರಾಗಿ ಕ್ರಾಂತಿಯ ಕನಸು ಕಾಣುತ್ತಾ ಕಾಲೇಜಿಗೆ ಹೋಗುವ ಏರುಜವ್ವನದಲ್ಲಿ ತತ್ವಜ್ಞಾನ ಪ್ರಾಧ್ಯಾಪಕ ಶ್ರೀ ರಾಜಗೋಪಾಲರ ಸಾಮಯಿಕವಾದ ಉದ್ಬೋಧಕವಾದ ತತ್ವಾರ್ಥ ದರ್ಶನದಿಂದ ಸಂಗಮೇಶನ ವಿಚಾರದ ಹಾದಿ ಕೂಡಲ ಸಂಗಮನ ಹಜ್ಜೆಯತ್ತ ಹೊರಳಿದ್ದು ಒಂದು ಕ್ರಾಂತಿಪಥ. ಅಂದಿನಿಂದ ಸ್ವಂತ ಮೌನದಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಂಡು, ಬಸವ ತತ್ವ ಚಿಂತನೆಯೊಂದಿಗೆ ನಿತ್ಯಾನುಸಂಧಾನ ಮಾಡುತ್ತಾ ಅಂತರ್ಮುಖಿಯಾಗಿ ಬಸವ ದರ್ಶನಕ್ಕೆ ತಪಿಸುತ್ತಾ ಪರಿತಪಿಸುತ್ತಾ ಬಸವ ವಚನ ಸುಧಾ ಸಮುದ್ರದಲ್ಲಿ ಮಿಂದು ಮುಳುಗಿ ಮೇಲೆದ್ದಾಗ ಬಸವಣ್ಣನವರ ಕಾರಣ ಶರೀರವನ್ನು ತನ್ನೊಳಗೆ ಕಂಡ ಪರಮ ಧನ್ಯತೆ ಸಂಗಮೇಶನಿಗೆ. ತನ್ನಲಿಯೇ ಬಸವನುಲಿಯಾಗಿ, ಬಸವನ ದನಿಗೆ ತಾನು ತುಟಿಯಾಗಿ, ಬಸವನ ನೋಟಕ್ಕೆ ತಾನು ಕಣ್ಣಾಗಿ, ಬಸವ ಪ್ರಭಾವಲಯದಲ್ಲಿ ತನ್ನ ನೆರಳನ್ನು ಕಂಡ ಅವಿನಾಭಾವದಿಂದ ಪುಲಕಿತನಾದ, ತನ್ನ ಒಳಗಲ್ಲಿ ಬಸವಣ್ಣನನ್ನು ಅನುಸಂಧಾನಿಸುವ ಅನುಭಾವಿಸುವ ಪರಿವೃತ್ತಿ ಬೆಳೆದು ತನಗೆ ತಾನೇ ಜ್ಞಾನದೀಕ್ಷೆಯನ್ನು ಕೊಟ್ಟು ಕಾಷಾಯ ವಸ್ತ್ರವನ್ನು ಉಟ್ಟು ಲಿಂಗಾನಂದರಾಗಿ ರೂಪಾಂತರಗೊಂಡು ಪ್ರಪಂಚಮುಖರಾಗಿ 1956 ರಲ್ಲಿ ಸ್ವಯಂ ಕ್ರಾಂತಿಯ ಮೊದಲ ಹೆಜ್ಜೆ ಇಟ್ಟರು.

> ಊರೂರು ತೆರಳಿ, ಮನೆಮನೆಗೆ ಪ್ರಚಾರ ಮಾಡಿ ಶ್ರೀ ಲಿಂಗಾನಂದರು ನಡೆಸುತ್ತಿರುವ 'ಜ್ಞಾನ ದಾಸೋಹ'ವನ್ನು ಪಟ್ಟಿ ಮಾಡಿಟ್ಟರೆ ಗಿನ್ನಿಸ್ ದಾಖಲೆಗೆ ಮತ್ತೊಂದು ಸುವರ್ಣ ಪುಟ ಸೇರಬಹುದು.

ತಿಳಿವಿನ ಹೊಳಹಿಗಾಗಿ ಸ್ವಾಧ್ಯಾಯ, ತಪಸ್ಸು, ಯೋಗಗಳ ನಿಯಮ ಬದ್ಧ ಜೀವನದಿಂದ ಅಂತರ್ನಿರೀಕ್ಷೆ. ಆತ್ಮ ಬಲದೊಂದಿಗೆ ವೈಚಿತ್ರ್ಯಗಳಿಂದ ಶಾಶ್ವತೀ ಪ್ರಕೃತಿಯು ನವನವೋನ್ಮೇಷ ಶಾಲಿನಿಯಾಗಿ, ಇರುಳಿಂದ ಬೆಳಗಿಗೆ, ಬೆಳಗಿಂದ ಬೈಗಿಗೆ ಇನ್ನಿನ್ನೂ ಗೂಢವಾಗುತ್ತಾ, ನಿಗೂಢವಾಗುತ್ತಾ ಮಾಯಾ ಮರೀಚಿಕೆಯಾಗುತ್ತಿರುವುದರಿಂದ, ಹುಟ್ಟಿನ ಹೊಲಬಿನ ಹುಡುಕಾಟಕ್ಕೆ ಹಟ ಹೊತ್ತು ಹೊರಟ ಪ್ರಜ್ಞಾವಂತ ಮಾನವ ತನ್ನ ನಡೆಯಲ್ಲಿ ಇನ್ನೂ ತಡೆ ಕಂಡಿಲ್ಲ. ಚೇತನಾಂಗಣದಲ್ಲಿ ನಿಸರ್ಗ

ದೊಂದಿಗೆ ಪ್ರುಚ್ಚನ್ನ ಸಮರವನ್ನೇ ಹೂಡಿ ಹೊಯ್ದಾಡಿದ್ದಾನೆ. ತನ್ನ ಚರ್ಮ ಚಕ್ಷು-ವಿಗೆ ಕಾಣುವ ನೈಸರ್ಗಿಕ ವೈವಿಧ್ಯದ ಅನಂತ ವಿಶಾಲತೆಯನ್ನು ಬೆರಗಣ್ಣಿನಿಂದ ಕಾಣ ಕಾಣುತ್ತಾ, ಪ್ರಜ್ಞಾಪಾಟವದಿಂದ, ಮೇಲು ನೋಟಕ್ಕೆ ಕಾಣುವ ಈ ವೈವಿಧ್ಯದ ಹಿಂದಿರಬಹುದಾದ ಏಕಸೂತ್ರತೆಯನ್ನು ಗುರುತಿಸಲು ಶೋಧಿಸಲು, ನೇಯಲು, ಹೆಣೆಯಲು ಹೆಣಗಿದ್ದಾನೆ. ವೈದಿಕ ಋಷಿಯಿಂದ ಹಿಡಿದು ಈ ಹೊತ್ತಿನ ಈ ಕ್ಷಣದ ಒಬ್ಬ ಸಾಮಾನ್ಯ ಕುತೂಹಲಿಯ ತನಕ ಪ್ರಶ್ನದಾಹ ತಣಿದಿಲ್ಲ. ಮನುಷ್ಯ ಹೊರಗಣ್ಣು ಬಿಟ್ಟು ಕಂಡಂದಿನಿಂದಲೂ ಕೋಗಿಲೆಯ ಕೊರಳುಲಿಯ ಪಂಚಮ ಶ್ರುತಿ ತಗ್ಗಿಲ್ಲ; ತಪ್ಪಿಲ್ಲ.

> ಬಾಲ್ಯದಿಂದಲೇ ಸ್ವಾಮಿ ಲಿಂಗಾನಂದರು ಸಾಹಸಿ, ಕ್ರೀಡಾ ಮನೋಭಾವದ ವ್ಯಕ್ತಿ. ಶಾಲೆ-ಕಾಲೇಜುಗಳಲ್ಲಿ ಅನೇಕ ಪಂದ್ಯಗಳಲ್ಲಿ ಪಾಲ್ಗೊಂಡು ಪ್ರಶಸ್ತಿ ಪಾತ್ರರಾದವರು. ಈಜಿನಲ್ಲೂ ಮುಂದು, ಮಕ್ಕಳ ತಂಡದ ಮುಂದಾಳ್ತನ ವಹಿಸುತ್ತಿದ್ದರು.

ಮಾನಮಹತಾಂ ಅಗ್ರೇಸರ: ಕೇಸರೀ ಎನಿಸಿಕೊಂಡ ಸಿಂಹದ ಗರ್ಜನೆಯ ಗಾಂಭೀರ್ಯ ಕಳೆದಿಲ್ಲ; ಕೊಳೆತಿಲ್ಲ. ಕಲಾಕೌಶಲ್ಯಕ್ಕೆ ಯಾವತ್ಕಾಲವೂ ಸವಾಲಾದ ನವಿಲಿನ ಬಿಚ್ಚುಗರಿಯ ಬೆರವಡುವ ಬಂಧುರವಾದ ಬಣ್ಣ ಕುಂದಿಲ್ಲ; ಸಂದಿಲ್ಲ. ಮನಸ್ಸಿಗೆ ಮೂರ್ತರೂಪಕವನ್ನು ಗಿಟ್ಟಿಸಿಕೊಂಡ ಮರದ ಮೇಲಿನ ಮಂಗದ ಮುಖ ಮುದ್ರೆಯಲ್ಲಿ ಯಾವುದೇ ಸುಧಾರಣೆ ಆಗಿಲ್ಲ; ಸಾಗಿಲ್ಲ. ಬೀಸುವ ಗಾಳಿಯ ಸದ್ದು, ಕುಣಿದು ಕುಪ್ಪಳಿಸಿ ಕುಲುಕುಲು ಹರಿವ ನೀರಿನ ನಾದ, ಹೆಮ್ಮರಗಳ ಗರ್ಭ ನಿರ್ಭೇದಿಸಿ ಚಿಟ್‌ಚಿಟ್ ಚಿಟಿಲೆಂದು ಸಿಡಿದು ಆರ್ಭಟಿಸುವ ಕಾಳ್ಗಿಚ್ಚಿನ ಪ್ರಖರತೆ, ಅಗೆದಗೆದು ಉತ್ತಿಬಿತ್ತಿದಷ್ಟು ಬಂದಷ್ಟು ಬೆಳೆಕೊಡುವ ಭೂಮಿಯ ಸ್ಥಿರತೆ, ಅನೂಹ್ಯಕ್ಕೆ ಅಚ್ಚರಿಯಾಗಿ ಅಪ್ರಮೇಯಕ್ಕೆ ಆಧಾರವಾದ ಆಕಾಶದ ಅನಂತತೆಗಳನ್ನು ಮನುಷ್ಯ ಅದೇ ಬೆರಗಲ್ಲಿ ಸೊಬಗಲ್ಲಿ ಅಂದಿನಿಂದಲೂ ಕಾಣುತ್ತಾ ಬಂದಿದ್ದಾನೆ.

ಮನೋ ಜೀವಿಕೆಯಿಂದಾಗಿ, ಮನೋ ಭೂಮಿಕೆಯಿಂದಾಗಿ ತನಗೂ ಶಿಷ್ಟ ಪ್ರಕೃತಿ ಪ್ರಪಂಚಕ್ಕೂ ಇರುವ ವ್ಯತ್ಯಾಸವನ್ನು, ಅಂತರವನ್ನು ಸ್ಪಷ್ಟವಾಗಿ ಗುರುತಿಸಿದಾಗಿ-ನಿಂದ, ಸೃಷ್ಟಿಯಲ್ಲಿರುವ ವಿವಿಧತೆಯ ನಡುವಿನ ಏಕತೆ, ಏಕತಾನದ ಒಳಗಿನ ವಿತಾನಗಳು ಪ್ರಜ್ಞಾವಿಶಿಷ್ಟನಾದ ಮಾನವ ಪ್ರಶ್ನಮಾರ್ಗಕ್ಕೆ ತರ್ಕಪಂಥಕ್ಕೆ ಅಭಿವ್ಯಕ್ತಿಯಾಗಿ ಭಾಷೆಯನ್ನು ರೂಪಿಸಿಕೊಂಡಿದ್ದಾನೆ, ರೂಢಿಸಿಕೊಂಡಿದ್ದಾನೆ. ಭಾಷೆಯು ಬೆಟ್ಟ ಬೃಹತ್ತಾಗಿ ಬೆಳೆಯುತ್ತಿದ್ದಂತೆ, ಶಬ್ದಗಳ ಮೂಲಿಕೆಗಳು ಅಸಂಖ್ಯವಾಗಿ ಚಿಗುರೊಡೆದು ಮಾತನಾಡುವ ಸೌಕರ್ಯವುಳ್ಳ ಮನುಷ್ಯನ ಬಾಯಿ ಭಾಷಾ ಸಂಜೀವಿನಿಗೆ

ಹೆದ್ದಾರಿ ತೋರಿತು. ಮನುಷ್ಯನ ಮನೋರಂಗದಲ್ಲಿ ಪ್ರಜ್ಞಾ ನಿರ್ದೇಶದಲ್ಲಿ ಭಾಷೆ ಕುಣಿದಾಗ ಮಣಿದಾಗ ಪ್ರಕೃತಿಯ ಗೂಢವನ್ನು ಬಗೆವ ಬಗೆಯ ಸುಳುಹು ಸಿಕ್ಕಿತು. ಪ್ರತ್ಯಕ್ಷ ಅನುಮಾನ ಉಪಮಾನ ಶಬ್ದಾದಿ ಪ್ರಮಾಣಗಳನ್ನು ಅಂಗೀ-ಕರಿಸಿ ಜ್ಞಾನವನ್ನು ವಿಸ್ತರಿಸಿ ವಿಜ್ಞಾನಕ್ಕೆ ಲಗ್ಗೆಯಿಟ್ಟು ಪ್ರಜ್ಞಾಸ್ತರವನ್ನು ಇನ್ನಿನ್ನೂ ಎತ್ತರಿಸುತ್ತಾ ಹೋದ. ಆದಿಸಿಯೂ ಅರಿವಿಗೆ ಬಾರದ, ಅನುಭವಕ್ಕೆ ತಾಗಿಯೂ ಅಭಿವ್ಯಕ್ತಿಗೆ ಸಿಕ್ಕದ ಅವ್ಯಕ್ತ ಭಾವವನ್ನು, ಅನಾಹತ ನಾದವನ್ನು ಶತಶತಮಾನಗಳುದ್ದಕ್ಕೂ ಶಬ್ದಗಳ ಮೂಲಕ ಅನುಮಾನಿಸುತ್ತಲೇ ಬಂದ. ವಿಜ್ಞಾನದಲ್ಲಿ ಪರಾಕಾಷ್ಠವಾದ ಪರಿಣತಿ ಗಳಿಸಿದರೂ ಆರ್ಷ ವಿಜ್ಞಾನಿಗಳ ಸತ್ಯದರ್ಶನ ಧ್ವನಿಯ ಅರ್ಥವಾಗದೆ, ಆರ್ತತೆ ಈಗಲೂ ಮುಂದುವರಿಯುತ್ತಿದೆ. ಯಾವ ಸಿದ್ಧ ಸಮೀಕರಣಕ್ಕೂ ಸಿಕ್ಕದ ದಕ್ಕದ, 'ಸಂಸ್ಕಾರ' ಎಂಬ ಸಂಸ್ಕೃತಿ ಸಂಬಂಧಿ ದ್ರವ್ಯ ಎಲ್ಲ ವೈಜ್ಞಾನಿಕ ವೈಚಾರಿಕವಾದ ತರ್ಕೋಪತರ್ಕಗಳಿಂದ ಆಚೆ ನಿಲ್ಲುತ್ತದೆ.

> 70 ರ ದಶಕದಲ್ಲಿ ಬೀದರ್‌ನ ಪ್ರತಿ ಹಳ್ಳಿ ಹಳ್ಳಿಯಲ್ಲೂ ಪಾದ-ಯಾತ್ರೆ ನಡೆಸಿ ಧರ್ಮ ಜ್ಞಾನ ದಾಸೋಹ ಕೈಗೊಂಡಿದ್ದು ದೀಕ್ಷಾ ಸಂಸ್ಕಾರ ನೀಡಿ ಅಲ್ಲಿನ ಜನರಿಗೆ ಈಗಲೂ ಪ್ರಾತಃಸ್ಮರಣೀಯ-ರಾಗಿದ್ದಾರೆ.

ಪಶು ಪಕ್ಷಿ ಪ್ರಾಣಿ ಪ್ರಪಂಚದಿಂದ ಒಂದೊಂದು ಸಂಸ್ಕಾರ ವಿಶೇಷವನ್ನು ಗಮನಿಸಿ, ಅದೇ ಭಾವದ್ರವ್ಯ ಮನುಷ್ಯನಲ್ಲೂ ಸರಿಸಮವಾಗಿಯೋ ಸರಿಮಿಗಿಲಾಗಿಯೋ ಇರುವುದನ್ನು ದೃಢೀಕರಿಸಿದ ಪೂರ್ವಸೂರಿಗಳು ಮಾನುಷೀ ವ್ಯವಹಾರಕ್ಕೆ ಸದಾಚಾರ ಸಂಹಿತೆಯನ್ನು ಬಹು ಎಚ್ಚರದಿಂದ ರೂಪಿಸಿದರು. ಪ್ರಪಂಚದ ಬೇರೆ ಬೇರೆ ಕಡೆ, ಬೇರೆ ಬೇರೆ ಕಾಲಗಳಲ್ಲಿ ಕಾಣಿಸಿಕೊಂಡ ಕ್ರಾಂತದರ್ಶಿಗಳು ರೇಖಿಸಿದ ಜೀವನಸಂಹಿತೆ ಹೆಚ್ಚು ಕಡಿಮೆ ಒಂದೇ ತೆರನಾದದು. ಸೆಲೆ ಒಂದೇ ತೊರೆ ಬೇರೆ. ತಾನು ಪ್ರತ್ಯಕ್ಷ ಕಂಡ ಪ್ರಕೃತಿಯ ಸ್ವನಿಯಂತ್ರಿತ ನಾದಲಯದ ಹಿಂದೆ ಖಚಿತವಾಗಿಯೂ ಒಂದು ನಿಯಾಮಕ ವ್ಯವಸ್ಥೆ ಇರಬೇಕೆಂಬ ಅನುಮಾನಾಪತ್ತಿ ಬಹುಶೇಕ ಜಗತ್ತಿನ ಎಲ್ಲಾ ದಾರ್ಶನಿಕರ ದನಿಯಲ್ಲೂ ಕಾಣಸಿಗುತ್ತದೆ. ತನ್ನ ಕಂಠದ ಧ್ವನಿಗೆ ಅಕ್ಷರ ರೂಪವನ್ನು ಕೊಟ್ಟು ಜನರನ್ನು ಸೆಳೆವ ಯುಗಶಕ್ತಿಯಾಗಿ ಮೂಡಿ ಬರುತ್ತಾನೆ. ಪ್ರಾಯಶಃ ಪ್ರಪಂಚದ ಯಾವುದೇ ದೇಶದ ಸಾಂಸ್ಕೃತಿಕ ಪತನೋನ್ನತಿಯ ಚರಿತ್ರೆಯಲ್ಲಿ ಇಂತಹ ಮಹಿಮಾನ್ವಿತ ವ್ಯಕ್ತಿಗಳನ್ನು ಕಾಣಬಹುದಾಗುತ್ತದೆ. ಅಂತಹ ವ್ಯಕ್ತಿತ್ವ ಕಾಲದ ಅಗತ್ಯವಾಗಿ, ಕಾಲದ ಮಾಪಕವಾಗಿ, ಕಾಲದ ಪರಿಸ್ಫೋಟವಾಗಿ ಹೊಮ್ಮುತ್ತದೆ.

ಇಂತಹ ಸ್ಫೋಟ ಕರ್ನಾಟಕದಲ್ಲಿ 12 ನೇ ಶತಮಾನದಲ್ಲಿ ಬಸವಣ್ಣನವರ ಮೂಲಕ ಆದದ್ದು ಈಗ ಇತಿಹಾಸ, ಬಸವಣ್ಣನವರು ತಮ್ಮ ಕಾಣ್ಕೆಯನ್ನು ಜನರಿಗೆ ಒಪ್ಪಿಸಿದ್ದೂ 'ವಚನ' ದ ಮೂಲಕ–ಅಂದರೆ ಮಾತಿನ ಮೂಲಕ, ಕ್ರಾಂತದರ್ಶಿಗಳಾದ ಬಸವಣ್ಣನವರ ವಚನಗಳಲ್ಲಿರುವ ತತ್ವವನ್ನು, ತಥ್ಯವನ್ನು ಮಥಿಸಿ ಜನರಿಗೆ ಮೊಗೆದು ಕೊಟ್ಟವರು ಶ್ರೀ ಲಿಂಗಾನಂದ ಸ್ವಾಮಿಗಳು ಎಂಬುದು ಅವರ ಪ್ರವಚನದಿಂದ ಪ್ರಭಾವಿತರಾದವರ ಪೂತರಾದವರ ಶ್ರದ್ಧೋದ್ಗಾರ.

ಪ್ರವಚನವನ್ನೇ ಪ್ರಧಾನವಾದ ಕಾಯಕವನ್ನಾಗಿ ಮಾಡಿಕೊಂಡು ಬದುಕಿನುದ್ದಕ್ಕೂ ತಾನು ಬೆಳೆದು ತನ್ನವರನ್ನೂ ಬೆಳೆಸಿದ ವಚನ ಶರೀರ ಶ್ರೀಗಳದ್ದು. ತಂತಾನೇ ಹಬ್ಬಿ ಉಬ್ಬಿ ಹಿಗ್ಗಿ ನುಗ್ಗಿ ಸರ್ವತೋಮುಖವಾಗಿ ಬೆಳೆದ ಬೀಜಕಗರ್ಭದಿಂದ ಕುಡಿಯೊಡೆದ ದೈವ ಬಲವನ್ನೂ ಸಂಪಾದಿಸಿ ಪುಟಕ್ಕಿಟ್ಟ ಚಿನ್ನವಾಗಿ, ಛಿನ್ನಸಂಶಯರಾಗಿ ಬಸವ ತತ್ತ್ವವನ್ನು ಆಪಾದತಃ ಗರ್ಭೀಕರಿಸಿಕೊಂಡು ಧರ್ಮಧ್ವಜ ಸಂರಕ್ಷಣೆಗೆ ದೀಕ್ಷಾಬದ್ಧರಾಗಿ ಅಕ್ಷರಶಃ ಜಂಗಮರಾದರು. ಬಸವಾದಿ ಪ್ರಮಥರ ವಚೋವೃಕ್ಷದ ಟೊಂಗೆಯಲ್ಲಿ ಕುಳಿತು ವಚನ ಗೀತವನ್ನು ಈಂಟಿದ ಕೋಗಿಲೆಯಾದ ಲಿಂಗಾನಂದರು ವಿದ್ಯುಕ್ತವಾಗಿ ಕ್ರಿಯಾ ಸನ್ಯಾಸವನ್ನು 1961 ರಲ್ಲಿ ಸುತ್ತೂರು ಶ್ರೀಗಳಿಂದ ಪಡೆದರು.

ಶರಣರ ವಚನ ಆಶರ-ಚರಣರ ಪದಾಘಾತದಿಂದ ವಿಕೃತವಾದುದನ್ನು ವಿವರ್ಣವಾದುದನ್ನು ಕಂಡು ವ್ಯಸ್ತರಾದ ಲಿಂಗಾನಂದರು, ವಚನದ ಯಾಥಾರ್ಥ್ಯವನ್ನು ಜನರ ಮನದಲ್ಲಿ ಮಂಡಿಸುವ ಮೂಡಿಸುವ ತುರ್ತನ್ನು ಮನಗಂಡು ನಿತ್ಯಂಚರರಾಗಿ ಇದುತನಕ ಜ್ಞಾನದಾಸೋಹ ನಡೆಸಿಕೊಂಡು ಬರುತ್ತಿದ್ದಾರೆ.

ತಾನಿದ್ದಲ್ಲಿಗೆ ಜನ ಬರುವುದಲ್ಲ, ಜನರೆಡೆಗೆ ತಾನು ತೆರಳಬೇಕು ಎಂಬ ವಿದ್ವದ್ವಿನಯದಿಂದ ನಾಡಿನ ಮೂಲೆ ಮೂಲೆಗೆ, ಹಳ್ಳಿ ಹಳ್ಳಿಗೆ, ನಗರ–ಮಹಾನಗರಗಳಿಗೆ ಹೋಗಿ ತಿಂಗಳು ತಿಂಗಳು ಪ್ರವಚನ ನಡೆಸಿದ್ದಾರೆ. ವಚನ ಸಾಹಿತ್ಯ ಹೇಗೆ ಜನದನಿಯಿಂದ ರೂಪೊಡೆಯಿತೋ, ಅದೇ ರೀತಿ ಶ್ರೀಗಳವರು ಈಗ ಆ ವಚನ ಸಾಹಿತ್ಯವನ್ನು ಜನಮನದಲ್ಲಿ ಸ್ಥಿರೀಕರಿಸಿ, ಸರಳ ವಚನಗಳ ಸುಲಭಾರ್ಥವನ್ನೂ, ಅದರ ಒಡಪನ್ನೂ ಜನರ ಆಡುಮಾತಿನಲ್ಲಿ, ದಿನದಿನದ ನಿತ್ಯೋದಾಹರಣೆಗಳಲ್ಲಿ, ಇನಿತಿಷ್ಟೂ ಬೇಸರ ಬರದಂತೆ ಹೆಚ್ಚೇಕೆ–ಉತ್ಸಾಹ ಉಕ್ಕುವಂತೆ ಪ್ರವಚನ ಮಾಡುವುದನ್ನು ಅವರ ಶ್ರೋತಾರರು ಎದೆ ಹನಿದು ನೆನೆಯುತ್ತಾರೆ.

ಮಾನವೀಯಂತೆಯಿಂದ ಮೈಯೊಡೆದ ಶ್ರೀಗಳ ಮನನ ಚಿಂತನ ಬಸವಣ್ಣ, ಪರಮಹಂಸ, ವಿವೇಕಾನಂದ, ಗಾಂಧೀಜಿ, ರಮಣ ಮಹರ್ಷಿ, ಬುದ್ಧೇತ್ಯಾದಿ. ಮಹನೀಯರ ದರ್ಶನ ಧ್ವನಿಯಿಂದ ತತ್ತ್ವೋದಾರತೆಯಿಂದ ಪರಿಪುಷ್ಟವಾಗಿದೆ.

ಸುವಿಚಾರ ಪರಿಪ್ಲುತವಾದ ಧೀಮಂತಿಕೆ ಸ್ವಯಂಭೂ ಆಗಿ ಇರುವುದರಿಂದಲೇ ಸ್ಥೈರ್ಯವೂ ಸ್ಥಾಯಿಗುಣವಾಗಿ ಮೈಗೂಡಿದೆ. ಆದ್ದರಿಂದಲೇ, ಇವರ ಉತ್ಕರ್ಷ ಹೇತುಗಳಾದ ವಿರೋಧಿಗಳ ಭೇರೀನಾದವನ್ನು ಒಬ್ಬೆರಳಲ್ಲಿ ಒತ್ತಿ ಹಿಡಿದು, ಜಗತ್ತು ಇದುತನಕ ಕಾಣದ ಕೇಳದ ಮಹಿಳಾ ಜಗದ್ಗುರು ಪೀಠವನ್ನು ಸಂಸ್ಥಾಪಿಸಿ ಮಾತೆ ಮಹಾದೇವಿಯವರನ್ನು ಪೀಠಾರೋಹಿಸಿ ವಿನೂತನ ಕ್ರಾಂತಿಯ ಭೀಮಪಾದವನ್ನು ಚರಿತ್ರೆಯ ಪುಟದಲ್ಲಿ ಟಂಕಿಸಿದರು.

ಹಿಂದೂ ಧರ್ಮದ ಬಗ್ಗೆ. ಹಿಂದೂ ಧರ್ಮ ಕ್ಷೀಣಿಸುತ್ತಿರುವುದರ ಬಗ್ಗೆ ತೀವ್ರ ಕಳಕಳಿ ಹೊಂದಿರುವ ಶ್ರೀಗಳು 'ಲಿಂಗಾಯಿತರು ಹಿಂದುಗಳಲ್ಲ' ಎಂದು ವೀರಶೈವರು ಪ್ರತಿಪಾದಿಸುತ್ತಿರುವುದರ ಕುರಿತು ತಾರ್ಕಿಕವಾಗಿ ಆದರೆ ಖಚಿತವಾಗಿ ತಮ್ಮ ಅಭಿಪ್ರಾಯವನ್ನು ಸ್ಫುಟವಾಗಿ ಹೇಳುತ್ತಾರೆ. 'ಹಿಂದು ಅನ್ನುವುದು ಒಂದು ಮತವಲ್ಲ. ಸಾಂಸ್ಕೃತಿಕ ಪರಂಪರೆ. ಬ್ರಿಟಿಷರ ಕುತಂತ್ರದಿಂದಾಗಿ ಜೈನ, ಬೌದ್ಧ, ಸಿಖ್ ಮುಂತಾದವು ವಿಭಕ್ತವಾದವು. ಲಿಂಗಾಯತವೂ ಸೇರಿದಂತೆ ಅವೆಲ್ಲ ಅವೈದಿಕಗಳೇ ವಿನಾ ಅಹಿಂದುವಲ್ಲ. ಓಂಕಾರವನ್ನು ನಂಬಿ ತಮ್ಮ ಮಂತ್ರದಲ್ಲಿ ಅಳವಡಿಸಿ ಕೊಳ್ಳುವವರೆಲ್ಲ ಹಿಂದುಗಳೆ. ಲಿಂಗಾಯಿತರ ಜನಗಣತಿಗಾಗಿ ಪ್ರತ್ಯೇಕವಾದ ಕೋಡ್ ವರ್ಡ್ ಕೇಳಲಾಯಿತೇ ಹೊರತು ಹಿಂದೂ ಸಮಾಜದಿಂದ ಪ್ರತ್ಯೇಕವಾಗಲು ಅಲ್ಲ.'

ಕ್ರೈಸ್ತ, ಮುಸ್ಲಿಮ್, ಯಹೂದ್ಯರಂತೆ ಪ್ರತಿಯೊಬ್ಬ ಹಿಂದುವಿಗೂ ಹುಟ್ಟಿನಿಂದಲೇ ಸಂಸ್ಕಾರ ದೊರೆಯುವತ್ತ ಮಠಾಧೀಶರು ಯೋಚಿಸಬೇಕು. ಸಂಸ್ಕಾರ–ವಿಹೀನರಾದ ಬಹುಸಂಖ್ಯೆಯಲ್ಲಿರುವ ಶೂದ್ರರು ಮತ್ತು ದಲಿತರಿಗೆ ಧಾರ್ಮಿಕ ಸಂಸ್ಕಾರ ನೀಡುವ ಬಗ್ಗೆ ಗಂಭೀರವಾಗಿ ಚಿಂತಿಸಬೇಕು. ಜಾತಿ ವ್ಯವಸ್ಥೆ ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ. ಕಾಯಿದೆ ಕಾನೂನು ಸಾವಿರ ಆದರ್ಶ ಹೇಳಲಿ, ಅದರಿಂದ ಪರಿವರ್ತನೆ ತರಲು ಸಾಧ್ಯವಿಲ್ಲ, ಧಾರ್ಮಿಕ ನೇತಾರರು, ಮಠಾಪೀಠಾಧೀಶರು ಹೇಳುವುದು ಸರಿಯಾದ ಪರಿಣಾಮ ಬೀರುತ್ತದೆ. '1992 ರಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠಾರೋಹಣ ಮಾಡಿದ ಶ್ರೀ ಲಿಂಗಾನಂದರು, ಈ ಜಗದ್ಗುರು ಪೀಠ ಕೂಡಲ ಸಂಗಮ ಕ್ಷೇತ್ರ ಜಗದ್ವಿಖ್ಯಾತ ಆಗುತ್ತದೆಂದು ಬಸವ ಗುರುವನ್ನು ಸ್ಮರಿಸುತ್ತಾ ಕನಸುತ್ತಾರೆ.

ಅಹರ್ನಿಶಿ ಬಸವ ತತ್ತ್ವವನ್ನು ಬಸವ ಗುರುವನ್ನು ಪ್ರಾಣಿಸುವ ಶ್ರೀಗಳಿಗೆ ಬಸವ ಅನನ್ಯ ಶರಣ; ಜಗದಾದಿಗುರು. ಬಸವಣ್ಣನವರು ಪ್ರತಿಪಾದಿಸಿದ ಜಾತಿ–ವರ್ಣ–ವರ್ಗರಹಿತ ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣಕ್ಕೆ ಬದ್ಧಕಂಕಣರಾದ ಶ್ರೀ ಲಿಂಗಾನಂದರು, ಈ ಉದ್ದೇಶ ಸಾಧನೆಗಾಗಿ ರಾಷ್ಟ್ರೀಯ ಬಸವ ದಳ ಹಾಗೂ

ಬಸವ ಧರ್ಮ ಸಂಸತ್ತನ್ನು ಸ್ಥಾಪಿಸಿದ್ದಾರೆ. ಚಿಂತನಶೀಲ ಜನರನ್ನು ಸಂಘಟಿಸಿ ದೇವರು–ಧರ್ಮದ ಹೆಸರಿನಲ್ಲಿ ನಡೆಯುವ ದಬ್ಬಾಳಿಕೆ-ಶೋಷಣೆ–ವಾಮಾಚಾರ–ಪಶುಬಲಿಗಳನ್ನು ತಡೆಗಟ್ಟುವುದು ರಾಷ್ಟ್ರೀಯ ಬಸವದಳದ ಗುರಿ' ಎಂದು ಪ್ರಗತಿಪರ ಸಮಾಜವನ್ನು ಹೊಳಪುಗಣ್ಣಿನಲ್ಲಿ ಮಿಂಚಿಸುತ್ತಾ ತಮ್ಮ ಬಸವದಳದ ಕಲ್ಪನೆಗೆ ಶಿಲ್ಪಕೆತ್ತುತ್ತಾರೆ.

ತನ್ನ ಸಚ್ಚಿಂತನೆಗೆ ಅಂತಃಸಾಕ್ಷಿಗೆ ಅಂತಃಪ್ರೇರಣೆ ಬದ್ಧರಾದ ಶ್ರೀಗಳವರು 'ತತ್ತ್ವನಿಷ್ಠೆ' ಮತ್ತು ಪ್ರಾಮಾಣಿಕತೆ ಆತ್ಮಬಲ ತುಂಬುವ ಎಂದು ಸಾಧನವೆಂದು ಧ್ವನಿ ದೃಢರಾಗಿ ಹೇಳುತ್ತಾರೆ. ಬಾಳಿನುದ್ದಕ್ಕೂ ಪ್ರವಚನ ಕರ್ಮವನ್ನು ಬಸವಾರ್ಪಿತವಾಗಿ ಮಾಡಿಕೊಂಡು ಬಂದು ಶ್ರೀ ಲಿಂಗಾನಂದ ಸ್ವಾಮಿಗಳು ಬಸವ ನಾದದಲ್ಲಿ ವಚನ ಲಯದಲ್ಲಿ ಇತೋಪ್ಯತಿಶಯ ಯಶಃಕಾಯ ರಾಗಲಿ. ★

(ಹೊಸದಿಗಂತ ದಿನ ಪತ್ರಿಕೆಯ ಕೃಪೆಯಿಂದ ದಿ. 12–5-1995 ರ ಸಂಚಿಕೆ)

ದೇವಸಾಕ್ಷಿಯ ಬದುಕು— ಪ್ರಥಮ ಭೇಟಿ

—ಮಾತಾಜಿ

(ನೆನಪಿನ ಬುತ್ತಿ ಬಿಚ್ಚಿದಾಗ)

ಪೂಜ್ಯ ಗುರೂಜಿಯವರು ಕ್ರಿಯಾ ವಿಶ್ರಾಂತಿಯನ್ನೈದಿ, ರೂಪಳಿದು ಪ್ರಾಕೃತಿಕ ಅಸ್ತಿತ್ವ ಕಳೆದುಕೊಂಡು ಕಣ್ಮರೆಯಾಗಿದ್ದರೂ ನೆನಪಾಗಿ ನಮ್ಮೊಡನೆ ಉಳಿದಿದ್ದಾರೆ. ಕೆಲವು ಮಹತ್ವಪೂರ್ಣ ಪ್ರಸಂಗಗಳು ಎಂದೆಂದೂ ಅಚ್ಚಳಿಯದೆ ಉಳಿದಿರುತ್ತವೆ. ಅಂತರಂಗದಲ್ಲಿ ಅಡಗಿ ಕುಳಿತು ಯಾವಾಗಲೇ ಮನೋರಂಗದ ಮೇಲೆ ಮೂಡುತ್ತವೆ. 1965 ನೆಯ ಇಸವಿಯ ಫೆಬ್ರವರಿ ತಿಂಗಳು. ನನ್ನ ಹುಟ್ಟೂರು ಚಿತ್ರದುರ್ಗದಲ್ಲಿ ತರಳಬಾಳು ಹುಣ್ಣಿಮೆ ನಡೆದಿತ್ತು. ಕಾಲೇಜ್ ವಿದ್ಯಾರ್ಥಿನಿ; ಅಂತಿಮ ಬಿ. ಎಸ್. ಸಿ. ಯಲ್ಲಿದ್ದೆ. ನಾನು ಒಂದು ದಿನವೂ ಕಾರ್ಯಕ್ರಮಕ್ಕೆ ಹೋಗಿರಲಿಲ್ಲ. ಧಾರ್ಮಿಕ ವೇದಿಕೆಗಳು ನಡೆವುದೊಂದು ನುಡಿವುದೊಂದನ್ನು ಮಾಡುತ್ತಿದ್ದುದರಿಂದ ನಾನು ಹೋಗದೆ ಮನೆಯಲ್ಲಿ ಅಧ್ಯಯನ ಮಾಡುತ್ತಿದ್ದೆ. ಈ ನಿರ್ಲಿಪ್ತತೆಗೆ ಇನ್ನೂ ಒಂದು ಕಾರಣವಿರಬಹುದು. ಆಗ ಚಿತ್ರದುರ್ಗ ಬೃಹನ್ಮಠ–ತರಳಬಾಳು ಬೃಹನ್ಮಠ ನೇರ ಘರ್ಷಣೆಯಲ್ಲಿ ಇದ್ದ ಕಾಲ. ನಮ ಮನೆತನದವರು ಬೃಹನ್ಮಠಕ್ಕೆ ನಡೆದುಕೊಳ್ಳುತ್ತಿದ್ದವರು. ಹೀಗಾಗಿ ಹಿರಿಯರಾದ ತಾತಂದಿರು ತರಳಬಾಳು ಕಾರ್ಯಕ್ರಮ ಕುರಿತು ಆಡುತ್ತಿದ್ದ ಟೀಕಾತ್ಮಕ ಮಾತುಗಳು ನನ್ನನ್ನು ಹೋಗದಂತೆ ತಡೆದಿರಬಹುದು. ಅಂತೂ ಹೋಗಿರಲಿಲ್ಲ.

ಊರ ತುಂಬ ಓರ್ವ ಸ್ವಾಮೀಜಿಯ ಬಗ್ಗೆ ಬಗೆಬಗೆಯ ಪ್ರಶಂಸೆ, ಹೊಗಳಿಕೆ. ಕಾಲೇಜು ತುಂಬ ಆ ಪ್ರತಿಭಾವಂತ ಸ್ವಾಮೀಜಿಯ ಬಗ್ಗೆ ಚರ್ಚೆ; ಅವರ ವ್ಯಕ್ತಿತ್ವ ವಾಗ್ವೈಖರಿ, ಧ್ವನಿ, ನಿರೂಪಣಾ ಶೈಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಲಯದಲ್ಲೂ ಅದೇ ಸುದ್ಧಿ. ಊರಲ್ಲೆಲ್ಲ ಅದೇ ಸುದ್ದಿ. 'ಟಾಕ್ ಆಫ್ ದಿ ಟೌನ್' ಆಗಿದ್ದು. ಆದರೂ ನಾನು ತಲೆ ಕೆಡಿಸಿಕೊಂಡಿರಲಿಲ್ಲ. ದಿ. 11–2–65 ರಂದು ನನ್ನ ಸಹಪಾಠಿ ಓಂಕಾರದೇವಿ ಕಾಲೇಜಿಗೆ ಬಂದಾಗ ಈ ವಿಷಯವಾಗಿ ಮಾತಿಗೆಳೆದಳು. ಆಕೆಯ ಹಣೆಯ ಮೇಲೆ ವಿಭೂತಿಗೆರೆ; ಸ್ವಭಾವತಃ ಧರ್ಮಶ್ರದ್ಧೆಯ ಹುಡುಗಿ. ಆದರೆ ಕೆಲವು ಹುಡುಗರು ಮತ್ತು ಹುಡುಗಿಯರ ಹಣೆ ಮೇಲೆಲ್ಲ ವಿಭೂತಿ ಗೆರೆಗಳು. ನಾನು ಮಾತ್ರ ಮನೆಯಲ್ಲಿ ನಿಷ್ಠೆಯಿಂದ ಪೂಜೆ ಮಾಡಿ, ಕಾಲೇಜಿಗೆ ಹೋಗುವಾಗ ವಿಭೂತಿ ಅಳಿಸಿಕೊಂಡು ಹೋಗುತ್ತಿದ್ದೆ. ಎಂದೂ ವಿಭೂತಿ ಕಾಣದವರ ಹಣೆಯ ಮೇಲೆ ಆ ವಿಭೂತಿ, ಆ ಸ್ವಾಮೀಜಿ ಪ್ರವಚನದ ಪ್ರಭಾವ ಎಂದು ತಿಳಿಯಿತು.

"ಲೇ........ಬಾರೆ, ಒಮ್ಮೆಯಾದರೂ ಪ್ರವಚನ ಕೇಳೆ, ಅದೆಂತಹ ಪ್ರಭಾವಶಾಲಿ ವ್ಯಕ್ತಿ; ಎಂಥಾ ತೇಜಸ್ಸು ಅಂತೀಯ" ಓಂಕಾರದೇವಿ ಹಲುಬಿದಳು.

"ನೀನು ಕೇಳುತ್ತೀಯಲ್ಲಾ . . . ಸಾಕು ಬಿಡು. ನನಗೇಕೆ ಒತ್ತಾಯ?"

"ನಮ್ಮ ಮನೇಲಿ ನಾಮಕರಣ, ಪೂಜೆ ಅಂದರೆ ಕರೆದಾಗ ಬರ್ತೀಯ. ನಾನು ಕರೆದದ್ದಕ್ಕಾದರೂ ಬಾರೆ"ಅವಳ ಉಮ್ಮಳ ನೋಡಲಾರದೆ,"ಇಂದು ಬರ್ತೀನಿ" ಅಂದೆ.

"ನೀನು ಮತ್ತೆ ತಪ್ಪಿಸಿ ಬಿಟ್ಟೀಯೆ! ಎಲ್ಲಿ ಮಾತು ಕೊಡು". ಕೈ ಮೇಲೆ ಕೈ ಹಾಕಿಸಿಕೊಂಡು ಮಾತು ತೆಗೆದುಕೊಂಡಳು.

[ಈಗ ನಾನೆಲ್ಲೋ ಆಕೆ ಎಲ್ಲೋ, ಮತ್ತೆ ಭೇಟಿಯಿಲ್ಲ. ಆದರೆ ಆಕೆಯ ಈ ಉಪಕಾರ ಹೇಗೆ ಮರೆಯಲು ಸಾಧ್ಯ?]

ಸಂಜೆಯ ಸಭೆಗೆ ಹೋದೆ. ಭವ್ಯವಾದ ಸಭಾಮಂಟಪ. ವೇದಿಕೆ ಮೇಲೆ ಅನೇಕ ಗಣ್ಯರು, ಸ್ವಾಮಿಗಳವರು. ಅವರ ನಡುವೆ ಈ ಸ್ವಾಮೀಜಿ. ಕೈಯನ್ನು ಕಟ್ಟಿಕೊಂಡು ಯಾರದೋ ಭಾಷಣ ಆಲಿಸುತ್ತಿದ್ದಾರೆ. ಥೇಟ್ ವಿವೇಕಾನಂದರು, ನನ್ನ ಆರಾಧ್ಯ ಗುರು. ಅದೇ ನಿಲುವು, ಅದೇ ಮುಖ, ಅದೇ ತೇಜಸ್ಸು, ಪೇಟ ಸಹಿತ ಹಾಗೆಯೆ. ವಿಶಾಲವಾದ ಕಣ್ಣುಗಳು, ವಿಶಾಲ ಹಣೆ. ನಾನು ಭಾವ ಏಕಾಗ್ರತೆಗೆ ಒಳಗಾದೆ.

"ಓಂಕಾರದೇವಿ . . . ಇವರು ಸ್ವಾಮಿ ವಿವೇಕಾನಂದರು ಕಣೆ . . ." ಪಕ್ಕದಲ್ಲಿದ್ದ ಗೆಳತಿಗೆ ಹೇಳಿದೆ.

"ಸರಿ ಹೋಯ್ತು; ಸ್ವಾಮಿ ವಿವೇಕಾನಂದರ ಜನ್ಮ-ಶತಮಾನೋತ್ಸವ ಮಾಡ-ಲಾಯಿತು. ನೀನು ಲೇಖನ ಸ್ಪರ್ಧೆಯಲ್ಲಿ ಭಾಗವಹಿಸಿದೆ. ಕಾಲೇಜಿನಲ್ಲಿ ವಿಶೇಷ ಉಪನ್ಯಾಸವಾಯಿತು. ವಿವೇಕಾನಂದರು ಆಗಲೇ ದಿವಂಗತರಾಗಿಲ್ಲವೆ ? ಇವರು ಸ್ವಾಮಿ ಲಿಂಗಾನಂದರು ಅಂತ."

"ಅಹುದು . . ." ಮೌನ ತಳೆದೆ. ಸ್ವಲ್ಪ ಹೊತ್ತಿನಲ್ಲೇ ಆ ವೀರವಾಣಿ ಉಲಿಯಿತು. ಅಂದಿನ ವಿಷಯ "ಅನುಭವ ಮಂಟಪ". ಅನುಭವ ಮಂಟಪದ ಐತಿಹಾಸಿಕತೆ, ಮಹತ್ವ, ದಾರ್ಶನಿಕ ನಿಲುವು ತಿಳಿದು ನಿಬ್ಬೆರಗಾದೆ. ಆ ಜ್ಞಾನದ ಹೊಳೆಯಲ್ಲಿ ನನ್ನ ಹಮ್ಮು ಕರಗಿ ಹೋಗಿತ್ತು. ಮಾತನಾಡಿದರೆ ನನ್ನ ಏಕಾಗ್ರತೆಗೆ ಎಲ್ಲಿ ಭಂಗ ಬರುವುದೋ ಎಂದು ಮಾತನಾಡದೆ, ಮೌನವಾಗಿ ಮನೆ ಸೇರಿದೆ. ವಚನ ಸಾಹಿತ್ಯ-ವನ್ನು ಓದದೆ ಕೇವಲ ವಿವೇಕಾನಂದರ-ರಾಮಕೃಷ್ಣ ಪರಮಹಂಸರ ಸಾಹಿತ್ಯ ಮಹಾಭಾರತ-ರಾಮಾಯಣ ಓದಿದ್ದ ನನಗೆ ಅನುಭವ ಮಂಟಪದ ಹಿರಿಮೆ-ಗರಿಮೆ ದಿಕ್ಕೆಡಿಸಿದ್ದವು.

ಮರುದಿನ, 12-2-1965. ಕಾಲೇಜಿನಲ್ಲಿ ಪಾಠ ಕೇಳಲು ಸಾಧ್ಯವಾಗಲಿಲ್ಲ. "ಓಂಕಾರದೇವಿ ಸ್ವಾಮೀಜಿಯವರ ಬಳಿ ಕೆಲವು ಪ್ರಶ್ನೆ ಕೇಳಬೇಕು. ದೊಡ್ಡಯ್ಯ ಲೆಕ್ಚರರ್ ದೇವರು ಸುಳ್ಳು, ಮನೋಭ್ರಾಂತಿ ಎಂದು ಪಾಠ ಮಾಡುವಾಗೆಲ್ಲ ಹೇಳುತ್ತಾರೆ. ಈ ಬಗ್ಗೆ ಸ್ವಾಮೀಜಿಯವರನ್ನು ಕೇಳೋಣ." ಅಂದು ಇನ್ನೂ ಉಳಿದಿದ್ದ ಪೀರಿಯೆಡ್ ತಪ್ಪಿಸಿ, ಓಂಕಾರದೇವಿಯವರ ಮನೆಯ ಸಮೀಪದಲ್ಲೇ ಇದ್ದ ಸ್ವಾಮೀಜಿಯವರ ನಿವಾಸಕ್ಕೆ ಹೋದೆವು. ಮಧ್ಯಾಹ್ನ 3 ಗಂಟೆ ಇದ್ದಿರಬಹುದು.

ಸುಮಾರು 2 ಗಂಟೆ ಕಾಲ ಚರ್ಚೆ. ಸ್ವಾಮೀಜಿ ಬೇಸರವಿಲ್ಲದೆ ನಮ್ಮ ಉದ್ಧಟ ಪ್ರಶ್ನೆಗಳಿಗೂ ಉತ್ತರಿಸಿ, ತಾವು ಒಂದು ಕಾಲದಲ್ಲಿ ನಾಸ್ತಿಕರಾಗಿದ್ದುದಾಗಿ, ಕಮ್ಯೂನಿಷ್ಟ್ ಕಾಮ್ರೇಡ್ ಆಗಿದ್ದುದಾಗಿ ಹೇಳಿದರು. ಲಿಂಗಾಯತ ಧರ್ಮ-ಜಾತಿ ಇವುಗಳ ವ್ಯತ್ಯಾಸ ಗೊತ್ತಿಲ್ಲದ ನಾನು ಸ್ವಧರ್ಮವನ್ನು ಸಂಕುಚಿತವೆಂದು, ವೇದಾಂತವನ್ನು ವಿಶಾಲ ಮನೋಭಾವದ ಪ್ರತೀಕವೆಂದು ವಾದಿಸಿದ್ದುಂಟು, ಧರ್ಮದ ಸಮಗ್ರತೆ ಕುರಿತು ಹೇಳಿ, ಬಸವಾದಿ ಪ್ರಮಥರ ವಿಶಾಲ ಮತ್ತು ದಾರ್ಶನಿಕ ದೃಷ್ಟಿ ಕುರಿತು ವಿವರಿಸಿದರು. ದೇವರು, ಲಿಂಗತತ್ತ್ವದರ್ಪಣ, ಜಂಗಮ ದರ್ಶನ ಮೂರು ಪುಸ್ತಕ ಖರೀದಿಸಿದೆ. ಅಂದು ಸಮಯಾಭಾವದಿಂದ ಸ್ವಾಮೀಜಿಯವರಿಗೆ, ಜನರು ಬೇಕು ಎಂದು ಕೂಗುತ್ತಿದ್ದರೂ ಮಾತನಾಡಲು ಸಮಯ ಕೊಡಲಿಲ್ಲ. ಒಂದೇ ರಾತ್ರಿಯಲ್ಲಿ ಮೂರೂ ಪುಸ್ತಕ ಓದಿ ಮುಗಿಸಿಬಿಟ್ಟೆ. ಶರಣರ ನಿಲುವು, ಶರಣ ಧರ್ಮ ಹೀಗಿದೆಯೇ? ಬಗೆಬಗೆಯ ತಿಂಡಿ ತಿನಿಸು ಇರುವ ಕೋಣೆಯೊಳಗೆ ಹಸಿದ ಬಾಲಕ-ನನ್ನು ಬಿಟ್ಟಂತಾಗಿತ್ತು ನನಗೆ.

ಪೂಜ್ಯ ಸ್ವಾಮೀಜಿಯವರ ಕೃತಿಗಳಲ್ಲಿ "ಅಕ್ಕನ ಪ್ರವಚನ" ಎಂಬುದು ಬಹಳ ಜನಪ್ರಿಯತೆ ಗಳಿಸಿತ್ತು. ಅದನ್ನು ಖರೀದಿಸುವ ಮನಸ್ಸಿತ್ತು. ಆದರೆ ಹಣವಿರಲಿಲ್ಲ ಹಣವಿದ್ದೂ ಬಡತನ ಬಂದಂತಾಗಿತ್ತು. ಅಪ್ಪ ದುಡಿದಿಟ್ಟ ಆಸ್ತಿ ಇದ್ದರೂ ಬಳಸಲು ಸ್ವಾತಂತ್ರ್ಯವಿರಲಿಲ್ಲ. ಮೊದಲಿನಿಂದಲೂ ಸ್ವಾಭಿಮಾನ. ಆದರೂ ಆ ಪುಸ್ತಕ ಓದಲೇಬೇಕೆಂಬ ಅದಮ್ಯ ಆಸೆಯಿಂದ, ಸ್ವಾಭಿಮಾನ ಬದಿಗಿಟ್ಟು ಕೇಳಿದೆ. "ಈಗ ಹಣವಿಲ್ಲ ; ಪುಸ್ತಕ ಕೊಟ್ಟರೆ ನಂತರ ಎಂ. ಓ. ಮಾಡಿ ಕಳಿಸುವೆ."

"ನಿಮ್ಮಂತಹ ಶ್ರೀಮಂತರಿಗೆಲ್ಲ ಉಚಿತವಾಗಿ ಕೊಡುವುದೇ ? ಸಾಧ್ಯವಿಲ್ಲ." ಸ್ವಾಮೀಜಿಯವರದು ಖಂಡ ತುಂಡ ಮಾತು. ನನಗೆ ಕೇಳಲಿಕ್ಕೇ ಸಂಕೋಚವಿತ್ತು. ಹೀಗಂದಾಗ ಮನಸ್ಸಿಗೆ ಮುಜುಗರವೆನಿಸಿತು.

ಅಂದು ಹುಣ್ಣಿಮೆ ಕಾರ್ಯಕ್ರಮ ಮುಗಿಯಿತು. ಪೂಜ್ಯ ಸ್ವಾಮೀಜಿ ಹೋದರು. ನಂತರ ಆಗಾಗ ಛೇಡಿಸುತ್ತಿದ್ದೆ, "ಕಂಜೂಸ್ ಸ್ವಾಮಿಗಳು. ಒಂದು ಪುಸ್ತಕ ಕೇಳಿದರೆ ಕೊಡಲಿಲ್ಲ "

"ಅಹುದು, ಕೊರಳಲ್ಲಿ ಬೆಲೆ ಬಾಳುವ ನೆಕ್‌ಲೇಸ್ ಹಾಕಿಕೊಂಡು ಬೆಲೆಬಾಳುವ ಬಟ್ಟೆ ತೊಟ್ಟು, ಕೈಯಲ್ಲಿ ಬಂಗಾರದ ಬಳೆ ಉಂಗುರ ಹಾಕಿಕೊಂಡು ಬಂದು, ಪುಸ್ತಕಕ್ಕೆ ಹಣ ಕೊಡಲಾರದ ಶ್ರೀಮಂತರಿಗೆಲ್ಲ ಪುಕ್ಕಟ್ಟೆ ಪುಸ್ತಕ ಕೊಡುವುದೆ ? ಅದಕ್ಕೇ ಕೊಡಲಿಲ್ಲ..." ಎಂದು ಪೂಜ್ಯ ಅಪ್ಪಾಜಿ ಆ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಿದ್ದರು.

ದಿ. 11-2-1965 ನನ್ನ ಬದುಕಿನ ಸುವರ್ಣ ದಿನ ; ಅಂದು ನಾನು ಹೋಗಿ ಒಂದು ಭಾಷಣ ಕೇಳಿರದೆ ಇದ್ದರೆ ನಾನು ಕರ್ನಾಟಕದವಳಾಗಿ ಉಳಿಯುತ್ತಿರಲಿಲ್ಲ. ಬಸವಣ್ಣನ ಮಗಳಾಗುತ್ತಿರಲಿಲ್ಲ. ಶರಣರ ಪರಂಪರೆಯ ಕರುಳಬಳ್ಳಿ ಕತ್ತರಿಸಿ-ಕೊಂಡು 'ಪರದೇಶಿ'ಯಾಗುತ್ತಿದೆ. ಕರ್ನಾಟಕದ ಹೊರಗಿದ್ದು ಪರದೇಶಿಯಾಗುತ್ತಿದ್ದೆ ; ಬಸವ ತಂದೆಯ ಕೃಪಾ ವಲಯದಲ್ಲಿ ಬರದೆ ಪರದೇಶಿಯಾಗುತ್ತಿದ್ದೆ. ಪೂಜ್ಯ ಅಪ್ಪಾಜಿಯವರ ಆ ಭೇಟಿ, ಆ ಉಪನ್ಯಾಸ, ಆ ಪುಟ್ಟ ಹೊತ್ತಿಗೆಗಳು ಶರಣ ಸಂಸ್ಕೃತಿಯಿಂದ ಹೊರಹೋಗದಂತೆ ತಡೆದವು. ಹಾಗಾಗಿರದಿದ್ದರೆ? ನೆನೆಸಿಕೊಂಡರೆ ಮನಸ್ಸು ತಲ್ಲಣಿಸುತ್ತದೆ ಅಪ್ಪ-ಬಸವಣ್ಣ, ಅಕ್ಕ-ಮಹಾದೇವಿ, ಅವ್ವೆ-ನೀಲಾಂಬಿಕೆ, ಚಿಕ್ಕಪ್ಪ-ಸಿದ್ಧರಾಮೇಶ, ದೊಡ್ಡಪ್ಪ-ಪ್ರಭುದೇವ, ಅಣ್ಣ-ಚನ್ನಬಸವಣ್ಣ, ಇವ-ರೆಲ್ಲರೂ ನನಗೆ ಪರಕೀಯರಾಗಿರುತ್ತಿದ್ದರು. ನಾನೂ ಅವರಿಗೆ ಪರಕೀಯಳಾಗು-ತ್ತಿದ್ದೆ. ಆ ಪರಂಪರೆಗೆ ನನ್ನನ್ನು ಬೆಸೆದ ಮಹಾಚೇತನ ಪೂಜ್ಯ ಅಪ್ಪಾಜಿ.

ಇಂದು ಶಿವಶರಣರ ಹೊಂದಿ ಹಾರೈಸಿದೆ
ತಂದೆ ನಿಮ್ಮಯ ಕರುಣ ಪ್ರಸಾದವ
ಇಂದು ನಿಮ್ಮಯ ಕರುಣದಿಂದಿತ್ತು ಸಲಹಯ್ಯ
ತಂದೆ ನೀ ಬಸವಯ್ಯ ಯೋಗಿನಾಥ ॥

ಎಂದು ಸಿದ್ಧರಾಮೇಶ್ವರರು ಹೇಳುವಂತೆ, ನಾನು ಬಸವಣ್ಣನ ಕರುಳ ಕುಡಿ-ಯಾದುದು ಪೂಜ್ಯ ಲಿಂಗಾನಂದ ಸ್ವಾಮೀಜಿಯವರಿಂದ. ನನ್ನ ಗೆಳತಿಯರೊಡನೆ ಸ್ವಾಮೀ ಯವರ ದರ್ಶನಕ್ಕೆ ಹೋಗಿ ಆಟೋಗ್ರಾಫ್ (ಹಸ್ತಾಕ್ಷರ) ತಗೊಂಡೆ. ಇಂದಿಗೂ ಅದು ನನ್ನಲ್ಲಿದೆ. ನನ್ನನ್ನು ಅವರು ಅರಿತಿರಲಿಲ್ಲ; ನಾನು ಅವರನ್ನು ಅರಿತಿರಲಿಲ್ಲ. ಕಣ್ಣರಿಯದಿದ್ದರೂ ಕರುಳು ಅರಿತಿತ್ತು. ಪೂಜ್ಯ ಅಪ್ಪಾಜಿ ಹೀಗೆ ಬರೆದಿದ್ದಾರೆ, "ಅಕ್ಕನು ಅನುಗ್ರಹಿಸಲೆಂದು ಹಾರೈಸಲಾಗಿದೆ"

ಸ್ವಾಮಿ ಲಿಂಗಾನಂದ. ದಿ. 12-2-1965. ★ ★

ಕಿರು ನುಡಿಕಾಣಿಕೆ

—ಭಾರತಿ ಕೆಂಪಯ್ಯ

ಹೇಗೆ ಆರಂಭಿಸಲಿ ತಿಳಿಯದಾಗಿದೆ ಈ ಮೂಢಮತಿಗೆ
ಏನೆಂದು ನುಡಿಯಲಿ ?
ನುಡಿಯೆ, ಮಾತೆಲ್ಲ ಮೂಕವಾಗಿದೆ.
ಚಿತ್ರಿಸಲೆಂದೊಡೆ ಶಿಲ್ಪಿ ನಾನಲ್ಲ ;
ಹೊಗಳಿ ಹಾಡುವೆನೆಂದರೆ ಇಂಪಾದ ಶಾರೀರವೆನಗಿಲ್ಲ ;
ಬಣ್ಣಿಸಲೆಂದೊಡೆ ಕವಯತ್ರಿ ಮೊದಲಲ್ಲ ;
ಏನೆಂದು ಬಣ್ಣಸಲಿ ?
'ಬಸವ ತತ್ತ್ವ'ದ ಪ್ರಪ್ರಥಮ ಪ್ರಚಾರಕರೆನಲೋ !
'ಪ್ರವಚನ ಪಿತಾಮಹ' ರೆಂದು ಸಂಬೋಧಿಸಲೋ !
'ಬಸವ ಧರ್ಮ ಪೀಠ'ದ ಮಹಾಜಗದ್ಗುರು ವೆನಲೋ !
ಸಂಚರಿಸಿ ಮನವ ಗೆಲ್ಲುವ ವಾಗ್ಝರಿಯ ವಾಗ್ಮಿ ಎನಲೊ !
ದೃಷ್ಟಾಂತದಿಂ ದುಷ್ಟಾಂತವ ತಿಳಿಸಿದ ದ್ರಷ್ಟಾರರೆನಲೋ !
ಬುದ್ಧಿ ಯೂಟದ ಜೊತೆಗೆ ನೆಂಚಿಕೆಯನಿತ್ತು ಸಾಂತ್ವನಿಪ ಮೇಧಾವಿಯೆನಲೋ !
ಚಣ ಚಣಕೆ ಹೊಸ ವಿಷಯಗಳ ಹೇಳುವ ಸುವಾರ್ತಾಕಾರರೆನಲೋ !

ಹುಂಬರನು ಹುರಿದುಂಬಿಸಿ ಹೆಮ್ಮೆಯಿಂ ನಡೆವಂತೆ ಮಾಡ್ವ ಮಾರ್ಗದರ್ಶಕರೆನಲೋ !
ಮಾತಿನ ಮೋಡಿಯಿಂ ಮನವ ತತ್ತ್ವದೆಡೆಗೊಯ್ವ ವಾಚಾಳಿಯೆನಲೊ !
ಅವಿರತ ದುಡಿಯುತಲಿ ತತ್ತ್ವಕ್ಕಾಗಿ ಬಯಲಾದ ತ್ಯಾಗಿಗಳೆನಲೋ !
ಪ್ರವಚನವನ್ನೇ ನಿತ್ಯ ಜೀವನದ ತಪಸ್ಸೆಂದಾಚರಿಸಿದ ತಪಸ್ವಿಗಳೆನಲೋ !
12 ನೇ ಶತಮಾನದಿಂದೀಚೆಗೆ ಇದ್ದರೂ ಇಲ್ಲದಂತಿದ್ದ 'ಬಸವ ತತ್ತ್ವ ದ
ಮಾಹಾಬೆಳಕ ಈ ಯುಗದಿ ಪಸರಿಸಿಹ ಯುಗಪ್ರವರ್ತಕರೆನಲೋ !
ಅಂದು, ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಕೆಯಾದ ಬಸವಗುರುವಿನಂತೆ
ಇಂದು, 'ಬಸವತತ್ತ್ವ' ಕೆ 'ಬಸವ ಭಕ್ತ' ರಿಗೆ ನಿಚ್ಚಣಿಕೆಯಾದ
'ಬಸವ ಧರ್ಮ' ಸಂಸ್ಥಾಪಕರೆನಲೋ !
'ಬಸವ ದಳ' ಗಳಿಗೆ' ಕಾರಣೀಭೂತರಾದ 'ಬಸವ ದಳ' ಕರ್ತೃವೆನಲೋ !
ಪ್ರಪ್ರಥಮ ಮಹಿಳಾ ಜಗದ್ಗುರು ಪೀಠ ನಿರ್ಮಾಪಕರೆನಲೋ !
ಸಾರ್ವತ್ರಿಕವಾಗಿ ಸವಾಲೆಸೆಯುವ ಸವಾಲಿಗೆ ಸರದಾರರೆನಲೋ !
ಕಟುನುಡಿಯಿಂ ಬಾಳೆ, ಪಥವ ತೋರ್ವ ಜನಕರೆನಲೋ !
ಅತ್ತಾಗ ಅಂಗಾಲು ತೊಳೆದು ಮುದವೀವ ತಾಯಿಯೆನಲೋ !
ಅಂಗವನೆಲ್ಲ 'ಲಿಂಗ' ವಾಗಿ ಮಾಡಿಕೊಂಡ 'ಲಿಂಗಾನಂದ'ರೆನಲೋ !
ನಗುನಗುತ ನಗಿಸುತಲಿ ನಲಿಯುತಲೆ ನಲುಗಿದ ನಂದಾದೀವಿಗೆಯೆನಲೋ !
ಹೊಸಮುತ್ತಿನ ಸುಪ್ಪಾಣಿಯಂತೆ, ಸ್ಫಟಿಕನ ಘಟದೊಳಗಣ
ಪ್ರಭೆಯಂತೆ ಏಕೋಭಾವವಾದ ಸಮರಸಿಯೆನಲೋ !
ಏನೆಂದು ಬಣ್ಣಸಲಿ, ಏನೆಂದು ಹಾಡಲಿ, ಏನೆಂದು ಹೊಗಳಲಿ !
ನಿಮ್ಮ ಬಣ್ಣಸಲು ನಾನೇತರವಳು ಮುದ್ದುರುವೇ ?
ಶುಭ್ರಾಕಾಶದ ಮಂದ ಬಿಸಿಲ ಝಳದಲ್ಲಿಯೂ
ಕಾರ್ಗತ್ತಲ ಕಾರ್ಮೋಡ ಕವಿದು,
ಆಧುನಿಕ ಬಾಂಬ್‌ನಂತೆ ಸ್ಫೋಟಿಸಿದ ವಾರ್ತೆಯನಾಲಿಸಿ
ನೋಟವು ಚಲಿಸದಂತಾಯ್ತು ;
ಮನವು ಸ್ಥಿರವಾಗುತಲಿತ್ತು
ದುಃಖಾಶ್ರುವೆಲ್ಲವು ಹಿಂಗಿ ಕ್ಷಾಮದ ಭುವಿಯಾಯ್ತು
ತತ್ತರಿಸಿ ಮನವೆತ್ತಲೋ ಚದುರುತಲಿತ್ತು
ನಿಮ್ಮ ಕಾಣಲು ಮನವು ತವಕಿಸುತಲಿತ್ತು
'ಅಪ್ಪಾಜಿ' 'ಅಪ್ಪಾಜಿ' ಇನ್ನಲ್ಲಿಯ ಅಪ್ಪಾಜಿ ?
ಇನ್ನೆಲ್ಲಿ ಆ ಸಹೃದಯದ ಕಂಠಸಿರಿ ?

ಇನ್ನೆಲ್ಲಿ ಆ ಬಿಮ್ಮನದ ವಾಗ್ಝರಿ
ಆದರೂ ನೀ ಧನ್ಯ !
ಓ ಅಲ್ಲಿ, ಆ ಧ್ವನಿ ಸುರುಳಿಯಲ್ಲಿ ಅಪ್ಪಾಜಿಯ ಕಂಠನಾದ
ಹೊಡೆದೆಬ್ಬಿಸುತ ಕೇಳ್ವುದು ಸುನಾದ
ಆದಿಯಲಿ ಬಯಲು, ಅಂತ್ಯದಲಿ ಬಯಲು
ಮಧ್ಯದಲಿ ಎಮ್ಮೊಡನಿದ್ದು ಚೆಲ್ಲಿದ ಆ ಚೈತನ್ಯದ
ಹೊಂಬೆಳಕಿನಿದಿರಿನಲಿ ಅಡಿಗಡಿಗೆ ನಿಮ್ಮ ನೆನಹಲ್ಲೇ ಮುನ್ನಡವೆವು
ರೋದಿಸುವ ಮನಕೆ, ಸಾಂತ್ವನಿಸಿ ಮೆಲ್ಲಗೆ
'ಎಮ್ಮವರಿಗೆ ಸಾವಿಲ್ಲ, ಎಮ್ಮವರು ಸಾವನರಿಯರು'
ಎಂದುಸುರಿ, ಬಯಲಾದರೂ ಚೈತನ್ಯದ ಕಿಡಿಗಳ ಪಸರಿಸಿ
ಬೆಳಗುವಂತೆ ಮಾಡಿದ,
ಶ್ರೀ ಗುರುವೇ, ಮಹಾಗುರುವೇ, ಮದ್ಗುರುವೇ, ಮಹಾಜಗದ್ಗುರುವೇ
ಚಿದ್ಗುರುವೇ, ಸದ್ಗುರುವೇ, ಮದ್ಗುರುವೇ,
ಶರಣು ಶರಣೆಂಬೆ, ಮತ್ತೊಮ್ಮೆ, ಮಗದೊಮ್ಮೆ, ಇನ್ನೊಮ್ಮೆ
ಶರಣು ಶರಣಾರ್ಥಿ, ಶರಣು ಶರಣಾರ್ಥಿ, ಶರಣು ಶರಣಾರ್ಥಿ.

* ಜೈ ಗುರು ಬಸವೇಶ ಹರಹರ ಮಹಾದೇವ *

ಈ ಯುಗದ ಪೃಥ್ವಿಯ ಮೇಲೆ
ಲಿಂಗಾನಂದರೆಂಬ ಗುರು ಅವತರಿಸಿ
ಬಸವ ತತ್ತ್ವದ ಗಿಡ ಬೆಳೆಸಿ
ಬಸವ ತತ್ತ್ವದೀ ಗಿಡದಲ್ಲಿ
ಪ್ರವಚನವೆಂಬ ಹೂವಾಯಿತ್ತು
ಬಸವ ಭಕ್ತರೆಂಬ ಕಾಯಾಯಿತ್ತು
ಬಸವ ಧರ್ಮವೆಂಬ ಹಣ್ಣಾಯಿತ್ತು
ಬಸವ ಧರ್ಮವೆಂಬ
ತಾನು ಬೆಳೆದ ಫಲವ ಉಣ್ಣುವಲ್ಲಿ ಪರಮಾತ್ಮನು
ಗುರುದೇವನು ತನಗೆ ಬೇಕೆಂದು ಎತ್ತಿಕೊಂಡ.

—ಭಾರತಿ ಕೆಂಪಯ್ಯ

ಹತ್ತು — ಅತ್ತು

—ಭಾರತಿ ಕೆಂಪಯ್ಯ

'ಗುರು ಬಸವ' ಬೃಹತ್ ಪುತ್ಥಳಿಯ ನಿರ್ಮಾಣಕೆ
ಗುರು ಪೂಜೆಗೈದಂದು (ದಿ. 15-5-1995)
'ಭಾರತೀ' ಎಂದು ನೀವು ಕೂಗಿ, ಕರೆದಿರಿ,
ಎತ್ತಲೋ ಹರಿದಿದ್ದೆನ್ನ ನೋಟ
ಕರೆಗೆ ಓಗೊಟ್ಟು, ನಿಮ್ಮತ್ತ ಬರುವಲ್ಲಿ
ಕೇವಲ 'ಹತ್ತು' ಹತ್ತು ಎಂದುಸಿರ್ದಿರಿ
'ಹತ್ತು' ಎಂದು ನೀವೆನಲು
ಎಲ್ಲಿಗೆ ? ಹೇಗೆ ? ಎಂದು ನಾ ಕೇಳಿದೆ
ಎಲ್ಲವನರಿತ ನೀವು ಬಯಲಲಿ ನಿಂದು
ಹತ್ತುತ್ತಲೇ ಇರ್ದಿರಿ
ಮಂದಮತಿ ನಾನರಿತೆ ಪುತ್ಥಳಿಯ ನಿರ್ಮಾಣಕೆ
'ಹತ್ತು' 'ಹತ್ತು' ಸಾವಿರ ರೂಗಳೆಂದು,
ತಿಳಿಯದಾದೆ ನಾ ನಿಮ್ಮೊಳದನಿಯು
'ಹತ್ತು' ಎಂಬರ್ಥದ ವಿಶಾಲ ಭಾವವ
ನೀವು 'ಹತ್ತು' 'ಹತ್ತು' ಎಂದೆನುತ
ಬಯಲಲಿ ಬಯಲಾದಿರಿ.
ಬಯಲಲಿ ಹುಡುಕುತ ನಾ ನಿಮ್ಮ ಕಾಣದಾದೆ
ಕಡೆಗೆ 'ಹತ್ತು' ವ ಬದಲಿಗೆ
'ಅತ್ತು' 'ಅತ್ತು' ನಿಂತಲೇ ನಾನಿಂತೆ.
ಇಂದು (30-7-1995)

(ಸಂಸ್ಮರಣೆಯ ದಿನದಂದು ಬರೆದುದು)

ಶ್ರೀಯುತ ಹೆಚ್. ಡಿ. ದೇವೇಗೌಡರು

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ,
ಬೆಂಗಳೂರು.

ಇವರಲ್ಲಿ ವಿಜ್ಞಾಪನೆಗಳು.

ವಿಷಯ : 1. "ಮಹಾಚೈತ್ರ" ಪುಸ್ತಕ ನಿಷೇಧಕ್ಕೆ ಕೋರಿಕೆ.
2. ನಾಟಕ ಪ್ರದರ್ಶನ ರದ್ದತಿಗೆ ಕೋರಿಕೆ.
3. ಸರ್ಕಾರದ ಜನಪ್ರಿಯ ಪುಸ್ತಕ ಮಾಲಿಕೆಯಿಂದ ವಾಪಸ್ಸು ಪಡೆಯಲು ಕೋರಿಕೆ.

ಮಾನ್ಯರೇ,

ಪೀಠಿಕೆ : "ಮಹಾಚೈತ್ರ" ಎಂಬ ಹೆಚ್. ಎಸ್. ಶಿವಪ್ರಕಾಶರು ಬರೆದ ನಾಟಕ ಕೃತಿಯು ಕುವೆಂಪು ಮತ್ತು ಕಲಬುರ್ಗಿ ಪದವಿ ತರಗತಿಗಳಿಗೆ ಪಠ್ಯವಾಗಿದ್ದು, ಅದು ಬಹಳ ದೋಷಪೂರಿತ ಕೃತಿ ಎಂದು, ಅದರಲ್ಲಿ ವಿಶ್ವಗುರು ಬಸವಣ್ಣನವರನ್ನು, ಅವರ ಸಮಕಾಲೀನ ಶರಣರನ್ನು ವಿಕೃತವಾಗಿ ಚಿತ್ರಿಸಲಾಗಿರುವುದೆಂದು ವಿದ್ಯಾರ್ಥಿಗಳು ನಮ್ಮ ಗಮನಕ್ಕೆ ತಂದಾಗ ನಾವು ಪ್ರಾಂಜಲ ಮತ್ತು ಮುಕ್ತ ಮನಸ್ಸಿನಿಂದ ಓದಿ, ನಿಜಕ್ಕೂ ಆಘಾತ ಹೊಂದಿದೆವು. 1994 ರ ಸೆಪ್ಟಂಬರ 19 ರಂದು ಅಂದಿನ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರಿಗೆ ಮನವಿ ಸಲ್ಲಿಸಿದೆವು. ಆ ಸರ್ಕಾರ ಏನೂ ಕ್ರಮ ಕೈಗೊಳ್ಳದ್ದರಿಂದ ಬಸವ ಧರ್ಮೀಯರು ರಾಜ್ಯದಾದ್ಯಂತ ಸರ್ಕಾರದ ಪ್ರತಿನಿಧಿಗಳಾದ ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮೀಷನರ್, ತಹಸೀಲ್ದಾರ್ ಮುಂತಾದವರಿಗೆ ಪಠ್ಯರದ್ದತಿಗೆ ಕೋರಿ ಮನವಿ ಸಲ್ಲಿಸಿದರು.

ಶ್ರೀ ಮೊಯಿಲಿಯವರ ಸರ್ಕಾರವು ಕುಂಭಕರ್ಣ ನಿದ್ರೆಯಲ್ಲಿದ್ದುದರಿಂದ ಚಳುವಳಿ ಪ್ರಾರಂಭವಾಯಿತು, ಪ್ರತಿಭಟನಾ ಪ್ರದರ್ಶನಗಳು ನಡೆದವು. ಸನ್ಮಾನ್ಯ ಪ್ರಧಾನಿಗಳಾದ ಶ್ರೀ ಪಿ. ವಿ. ನರಸಿಂಹರಾವ ಅವರು ಹುಬ್ಬಳ್ಳಿಯಲ್ಲಿ ನಡೆದ ಅಂಥ ಒಂದು ಪ್ರತಿಭಟನಾ ಪ್ರದರ್ಶನಕ್ಕೆ ಕಾರಣವೇನು ಎಂದಾಗ, ಮಹಾಚೈತ್ರ ಎಂಬ ಪುಸ್ತಕ ಎಂಬುದನ್ನು ಶ್ರೀ ಮೊಯಿಲಿಯವರೇ ಹೇಳಿದರು. 'ಹಾಗಾದರೆ ಏಕೆ ಕ್ರಮ ಕೈಗೊಂಡಿಲ್ಲ?' ಎಂದಾಗ, ಶ್ರೀ ಮೊಯಿಲಿಯವರು "ಪುಸ್ತಕವು ಪಠ್ಯಕ್ರಮದಿಂದ ರದ್ದಾಗಿದೆ." ಎಂದು ಘೋಷಿಸಿದರು. ದೂರದರ್ಶನ, ವಾರ್ತಾ ಪತ್ರಿಕೆ, ರೇಡಿಯೋ ಮೂಲಕ ಘೋಷಿಸಿ ಚಳುವಳಿಯನ್ನು ನಿಲ್ಲಿಸುವಂತೆ ಮಾಡಿದರು. ಆದರೆ ಅದು

ಸುಳ್ಳೆಂದು ಜನತೆಗೆ ಗೊತ್ತಾಯಿತು. ಅಷ್ಟರಲ್ಲಿ ಚುನಾವಣೆ ಬಂದುದರಿಂದ ಕರ್ತವ್ಯಶೀಲ ಪ್ರಜೆಗಳಾದ ಬಸವ ತತ್ತ್ವಾನುಯಾಯಿಗಳು ಜನತೆಯ ಒಂದು ಹಕ್ಕಾಗಿರುವ ಚುನಾವಣಾ ಪ್ರಕ್ರಿಯೆಗೆ ಚ್ಯುತಿ ತರಬಾರದೆಂದು ತಾತ್ಕಾಲಿಕವಾಗಿ ಚಳುವಳಿ ನಿಲ್ಲಿಸಿದರು. ಪುನಃ ಜನವರಿಯಲ್ಲಿ ಶರಣ ಮೇಳ ನಡೆದಾಗ ಒಕ್ಕೊರಲಿನ ನಿರ್ಣಯ ತೆಗೆದುಕೊಂಡು, ಚಳುವಳಿ ಆರಂಭಿಸಿದೆವು. ತಮಗೆ ಮನವಿ ಕೊಡಲಾಯಿತು, ಶಿಕ್ಷಣ ಮಂತ್ರಿಗಳಿಗೂ ಕೊಡಲಾಯಿತು ಬೇಗನೆ ತಾವು ಗಮನ ಹರಿಸದೆ ಇದ್ದಾಗ ಧರಣಿ ಸತ್ಯಾಗ್ರಹ, ಸಾಂಕೇತಿಕ ಉಪವಾಸ ಸತ್ಯಾಗ್ರಹ, ರಸ್ತೆ ತಡೆ ಚಳುವಳಿ ಮುಂತಾಗಿ ಬಸವ ಭಕ್ತರು ಮಾಡಿ ಅಹಿಂಸಾತ್ಮಕವಾಗಿ ನಮ್ಮ ನೋವನ್ನು ತೋಡಿಕೊಂಡೆವು. ಚಳುವಳಿ ತೀವ್ರವಾದಾಗ ಸನ್ಮಾನ್ಯ ಗೃಹ ಮಂತ್ರಿ ಶ್ರೀ ಪಿ. ಜಿ. ಆರ್. ಸಿಂಧ್ಯ-ರವರು ರಾಜಾಜಿನಗರದ ಬಸವ ಮಂಟಪಕ್ಕೆ 5-3-1995 ರಂದು ಭೇಟಿ ನೀಡಿ, ಬಸವತತ್ತ್ವಾನುಯಾಯಿಗಳೊಡನೆ ಸೌಜನ್ಯದಿಂದ ಮಾತನಾಡಿ ಅವರ ಮನೋಭಾವನೆಗಳನ್ನು ಅರಿತುಕೊಂಡರು. ತಮ್ಮ ಪ್ರತಿನಿಧಿಯಾಗಿ ಅವರು ಜನರೊಡನೆ ಸೌಜನ್ಯದಿಂದ ವ್ಯವಹರಿಸಿದ್ದು ನೋಡಿ ಎಲ್ಲರಿಗೂ ಅಪಾರ ಆನಂದವಾಯಿತು. ನಾವು ಅತ್ಯುತ್ತಮ ನಿರ್ಧಾರವನ್ನು ಸರ್ಕಾರದಿಂದ, ಸಚಿವ ಸಂಪುಟದಿಂದ ನಿರೀಕ್ಷಿಸಿದ್ದೆವು. ಆದರೆ ಮರುದಿವಸ ಹೊರಬಿದ್ದುದು ವಿಷಾದನೀಯ ನಿರ್ಧಾರವಾಗಿತ್ತು. 3 ಜನರ ಒಂದು ಸಮಿತಿ ಮಾಡಿ ಅವರ ಅಭಿಪ್ರಾಯ ಪಡೆಯಲು 15 ದಿವಸಗಳ ಗಡುವು ನೀಡಲಾಗಿತ್ತು. ಸರ್ಕಾರದ ಪ್ರತಿನಿಧಿಯಾಗಿ ಬಂದು ಗೌರವಾನ್ವಿತವಾಗಿ ಜನರೊಡನೆ ಸ್ಪಂದಿಸಿದ ಗೃಹಮಂತ್ರಿಗಳಾದ ಶ್ರೀ ಸಿಂಧ್ಯರವರ ಮಾತಿಗೆ ಮತ್ತು ಇದೆಲ್ಲಕ್ಕೂ ಮೂಲ ಸೂತ್ರಧಾರರಾದ ನಿಮ್ಮ ಮಾತಿಗೆ ಬೆಲೆಗೊಟ್ಟು ಆ ಸಮಿತಿಯನ್ನು ಮಾನ್ಯ ಮಾಡುವುದೂ ನಮಗೆ ಅಸಾಧ್ಯವಾಗಿತ್ತು. ಏಕೆಂದರೆ, ಅವರು ಮೂವರೂ ಮೊದಲೇ ತಮ್ಮ ಅಭಿಪ್ರಾಯ ಗಳನ್ನು ಪತ್ರಿಕೆಗಳಲ್ಲಿ ವ್ಯಕ್ತಪಡಿಸಿ ಬಿಟ್ಟಿದ್ದರು. ಅವರು ಏನು ಅಭಿಪ್ರಾಯ ಕೊಡುವರೆಂಬುದು ಮೊದಲೇ ಚಳುವಳಿಗಾರರಿಗೆ ಗೊತ್ತಿದ್ದ ಸಂಗತಿಯಾಗಿತ್ತು. ಸರ್ಕಾರಕ್ಕೆ ಗೌರವ ಕೊಡಬೇಕೆಂಬ ಅಪೇಕ್ಷೆ ಇದ್ದರೂ ಸಹ ಅನಿವಾರ್ಯವಾಗಿ ಸಮಿತಿಯ ನೇಮಕವನ್ನು ವಿರೋಧಿಸಲೇಬೇಕಾಯ್ತು. ಚಳುವಳಿ ತೀವ್ರವಾಯಿತು ; ಮಠಾಧೀಶರು ಆಮರಣ ಉಪವಾಸ ಸತ್ಯಾಗ್ರಹಕ್ಕೆ ಕುಳಿತರು. ಹೀಗಾಗಿ ತಾವು, ಕಲಬುರ್ಗಿ ವಿಶ್ವವಿದ್ಯಾಲಯದ ವಿದ್ವಾಂಸರ ಅಭಿ-ಪ್ರಾಯದ ಆಧಾರದ ಮೇಲೆ ಸನ್ಮಾನ್ಯ ರಾಜ್ಯಪಾಲರಿಗೆ ಶಿಫಾರಸು ಮಾಡಿ ಪರೀಕ್ಷೆಗೆ ಪುಸ್ತಕವು ಕೇಳಲ್ಪಡದಂತೆ ರದ್ದು ಮಾಡಿ, ಪಠ್ಯಕ್ರಮದಿಂದ ಹಿಂತೆಗೆದುಕೊಂಡಿರಿ. ಅದಕ್ಕಾಗಿ ನಿಮಗೆ ಅನೇಕ ಧನ್ಯವಾದಗಳು, ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು.

ಈಗಿನ ಕೋರಿಕೆ.

"ಮಹಾಚೈತ್ರ"–ಪುಸ್ತಕವು ಪಠ್ಯಕ್ರಮದಿಂದ ರದ್ದಾಗಬೇಕೆಂದು ಮನವಿಯನ್ನು ದಿ. 19–9–1994 ರಂದು ಸಲ್ಲಿಸುವಾಗ ವಿಮರ್ಶೆಯನ್ನು ಜೊತೆಗೇ ಇಡಲಾಗಿತ್ತು. ಪುಸ್ತಕವನ್ನೇ ಓದದೆ ಇರುವ ದೊಡ್ಡ ದೊಡ್ಡ ಸಾಹಿತಿಗಳು ತಮ್ಮ ಅಜ್ಞಾನವನ್ನು ಪ್ರದರ್ಶಿಸುತ್ತಿದ್ದೇವೆ ಎಂಬ ಅರಿವೂ ಇಲ್ಲದೆ 'ಪುಸ್ತಕ ಆಕ್ಷೇಪಕರವಾಗಿಲ್ಲ'. 'ಪುಸ್ತಕ ಹೇಗೇ ಇರಲಿ, ಅಭಿವ್ಯಕ್ತಿ ಸ್ವಾತಂತ್ರ್ಯ ದೃಷ್ಟಿಯಿಂದ ಅದು ಪಠ್ಯವಾಗಿ ಇರಬೇಕು' ಎಂದೆಲ್ಲಾ ಹೇಳಿಕೆ ಕೊಟ್ಟು ಜನರ ಕಣ್ಣಲ್ಲಿ ಸಣ್ಣವರಾದರು. ಚಳುವಳಿ ತೀವ್ರವಾದಂತೆ ಓದದೆ ಹೇಳಿಕೆ ಕೊಡುತ್ತಿದ್ದ ಮಹನೀಯರು ಪುಸ್ತಕವನ್ನು ಓದತೊಡಗಿ, ಅದರೊಳಗಣ ದೋಷಗಳನ್ನರಿತು ಒಬ್ಬೊಬ್ಬರೇ ಸುಮ್ಮನಾದುದನ್ನು ಇಡೀ ಕರ್ನಾಟಕದ ಜನತೆ ಗಮನಿಸಿತು. ಇದು ಗಮನಾರ್ಹ ಬೆಳವಣಿಗೆ. ಪುಸ್ತಕ ಓದದೆಯೇ ಮಹಾಚೈತ್ರ ಪಠ್ಯವಾಗಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದ ಶ್ರೀ ಡಾ॥ ಚಿದಾನಂದಮೂರ್ತಿಯವರಂತಹ ಸಂಶೋಧಕ ಸಾಹಿತಿಗಳು ತಮ್ಮ ಅಭಿಪ್ರಾಯ ಬದಲಿಸಿಕೊಂಡುದಲ್ಲದೆ, ವೃತ್ತ ಪತ್ರಿಕೆಯಲ್ಲಿ ತಪ್ಪೊಪ್ಪಿಗೆಯ ಹೇಳಿಕೆ ನೀಡಿ, ಪುಸ್ತಕದಲ್ಲಿ ಐತಿಹಾಸಿಕ ಅಸಂಗತಗಳಿವೆ ಎಂದು ಸೋದಾಹರಣವಾಗಿ ಲೇಖನ ಬರೆದರು. ಪಠ್ಯವಾಗಿದ್ದಾಗ ವಿದ್ಯಾರ್ಥಿಗಳ ವಲಯದಲ್ಲಿ ಸುತ್ತುತ್ತಾ, ಸಾರ್ವಜನಿಕರ ಗಮನವನ್ನು ಅಷ್ಟಾಗಿ ಸೆಳೆಯದಿದ್ದ ಮಹಾಚೈತ್ರ ಚಳುವಳಿಯಿಂದಾಗಿ ಎಲ್ಲರ ಗಮನಕ್ಕೆ ಬಂದಿತು. ಈ ಪುಸ್ತಕವನ್ನು ವಿವರವಾಗಿ ಓದಿರುವ ಬಸವ ಧರ್ಮೀಯರು ದಿ. 11–5–1995 ರಂದು ಒಂದು ವಿಶೇಷ ನಿರ್ಣಯ ಕೈಗೊಂಡು ದಿ. 14–5–1995 ರಂದು ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಬಸವ ಧರ್ಮ ಸಮ್ಮೇಳನದಲ್ಲಿ ಈ ಕೆಳಕಂಡಂತೆ ಘೋಷಿಸಿದ್ದಾರೆ.

[ವಿ. ಸೂ : ಇದರ ಮುದ್ರಿತ ಪ್ರತಿ ಜೊತೆಗೆ ಇಡಲಾಗಿದೆ.]

1. ಮಹಾಚೈತ್ರ ನಾಟಕ ಕೃತಿಯು ಕೇವಲ ವಿದ್ಯಾರ್ಥಿಗಳಿಗಷ್ಟೇ ವಿಷವಲ್ಲ; ಸಾರ್ವಜನಿಕರು ಸಹ ಓದಲು ಅನರ್ಹ ಮತ್ತು ಅಪಾಯಕಾರಿಯಾಗಿದೆ. ಆ ಪುಸ್ತಕ ಜೀವಂತವಾಗಿ ಉಳಿದರೆ ಇಂದಲ್ಲ ಮುಂದಾದರೂ ಲೇಖಕರ ಒಂದು ವಿಷಯುಕ್ತ ಮನಸ್ಸು-ಬುದ್ಧಿಗಳು ಹೊರಚೆಲ್ಲಿದ ಅನಿಷ್ಟವಾಗಿ ನಿಷ್ಕಲಂಕ ಚರಿತ್ರರು, ಪೂಜನೀಯರು ಆದ ಬಸವಣ್ಣನವರು, ಅಕ್ಕಮಹಾದೇವಿ, ಅಕ್ಕನಾಗಲಾಂಬಿಕೆ, ಅಲ್ಲಮ ಪ್ರಭು ಮುಂತಾದವರ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಹುಟ್ಟಿಸುವುದು. ವಿದ್ಯಾರ್ಥಿಗಳಿಗೆ ಬೇಡವಾದುದು, ಸಾರ್ವಜನಿಕರಿಗೂ ಬೇಡ. ಆದ್ದರಿಂದ ಈ ಪುಸ್ತಕವನ್ನು ಒಟ್ಟಾರೆಯೇ ನಿಷೇಧಿಸಬೇಕು (ban); ಚಲಾವಣೆಯಿಂದ, ಪ್ರಕಾಶನದಿಂದ, ಮುದ್ರಣದಿಂದ–ಒಂದೂ ಪ್ರತಿ ಸಾರ್ವಜನಿಕರಿಗೆ ಸಿಗದಂತೆ ಹಿಂತೆಗೆದುಕೊಳ್ಳಬೇಕು.

2. ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜನಪ್ರಿಯ ಪುಸ್ತಕ ಮಾಲಿಕೆಯಿಂದ ಈ ಕೃತಿಯನ್ನು ಮುದ್ರಿಸಿ, ಬಿಡುಗಡೆ ಮಾಡಿದೆ, ಮಾಡುತ್ತಿದೆ. ಆದ್ದರಿಂದ ಸರ್ಕಾರವು ಇಲ್ಲೂ ರದ್ದು ಮಾಡಬೇಕು.

3. ಇಂಥ ಕೆಟ್ಟ ನಾಟಕವನ್ನು ಕನ್ನಡ-ಸಂಸ್ಕೃತಿ ಇಲಾಖೆ ಪುರಸ್ಕರಿಸಿದ್ದು, ಅಲ್ಲಲ್ಲಿ ಆಗಾಗ ನಾಟಕ ಪ್ರದರ್ಶನ ಏರ್ಪಡಿಸುತ್ತಿದೆ. ಹೀಗೆ ನಾಟಕ ಪ್ರದರ್ಶನ ಸಹ ಏರ್ಪಡಿಸಬಾರದು.

ಕೆಲವು ಸಾಹಿತಿಗಳು ಗುಂಪು ಕಟ್ಟಿಕೊಂಡು, ಅನೇಕ ಪತ್ರಿಕೆಗಳ ಬೆಂಬಲ ಅವರಿಗೆ ಮತ್ತು ಇಂಥ ಕೃತಿಗಳಿಗೆ ಇದೆಯೆಂದು ಧಾರ್ಮಿಕ ಶ್ರದ್ಧಾವಂತರನ್ನೆಲ್ಲ ಮೂಢರು, ಮತಾಂಧರು ಎಂದು ಹೀಯಾಳಿಸುತ್ತಾರೆ. ಬೇಕಂತಲೇ ಎಲ್ಲ ವೇದಿಕೆಗಳಲ್ಲಿಯೂ ಕೆದರುತ್ತಾರೆ. ಸಾತ್ವಿಕರಾದ ಧಾರ್ಮಿಕ ಜನರನ್ನು ಕೆರಳಿಸಲು ಉದ್ದೇಶಪೂರ್ವಕವಾಗಿ ಈ ನಾಟಕವನ್ನು ಪ್ರದರ್ಶಿಸಲು ಯತ್ನಿಸುತ್ತಾರೆ ಧಾರವಾಡದ ಕಲಾಭವನದಲ್ಲಿ ದಿ. 14–6–1995 ರಂದು ಶ್ರೀ ಚಂದ್ರಶೇಖರ ಪಾಟೀಲರು ಕುಚೋದ್ಯ ಬುದ್ಧಿಯಿಂದ ಇದೇ ಮಹಾಚೈತ್ರದ ನಾಟಕ ಪ್ರದರ್ಶನ ಇಟ್ಟಿದ್ದರು. ಈ ಕುತಂತ್ರ ತಿಳಿಯುತ್ತಲೇ ಸಮಾಜದ ಗಣ್ಯರು-ಹಿರಿಯರು ಆದ ಶರಣ. ಜಿ. ಜಿ. ದೊಡ್ಡವಾಡರು, ಬಸವ ತತ್ತ್ವವನ್ನು ಆಳವಾಗಿ ತಿಳಿದ ಶರಣ. ರಾಮಜಾಧವ ಇವರುಗಳ ನೇತೃತ್ವದಲ್ಲಿ ರಾಷ್ಟ್ರೀಯ ಬಸವ ದಳ, ವೀರಶೈವ ಸಂಘಟನಾ ಸಮಿತಿ, ಇನ್ನಿತರ ಸಂಘ ಸಂಸ್ಥೆ ಸೇರಿ ಪ್ರತಿಭಟನಾ ಪ್ರದರ್ಶನ ನಡೆದು ಪೋಲೀಸ್ ಅಧಿಕಾರಿಗಳು ಮಧ್ಯೆ ಪ್ರವೇಶಿಸಿ ನಾಟಕ ಪ್ರದರ್ಶನ ರದ್ದು ಮಾಡಿದರು. ಇನ್ನು ಮುಂದೆ ಆ ನಾಟಕ ಎಲ್ಲೂ ಪ್ರದರ್ಶನವಾಗಗೊಡಬಾರದೆಂದು ಬಸವ ಭಕ್ತರು ನಿರ್ಧರಿಸಿದ್ದಾರೆ. ಕೆಲವು ಕುಚೋದ್ಯ ಬುದ್ಧಿಯ ಸಾಹಿತಿಗಳು ಜನರನ್ನು ಕೆರಳಿಸಿ ಸಾಮಾಜಿಕ ಶಾಂತಿ ಭಂಗ ಮಾಡಲೆಂದೇ ನಾಟಕ, ವಿಚಾರ ಸಂಕಿರಣ ಏರ್ಪಡಿಸುತ್ತಾರೆ.

ಪುಸ್ತಕ ವಿಮರ್ಶೆ ಈಗ ಅಗತ್ಯವೆನಿಸುತ್ತಿಲ್ಲ. ಅಷ್ಟು ವಿವರ ಈಗಾಗಲೇ ಸರ್ಕಾರದ ಕಡತವನ್ನು ಸೇರಿದೆ. ಸಲ್ಮಾನ್ ರಶ್ದಿಯ ಸಟಾನಿಕ್ ವರ್ಸಸ್, ತಸ್ಲೀಮಾ ನಸರೀನರ ಲಜ್ಜಾ ಭಾರತವನ್ನು ಪ್ರವೇಶಿಸದಂತೆ ಕೇಂದ್ರ ಸರ್ಕಾರ ಎಚ್ಚರಿಕೆ ವಹಿಸಿತು. ಮಹಾತ್ಮಾಜಿಯವರ ತಾಯಿಯ ಬಗ್ಗೆ ಅಸಭ್ಯವಾದ ಕಲ್ಪನೆಯನ್ನು ಟಿ. ವಿ. ಸಂದರ್ಶನದಲ್ಲಿ ನೀಡಿದ ವ್ಯಕ್ತಿಯಿಂದ ಕೇಂದ್ರ ಸರ್ಕಾರವೇ ಕ್ಷಮಾಯಾಚನೆ ನಿರೀಕ್ಷೆ ಮಾಡಿದ್ದು ಜನಜನಿತವಿದೆ. ಮಹಾಚೈತ್ರ ಪುಸ್ತಕವನ್ನು ಲೇಖಕರು ಯಾವ ಎಗ್ಗೂ ಇಲ್ಲದೆ ಸಮರ್ಥಿಸಿಕೊಳ್ಳುತ್ತಿರುವರು. ಜಗತ್ತಿನಲ್ಲಿ ಯಾವ ಅಪರಾಧಿಯೂ

ತಾನು ತಪ್ಪಿತಸ್ಥನೆಂದು ಒಪ್ಪಿಕೊಳ್ಳುವುದಿಲ್ಲ. ಇನ್ನು ಕೆಲವರು ಆ ಪುಸ್ತಕದಲ್ಲಿ ಯಾವ ದೋಷ ಕಾಣದೆ ಇರುವವರು ಇದ್ದಾರೆ. ಆಹುದು, ಅವರಿಗೆ ಬಸವಣ್ಣನವರೊಡನೆ ಯಾವ ಭಾವನಾತ್ಮಕ ಮತ್ತು ಧಾರ್ಮಿಕ ಸಂಬಂಧವಿದೆ ? ಲಿಂಗಾಯತ ಸಮಾಜದ ಆದಿ ಗುರುವಾದ, ಕಾರಣಿಕ ಪುರುಷ ಬಸವಣ್ಣನವರಿಗೆ ಅವಮಾನವಾಗಬಾರದು, ಅನ್ಯಾಯವಾಗಬಾರದೆಂಬ ಸಂಕಟ ಅವರಿಗೇಕೆ ಬಂದೀತು ? ಅವರವರ ಜಾತಿಗಳ ಮಹಾನುಭಾವರಿಗೆ ಅವಮಾನವಾದಾಗ ಮಾತ್ರ ಅವರು ಪುಟಿದು ಎದ್ದು ನಿಲ್ಲುವರು. ಮುಖ್ಯಮಂತ್ರಿಗಳಾದ ತಮಗೆ ಕೆಲವು ಜವಾಬ್ದಾರಿಗಳನ್ನು ಸಂವಿಧಾನ ವಹಿಸಿದೆ. ಈ ದೇಶದಲ್ಲಿ ಇರುವ ಎಲ್ಲಾ ಧಾರ್ಮಿಕರಿಗೂ ಅವರ ಧಾರ್ಮಿಕ ಸ್ವಾತಂತ್ರ್ಯ-ಹಕ್ಕುಗಳನ್ನು ಕಾಯ್ದುಕೊಳ್ಳಲು ಸಂವಿಧಾನ ಅವಕಾಶ ನೀಡಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ನೆಪದಲ್ಲಿ ಮನಸ್ಸಿಗೆ ಬಂದಂತೆ ಬರೆಯುವ ಸಾಹಿತಿಗಳು, ವಿವಾದಾತ್ಮಕ ಕೃತಿಗಳ ಮೂಲಕವೇ ತಮ್ಮ ಆದಾಯ ವರ್ಧಿಸಿಕೊಳ್ಳ ಬಯಸುವ ಅತಿ ಬುದ್ಧಿವಂತರು ಮುಹಮ್ಮದ್ ಪೈಗಂಬರರ ಬಗ್ಗೆ ಯಾಗಲೀ, ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆ ಯಾಗಲೀ, ಡಾ॥ ಅಂಬೇಡ್ಕರರ ಬಗ್ಗೆ ಯಾಗಲೀ ಬರೆಯಲಿ. ಬಸವಾದಿ ಪ್ರಮಥರು ಸಾತ್ವಿಕರು, ವಿಚಾರ-ಆಚಾರ ಸ್ವಾತಂತ್ರ್ಯ ನೀಡಿ ಎಲ್ಲರಿಗೆ ಧ್ವನಿಕೊಟ್ಟರು ಎಂದು ಅವರ ತಲೆಯಮೇಲೆ ಕೈ ಇಡಲು ಈ ಆಧುನಿಕ ಭಸ್ಮಾಸುರ-ಸಾಹಿತಿಗಳು ಪ್ರಯತ್ನಿಸುತ್ತಾರೆ. ಕುಚೋದ್ಯದ ಸಾಹಿತ್ಯ ಸೃಷ್ಟಿ ಮಾಡುವಲ್ಲಿ ಬಸವಾದಿ ಶಿವಶರಣರನ್ನೇ ಆಯ್ದುಕೊಳ್ಳುವಲ್ಲಿ ಅವರ ಅನುಯಾಯಿಗಳಾದ ಲಿಂಗವಂತರಲ್ಲಿ ಸ್ವಾಭಿಮಾನವಿಲ್ಲದುದು, ಈ ಸಮಾಜದ ಬಹುಪಾಲು ಮಠಾಧೀಶರು ಶಾಲೆ-ಕಾಲೇಜುಗಳಲ್ಲಿ ಆಸಕ್ತರಾಗಿ, ಧಾರ್ಮಿಕ ಹೋರಾಟದಲ್ಲಿ ಅನಾಸಕ್ತರಾದುದು, ಲಿಂಗವಂತರೆಂದು ಓಟು ಪಡೆದ ನಂತರ ಗೆಲ್ಲುತ್ತಲೇ ಸಮಾಜ–ಧರ್ಮ–ಸಂಸ್ಕೃತಿಗಳ ಸಂರಕ್ಷಣೆಯಲ್ಲಿ ಎಳ್ಳಷ್ಟೂ ಆಸಕ್ತಿ ಹೊಂದಿರದ ಕೆಲವು ರಾಜಕಾರಣಿಗಳೂ ಕಾರಣ. ಇದನ್ನೀಗ ನಿಜ ಧರ್ಮವಂತರು ಅರಿತಿದ್ದಾರೆ. ಜನ ಶಕ್ತಿಯೂ ಕ್ರೋಢೀಕರಣವಾಗುತ್ತಿದೆ.

ಆದ್ದರಿಂದ ವಿಶ್ವಗುರು ಬಸವಣ್ಣನವರ ನಿಂದೆ, ವಿಕೃತಿ ಚಿತ್ರಣ, ಅವರ ಸಮಕಾಲೀನ ಶರಣರ ಬಗ್ಗೆ, ವಚನ ಸಾಹಿತ್ಯದ ಬಗ್ಗೆ ಕುಚೋದ್ಯ ಅವಹೇಳನ ತಾಳಿಕೊಳ್ಳುವ ಕಾಲ ಮುಗಿದಿದೆ. ತನು-ಮನ-ಧನ-ಅಭಿಮಾನ-ಸಮಯ-ಪ್ರಾಣ ಈ ಷಟ್ ಸಂಪತ್ತನ್ನು ಅರ್ಪಿಸಲು ಸಿದ್ಧರಾಗಿರುವ ಸಹಸ್ರಾರು ಶರಣ-ಚೇತನಗಳು ಇಂದು ರೂಪುಗೊಂಡಿವೆ.

ಆದ್ದರಿಂದ ಧರ್ಮವಂತರನ್ನು ಕೆರಳಿಸಲೆಂದೇ ದುರುದ್ದೇಶದಿಂದ ಸಂಬಂಧವಿಲ್ಲದ ವೇದಿಕೆಗಳ ಮೇಲೆ ಸಹ ಮಹಾಚೈತ್ರದ ಬಗ್ಗೆ, ಪತ್ಯ ರದ್ದತಿ ಮಾಡಿದ್ದಕ್ಕೆ ಸರ್ಕಾರವನ್ನೂ ಟೀಕಿಸಿ ಮಾತನಾಡುವ ಕೆಲವು ಸಾಹಿತಿಗಳು-ರಾಜಕಾರಣಿಗಳು

ಮುಂತಾದವರ ದುರುದ್ದೇಶದ ನಡಾವಳಿಗೂ ತಡೆ-ಹಾಕುವಂತೆ ಮತ್ತು ಕನ್ನಡ ಸಾಹಿತ್ಯದಲ್ಲಿ ಒಂದು ಕಲಂಕವಾಗಿರುವ ಮಹಾಚೈತ್ರ ಪುಸ್ತಕವನ್ನು ಮಾರುಕಟ್ಟೆಯಲ್ಲಿ ಸಿಕ್ಕಲಾರದಂತೆ ನಿಷೇಧಿಸಬೇಕೆಂದು ಕೋರುತ್ತೇವೆ.

ವಿಶೇಷ ಮನವಿ : ಪುಸ್ತಕವು ದೋಷಯುಕ್ತವಾಗಿದೆ ಎಂದು ಸ್ವತಃ ವಿಶ್ವವಿದ್ಯಾಲಯದವರೇ ಲಿಖಿತ ಅಭಿಪ್ರಾಯ ಕೊಟ್ಟಿದ್ದಾರೆ. ಡಾ॥ ಚಿದಾನಂದಮೂರ್ತಿಯಂತಹ ವಿದ್ವಾಂಸರು ಪುಸ್ತಕ ದೋಷಯುಕ್ತವೆಂದಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ಯಾರ ಅಭಿಪ್ರಾಯವನ್ನು ಪಡೆಯುವ ಅಗತ್ಯ ಇನ್ನು ಉಳಿದಿಲ್ಲ. ದಯವಿಟ್ಟು ಬಸವ ಧರ್ಮೀಯ ಶರಣರು–ಶರಣೆಯರು, ವೃದ್ಧರು–ಮಕ್ಕಳು ಮತ್ತೊಮ್ಮೆ ಬೀದಿಗಿಳಿದು ಚಳುವಳಿ ಮಾಡುವಷ್ಟು ವಿಳಂಬ ಮಾಡದಿರಿ. ಅದರಿಂದ ಎಲ್ಲರ ಸಮಯ-ಶಕ್ತಿ ಹಾಳಾಗುತ್ತದೆ. ಯಾವ ಕಾನೂನು-ವಿಧಿ ಅನ್ವಯಿಸಬೇಕೋ ಅದನ್ನು ಅನ್ವಯಿಸಿ ಮಹಾಚೈತ್ರ ಪುಸ್ತಕವನ್ನು ನಿಷೇಧಿಸಿರಿ ಎಂಬುದು ನಮ್ಮ ನಮ್ರ ಕೋರಿಕೆ.

ಹುಬ್ಬಳ್ಳಿಯ ಈದಗಾ ಮೈದಾನದ ಸಮಸ್ಯೆ, ಮಹಾಚೈತ್ರ ಪತ್ಯ ರದ್ದತಿ-ಇವೆರಡನ್ನು ಕಗ್ಗಂಟನ್ನಾಗಿ ಹಿಂದಿನ ಸರ್ಕಾರ ಮಾಡಿತ್ತು. ಅವೆರಡನ್ನೂ ಸುಲಭವಾಗಿ ಪರಿಹರಿಸಿದ ಮುತ್ಸದ್ದಿಗಳು ನೀವೆಂಬ ಕೀರ್ತಿಗೆ ಪಾತ್ರರಾಗಿದ್ದೀರಿ. ಅದೇ ರೀತಿ ಮಹಾಚೈತ್ರ ಪುಸ್ತಕ ನಿಷೇಧಿಸಿ ನಿಮ್ಮ ಕೀರ್ತಿಯ ಕಿರೀಟಕ್ಕೆ ಇನ್ನೊಂದು ರತ್ನವನ್ನು ಜೋಡಿಸಿಕೊಳ್ಳುವುದರ ಜೊತೆಗೆ ಬಸವ ಧರ್ಮೀಯರ ಮನಸ್ಸಿನ ನೋವನ್ನು ನಿವಾರಿಸಿ, ಹರ್ಷ ಪುಳಕಿತರನ್ನಾಗಿ ಮಾಡುವಿರಾಗಿ ನಂಬಿದ್ದೇವೆ. ಆ ನಿರೀಕ್ಷೆಯೊಡನೆ ಈ ಮನವಿ ಸಲ್ಲಿಸಿದ್ದೇವೆ.

ಶುಭ ಹಾರೈಕೆಗಳೊಡನೆ

ಶರಣ ಎನ್. ಪುಟ್ಟರುದ್ರಪ್ಪ
ಅಧ್ಯಕ್ಷರು,
ಲಿಂ. ಧ. ಮಹಾಸಭೆ, ಬೆಂಗಳೂರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮಪೀಠ
ಕೂಡಲ ಸಂಗಮ

ಗಣ ನಾಯಕಿಯರು

ಶರಣೆ. ದೇವಿಕಾ ಶರಣಪ್ಪ, ಬೆಂಗಳೂರು
ಶರಣೆ. ಮಾಲೂತಾಯಿ ಚಂದ್ರಕಾಂತಸ್ವಾಮಿ ಈಚಲಕರಂಜಿ.
ಶರಣೆ. ಸರೋಜಮ್ಮ ನಾಗರಾಜು, ಮೈಸೂರು.
ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಶರಣೆ. ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಶರಣೆ. ಅಕ್ಕ ಅನ್ನಪೂರ್ಣ, ಬೀದರ

ಗಣ ನಾಯಕರು

ಶರಣ. ಬಸವಕುಮಾರ್ ಪಾಟೀಲ ಗಣ ಪ್ರಮುಖ ಮತ್ತು ಅಧ್ಯಕ್ಷರು, ಕರ್ನಾಟಕ ರಾಜ್ಯ ರಾ.ಬ.ದಳ, ಬೆಂಗಳೂರು
ಶರಣ. ಡಾ॥ ನಿತೀನಚಂದ್ರ ಹತ್ತೀಕಾಳ, ಧಾರವಾಡ
ಶರಣ. ಸುಭಾಷ ಪಾಟೀಲ, ಹೈದರಾಬಾದ್
ಶರಣ. ಆರ್. ಚಂದ್ರಶೇಖರ, ನೀಲಗಿರಿ
ಶರಣ. ವಿಜಯಾನಂದ, ಶಿವಮೊಗ್ಗ
ಶರಣ. ಆರ್. ಜಿ. ಶಟಗಾರ, ಗುಲಬರ್ಗಾ

ಬಸವ ಧರ್ಮ ಪೀಠದ ಅಭಿವೃದ್ಧಿಗಾಗಿ ದೇಣಿಗೆ ನೀಡಿದ ದಾಸೋಹಿಗಳು

(1994 ರ ಸೆಪ್ಟಂಬರ್ ಸಂಚಿಕೆಯಿಂದ ಮುಂದುವರಿದುದು)

– ಕಟ್ಟಡ ನಿಧಿಗೆ –

ಶರಣರುಗಳಾದ :

೧.	ಮಹಾರುದ್ರಗೌಡ ಪಾಟೀಲ, ಗೋಕಾಕ	50,001-00
೨.	ಶಂಕರಪ್ಪ ಕಲ್ಲಪ್ಪಾ ಪಡಶೆಟ್ಟಿ, ಗೊಬ್ಬೂರು	50,001-00
೩.	ಸಿದ್ಧಣ್ಣ ಮಣ್ಣೂರು, ಸಿಂದಗಿ	10001-00
೪.	ಪ್ರಿನ್ಸಿಪಾಲ್, ಸಿಬ್ಬಂದಿ ವರ್ಗ, ನಳಂದ ಕಾಲೇಜ್, ಜಗಳೂರು.	10001-00
೫.	ಡಾ॥ ಎ. ಆರ್. ಕಡಕೋಳ, ಗೋಕಾಕ.	10001-00
೬.	ಜಿ. ವಿ. ಪ್ರಸಾದರಾವ, ಸಿಂಧನೂರು	8001-00
೭.	ಡಿ. ಆರ್. ಪಾಟೀಲ, ಗೋಕಾಕ	6502–00
೮.	ಪ್ರೇಮಾದೇವಿ ಸಂಗಪ್ಪ ಗೂಗವಾಡ, ಗೋಕಾಕ	5001-00
೯.	ಡಾ॥ ಸಿ. ಪಿ. ಪಟ್ಟಣಶೆಟ್ಟಿ, ”	5001-00
೧೦.	ಶಕುಂತಲಾ ಶಂಕರಪ್ಪ ಹಾಲುಭಾವಿ ”	5001-00
೧೧.	ಸುರೇಶ್ ಕೋರೆ, ಹೈದರಾಬಾದ	5001-00
೧೨.	ರಾಜೂ ಗುತ್ತೇದಾರ, ಸಿಂದಗಿ	5001-00
೧೩.	ದುಂಡಪ್ಪ ಮುರಿಗೆಪ್ಪ ಕಲಬುರ್ಗಿ, ಗೋಕಾಕ	5001-00
೧೪.	ಬಸವರಾಜ ಬಾಳಗೌಡ ಪಾಟೀಲ, ಬೇವಿನಹಳ್ಳಿ	5001-00
೧೫.	ಶಂಕರ ರಂಗಪ್ಪ ದೇವರಮನಿ, ಗೋಕಾಕ	5001–00
೧೬.	ಬಾಬೂಗೌಡ ರುದ್ರಗೌಡ ಪಾಟೀಲ, ಗೋಕಾಕ	5001–00
೧೭.	ಹೂವಪ್ಪ ಗಡಣ್ಣವರ, ಗೋಕಾಕ	5001–00
೧೮.	ಜಯದೇವಪ್ಪ ಮಲ್ಲೇಶಪ್ಪ ನೇಗಿನಹಾಳ, ಗೋಕಾಕ	5001–00
೧೯.	ವಿ. ಎಸ್. ಬಿದರಿ, ಗೋಕಾಕ	5001–00
೨೦.	ಗಂಗಪ್ಪಣ್ಣ ಬಾಳಪ್ಪಣ್ಣ ತಾಂವಸಿ, ಗೋಕಾಕ	5001–00
೨೧.	ಎಸ್. ಎಲ್. ತಡಕೋಡ, ಗೋಕಾಕ	5001–00
೨೨.	ಎಸ್. ಜಿ. ಕಾಗತೀಕರ, ”	5001–00
೨೩.	ಚಂದ್ರಪ್ಪ ಮಲ್ಲಪ್ಪ ಗುಮಟಣ್ಣನವರು, ಗೋಕಾಕ	5001–00
೨೪.	ಬಸಪ್ಪ ಮಲ್ಲಪ್ಪ ಗಾಣಗೇರ, ವಣ್ಣೂರು	5001–00
೨೫.	ಎ. ವಿ. ಗೋವಿಂದರಾಜು, ಮೈಸೂರು	2000–00
೨೬.	ಕೆ. ಸಿ. ಯರಗಟ್ಟಿ, ”	1001–00
೨೭.	ಮುರಿಗೆಪ್ಪ ಗುರುಶಾಂತಪ್ಪ ಚಿಕ್ಕೋಡಿ, ಮೈಸೂರು	1001–00
೨೮.	ಅಕ್ಕನ ಬಳಗ, ಮೈಸೂರು	1211–00
೨೯.	ಚಂದ್ರಶೇಖರಯ್ಯ ಹಿರೇಮಠ, ಗೋಕಾಕ	1001–00
೩೦.	ಶೋಭಾ ಅಗ್ರಾಣೆಪ್ಪ ಬಾವಲತ್ತಿ ”	1001–00
೩೧.	ಗುರುಸಿದ್ಧಪ್ಪ ಬಸಪ್ಪ ಕುರ್ಲಿ ”	1001–00
೩೨.	ಅಶೋಕ ಅಪ್ಪಣ್ಣ ಹುರಕಡ್ಲಿ ”	1001–00
೩೩.	ಬಸವರಾಜ ನೂರೊಂದಪ್ಪ ಒಳಗುರ್ಗಿ ”	1001–00
೩೪.	ಮಹಾದೇವಯ್ಯ ಗುರುಪಾದಯ್ಯ ಹಿರೇಮಠ ಗೋಕಾಕ	1001–00
೩೫.	ಬಿ. ಎಂ. ಮಾಸ್ತಮರಡಿ, ,ಗೋಕಾಕ	1001–00
೩೬.	ಚಿದಾನಂದ ಬಸವಗೌಡ ಮಗದುಮ್ ”	1001–00
೩೭.	ಬಸಪ್ಪ ದಾನಪ್ಪ ಜಂತಿ ”	1001–00
೩೮.	ದುಂಡಪ್ಪ ಸಣ್ಣಬಸಪ್ಪ ಜಕಾತಿ ”	1001–00
೩೯.	ಬಸವರಾಜ ವೀರಣ್ಣ ನಾರಾಯಣಪುರ, ನವಲಗುಂದ	1001–00
೪೦.	ಸದಾಶಿವ ಗೂಳಪ್ಪ ಕೊಟಬಾಗಿ, ನಂದಗಾಂವ	1001–00
೪೧.	ಬಾಳಪ್ಪ ಮಲ್ಲಪ್ಪ ಪರವಣ್ಣೆ, ”	1001–00
೪೨.	ಶ್ರೀಶೈಲ ಸಿದ್ಧಪ್ಪ ಪಾಶ್ಚಾಪುರ, ಗೋಕಾಕ	1001–00
೪೩.	ಮಹೇಶ ವೀರಪ್ಪ ಲಟ್ಟೆ, ಗೋಕಾಕ	1501–00
೪೪	ಸಿ. ಬಿ. ಗುಲ್ಲಿ, ಗೋಕಾಕ	1001–00
೪೫.	ಕಾಶಪ್ಪ ಸಾಬಣ್ಣ ಕಲಾಲ, ಗೋಕಾಕ	1001–00
೪೬.	ಬಿ. ಎಸ್. ಪಂಡಿತ, ಗೋಕಾಕ	1001–00
೪೭.	ವೀರಸಂಗಪ್ಪ ಮಲ್ಲಪ್ಪ ಉಣ್ಣೆ, ಗೋಕಾಕ	1001–00
೪೮.	ಎಂ. ಆರ್. ಕಿಸಾನ್, ಗೋಕಾಕ	1001–00
೪೯.	ಮಲ್ಲಪ್ಪ ಗುರುಪಾದಪ್ಪ ದೊಡ್ಡಮನಿ, ಕಲಾದಗಿ	1001–00
೫೦.	ಜಿ. ಎಂ. ಅಂದಾನಿ, ಗೋಕಾಕ	1001–00
೫೧.	ಸಿದ್ದಪ್ಪಣ್ಣ ಪಾಶ್ಚಾಪುರ, ಗೋಕಾಕ	1001-00
೫೨.	ಎಂ. ಜಿ. ವಾಲಿ, ಗೋಕಾಕ	1001-00
೫೩.	ಪಿ. ಎನ್. ಪಾಟೀಲ, ಗೋಕಾಕ	1001–00

೫೪.	ಡಾ॥ ಬಾಬೂರಾವ ಚನ್ನಬಸಪ್ಪ ಆಜರೆ	1001-00
೫೫.	ವೀರಭದ್ರಪ್ಪ ಮಹಾಂತಪ್ಪ ಪಾರಶೆಟ್ಟಿ	1001-00
೫೬.	ಶ್ರೀಶೈಲ ರುದ್ರಪ್ಪ ಟೆಂಗಿನಕಾಯಿ	1001-00
೫೭.	ಶಂಕರ ಸಿ. ಅಮರಶೆಟ್ಟಿ	1001-00
೫೮.	ಶಿವಕುಮಾರ್ ಶಂಕರ್ ರಗಶೆಟ್ಟಿ	1001-00
೫೯.	ಬಸವನಗೌಡ ಚನ್ನಬಸಪ್ಪ ಪಾಟೀಲ	1001-00
೬೦.	ಡಾ॥ ಪ್ರಕಾಶ್ ಅಂಗಡಿ, ಮಳವಳ್ಳಿ	1001-00
೬೧.	ಶಿವಪುತ್ರಪ್ಪ ದುಂಡಪ್ಪ ಕೋಳಿ, ಈಚಲಕರಂಜಿ	1001-00
೬೨.	ಅನ್ನಪೂರ್ಣ ಕಾಶೀನಾಥ ಅವಣಕಾರ, ಕಮಲನಗರ	1001-00
೬೩.	ಸಿದ್ಧರಾಮ ಈರಪ್ಪ ಚೌಧರಿ, ಗೋಕಾಕ	1001-00
೬೪.	ಮಲ್ಲರೆಡ್ಡೆಪ್ಪ ಪಾಟೀಲ, ಹಟ್ಟಿ	1001-00
೬೫.	ಶಿವಕುಮಾರ್ ಬಣಗಾರ, ಹುಬ್ಬಳ್ಳಿ	1001-00
೬೬.	ವಿದ್ಯಾಸಾಗರ ಪಾಟೀಲ, ಹೈದರಾಬಾದ್	1001-00
೬೭.	ವಾಗೀಶ, ಚಿತ್ರದುರ್ಗ	1001-00

(ಮುಂದುವರಿಯುವುದು)

ಧರ್ಮಗ್ರಂಥ ನಿಧಿಗಾಗಿ 1001—00 ರೂ. ಕೊಟ್ಟ ದಾಸೋಹಿಗಳು

ಕ್ರ.ಸಂ. ಹೆಸರು ಮತ್ತು ಊರು

ಶರಣರುಗಳಾದ :

562	ಧನರಾಜ ಗಣಪತಿ ಒಡಿಗೇರ, ರಾಚಪ್ಪ ಗೌಡಗಾಂವ	
563	ನಾಗಪ್ಪ ಕರೆಪ್ಪನವರು, ಶೇಗುಣಸಿ	
564	ವಿ. ರಾಮರೆಡ್ಡಿ, ಬಳ್ಳಾರಿ	
565	ಬಸೆಟ್ಟೆಪ್ಪ ಪಾಂಡೆಪ್ಪ ಅಂಗಡಿ, ಗೋಕಾಕ್	
566	ದಾಕ್ಷಾಯಿಣಿ ಶಿವಮೂರ್ತೆಪ್ಪ ಮುಂಗರವಾಡಿ, ಗೋಕಾಕ್	
567	ಗುರುಲಿಂಗಪ್ಪ ಬಸವರಾಜ ಮೂಗಿ, ಗೋಕಾಕ್	
568	ಎಸ್. ಡಿ. ಸಿರಸಿಂಗಿ, ಗೋಕಾಕ್	
569	ಬಾಳಪ್ಪ, ಮಹಾಲಿಂಗಪ್ಪ ಇಂಗಳೇ, ಗೋಕಾಕ್	
570	ಎಮ್. ಬಿ. ಹುನ್ನೂರ, ಗೋಕಾಕ್	
571	ಶಿವಯ್ಯ ಗುದಗಣ್ಣನವರ, ಗೋಕಾಕ	
572	ನಿಂಗಪ್ಪ ಬಸಪ್ಪ ಅಂಗಡಿ, ಎಲ್.ಐ.ಸಿ.,	ತುರಮರಿ
573	ಎಮ್. ಸಿ. ಹತಪಾಕಿ,	ಗೋಕಾಕ
574	ಬಾಬುಗೌಡ ರುದ್ರಗೌಡ ಪಾಟೀಲ	”
575	ಶ್ರೀಶೈಲಪ್ಪ ಬಸಪ್ಪ ಶೆಟ್ಟಿ,	ಗೋಕಾಕ
576	ಡಾ॥ ವಿಶ್ವನಾಥ ವೀರಭದ್ರಪ್ಪ ಬಾಗಲಕೋಟೆ	”
577	ಎಲೆ ಬಸಪ್ಪನವರು ಮತ್ತು ಮಕ್ಕಳು.	ವಿಜಯಪುರ
578	ಎಮ್. ಸಿ. ವೀರಪ್ಪ, ಲಿಂ॥ ಶಾಂತಮ್ಮ, ಎನ್.ವಿ. ರಾಜು,	ಭದ್ರಾವತಿ
579	ಎನ್. ಜೆ. ಹಾಲಪ್ಪ,	ಭದ್ರಾವತಿ
580	ಎಸ್. ಬಿ. ಅವಜಿ,	ಸಿಂದಗಿ
581	ಕಮಲಾ, ಈಶ್ವರ ಸಂಕೇಶ್ವರ,	ಕಣಬರಗಿ
582	ಕೆ. ಟಿ. ಮಲ್ಲಿಕಾರ್ಜುನ,	ತಿಮ್ಮಪ್ಪಯ್ಯನಹಳ್ಳಿ
583	ಜಯಶ್ರೀ, ಬಿ. ಶಿವಪೂರ,	ಹೊಮ್ಮರಡಿ
584	ಬಿ. ವಿ. ಕಾಮತ್,	ಗೋಕಾಕ
585	ಮುತ್ತಪ್ಪ ಶಿವಲಿಂಗಪ್ಪ ಸಂಕಣ್ಣನವರ,	ಬಿಜಾಪುರ
586	ಅನುಸೂಯಮ್ಮ, ಕರ್ನಲ್. ರಾಜಶೇಖರಪ್ಪ,	ಶಿವಮೊಗ್ಗ
587	ಟಿ. ಎಸ್. ನಾಗರತ್ನ,	ಶಿವಮೊಗ್ಗ
588	ಟಿ. ಶಿವಲಿಂಗಪ್ಪ, ಕಂಟ್ರಾಕ್ಟರ್,	ಜಗಳೂರು
589	ಎಚ್. ಹಣಮಂತಪ್ಪ,	ಚಿತ್ರದುರ್ಗ
590	ಸಿದ್ಧರಾಮೇಗೌಡ ಮತ್ತು ಶ್ರೀಮತಿ ಪ್ರೇಮಾ,	ಬಳ್ಳಾರಿ
591	ಬಿ. ವೀರನಗೌಡ,	ಬಳ್ಳಾರಿ
592	ದೊಡ್ಡಬಸಪ್ಪ ಕೋರಿ,	ಬಳ್ಳಾರಿ
593	ಸದಾಶಿವರೆಡ್ಡಿ ದೇಶನೂರು,	ಬಳ್ಳಾರಿ
594	ವೀರಭದ್ರಪ್ಪ, ಹಿಂದುಪುರ.	ಬಳ್ಳಾರಿ
595	ಜಿ. ಗುರುಪಾದಪ್ಪ,	ಬಳ್ಳಾರಿ
596	ರತ್ನಕ್ಕ ನಾಗನಗೌಡ,	ಬಳ್ಳಾರಿ
597	T.H.M. ಕಾಯಕಪ್ರದಾ D/o T.H.M. ಮೃತ್ಯುಂಜಯ,	ಬಳ್ಳಾರಿ
598	ಸಿ.ಪಿ. ಮಂಜುನಾಥ,	ಬೆಂಗಳೂರು
599	ಆರ್. ಪಾರ್ವತಿ ಪ್ರಕಾಶ್,	ಚನ್ನಪಟ್ಟಣ
600	ಎಮ್. ರಾಜಗೋಪಾಲ್,	ಚನ್ನಪಟ್ಟಣ
601	ಡಾ॥ ವಿ. ನಾಗರಾಜ,	”

602 ಸಿ. ಆರ್. ಸರ್ಪಭೂಷಣ, ಚೆನ್ನಪಟ್ಟಣ
603 ಸಿ. ಎಸ್. ತಾರಾನಾಥ, ಗನ್ನಾಯಕನಹಳ್ಳಿ
604 ಡಾ॥ ವಿ. ವಿ. ಬಾಗಲಕೋಟಿ, ಗೋಕಾಕ
605 ಬಸವರಾಜ ಭೀಮದೆ, (2000 ರೂ, ಕೊಟ್ಟಿದ್ದಾರೆ.) ಸೊಲ್ಲಾಪುರ
606 ಎ. ತಾರಕನಾಥ, ಹಿರಿಯೂರು

(ಮುಂದುವರಿಯುವುದು)

1111 ರೂಗಳನ್ನು ಕೊಟ್ಟು ದಾಸೋಹ ನಿಧಿಗೆ ಕಾಣಿಕೆ ಸಲ್ಲಿಸಿದವರು

ವಿಶೇಷ ಸೂಚನೆ : ದಾಸೋಹ ನಿಧಿಗೆ ಕೊಟ್ಟ ಶರಣರು ಏನಾದರೂ ಕಾರ್ಯ ನಿಮಿತ್ತ ವಿಶೇಷ ದಿನಾಂಕ ಸೂಚಿಸುವರು, ಮತ್ತೆ ಕೆಲವರು ಯಾವುದಾದರೂ ಒಂದು ದಿನ ಮಾಡಿರಿ ಎನ್ನುವರು; ಮತ್ತೆ ಕೆಲವರು ಯಾವ ವಿವರವನ್ನೂ ತಿಳಿಸರು. ಆದ್ದರಿಂದ ಈ ಅಸ್ಪಷ್ಟತೆ ತಪ್ಪಿಸಲು ಈ ಸಂಚಿಕೆಯಿಂದ ಆಯಾ ದಾಸೋಹಿಗಳ ಹೆಸರಿನ ಮುಂದೆ ಅವರ ದಾಸೋಹ ಕಾರ್ಯಕ್ಕೆ ನಿಗದಿ ಪಡಿಸಿರುವ ದಿನಾಂಕ ಸಹ ಕೊಡಲಾಗುವುದು. ತಿಂಗಳ ಹೆಸರು ದಿನಾಂಕ ಕಾಣಿಸಲಾಗಿದೆ;

ಕ್ರ. ಸಂ.	ಹೆಸರು ಮತ್ತು ಊರು	ದಾಸೋಹದ ದಿನ
	ಶರಣರುಗಳಾದ :	
1720.	ಟಿ. ಚಂದ್ರಯ್ಯ ಮತ್ತು ಮಕ್ಕಳು, ಮತ್ಸಸಮುದ್ರ	ಮಾರ್ಚ್ 2
1721.	ಭಗವಾನ್‌ದಾಸ್. ಹರಿಕೃಷ್ಣದಾಸ್ ಬಜಾಜ್, ಉದಗೀರ	ಸೆಪ್ಟಂಬರ್ 29
1722.	ಶ್ರೀ ಜೈನ ಶೇಷಣ್ಣಗೌಡರು, ಹೂವಿನ ಹಡಗಲಿ	ಡಿ-9
1723.	ಆರ್. ಗೋವಿಂದ ರೆಡ್ಡಿ, " "	ಡಿ-24
1724.	ಜಿ. ಹಂಚ್ಚಣ್ಣಶೆಟ್ಟಿ, " "	(ಫಾಲ್ಗುಣ ತದಿಗ)
1725.	ಕೆ. ರಶ್ಮಿವಾಮಪ್ಪ, ಮೈದೂರ ಗ್ರಾಮ	ಡಿ-25
1726.	ಟಿ. ದ್ಯಾಮಪ್ಪ, ಹೂವಿನ ಹಡಗಲಿ	ಡಿ-26
1727.	ಕೆ. ರಾಘವೇಂದ್ರಶೆಟ್ಟಿ ಮತ್ತು ಸಹೋದರರು,	ಡಿ-27
1728.	ಎಸ್. ಎಂ. ನಾರಾಯಣಶೆಟ್ಟರು,	ಡಿ-27
1729.	ಭುವನೇಶ್ವರಿ ಶೀಲಚಂದ್ರ, ಹಾಸನ	(ಡಿ-11)
1730.	ಶಿವಲಿಂಗಮ್ಮ ಕೊಟ್ರೇಶ, ದಾವಣಗೆರೆ	(ಡಿ-30)
1731.	ಕೆ. ಎ. ವಸಂತ ಕುಮಾರ್, ಚಿಕ್ಕಬಳ್ಳಾಪುರ	(ಪಿ-ವಿ)
1732.	ಎಸ್. ಎಸ್. ವಿರಕ್ತಮಠ, ಬಾಗಲಕೋಟೆ	(ಜ-13)
1733.	ನಾಗಪ್ಪ ಹೊಳೆಯಪ್ಪ ಆಲಗುಂದಿ, ಮುದಕವಿ	(ಮಾ-20)
1734.	ಪಿ. ದೊರೈರಾಜ್, ಕರುಂಪಾಳ್ಯಂ, ನೀಲಗಿರಿ	(ಮಾ-20)
1735.	ಕೆ. ಶಿವಲಿಂಗಪ್ಪ, ಬೆಂಗಳೂರು	(ಮಾ-20)
1736.	ಎಸ್. ಎನ್. ಚಂದ್ರಣ್ಣ, ಚಿತ್ರದುರ್ಗ	(ಮಾ-20)
1737.	ಸೌಭಾಗ್ಯ ನಾಗರಾಜ, ಮೈಸೂರು	(ಆ-17)
1738.	ಅನ್ನಪೂರ್ಣಮ್ಮ. ಮೈಸೂರು	(ಅ-25)
1739.	ಭಾರತಿ ಜಯಪ್ರಕಾಶ ನಾವಲಗಿ, ಗೋಕಾಕ	(ಮಾ-20)
1740.	ಮುರಿಗೆಪ್ಪ ಗುರುಶಾಂತಪ್ಪ ಚಿಕ್ಕೋಡಿ, ಗೋಕಾಕ	(ಶ್ರಾ. ಸೋ)
1741.	ಮಹಾಂತಪ್ಪ ಈಶ್ವರಪ್ಪಾ ಕಣಗಲಿ, ಗೋಕಾಕ	(ಜ-10)
1742.	ಸಾಹೇಬಗೌಡ ಬಸವಂತರಾಯ ಬಂಟನೂರು, ಗೋಕಾಕ	(ಸ-30)
1743.	ಸೋಮಪ್ಪ ಬಾಳಪ್ಪ ಹೊಸಮನಿ, ಗೋಕಾಕ	(ಜು-11)
1744.	ನಾಗರತ್ನ ಸಿದ್ಧರಾಮಪ್ಪ ಸೊಂಡೂರ, ಗೋಕಾಕ	(ಜು-24)
1745.	ಶಿವಲಿಂಗಪ್ಪ ಕಲಗೌಡ ಪಾಟೀಲ, ಗೋಕಾಕ	(ಡಿ-6)
1746.	ಗಂಗಪ್ಪ ಬಸಪ್ಪ ಕಡಬಿ, ಗೋಕಾಕ	(ಫೆ-18)
1747.	ಈರವ್ವ ಅಡಿವೆಪ್ಪ ತುಪ್ಪದ, ಗೋಕಾಕ	(ಫೆ-23)
1748.	ಮಲ್ಲಿಕಾರ್ಜುನ ಚನ್ನಬಸಪ್ಪ ಘೋಡಗೇರಿ, ಗೋಕಾಕ	(ಮಾರ್ಚ-21)
1749.	ಮಲ್ಲಿಕಾರ್ಜುನ ಗಂಗಾದರ ಹನಗಂಡಿ, ಗೋಕಾಕ	(ಮಾರ್ಚ-21)
1750.	ಶ್ರೀಮತಿ ಮಹಾನಂದ C/o ಲಿಂಗಪ್ಪ ಸಿದ್ನಾಳ್, ಗೋಕಾಕ	(ಶ್ರಾ; ಎರಡನೆ ಸೋಮ)
1751.	ವಿ. ಬಿ. ಪರುಶೆಟ್ಟಿ, ಗೋಕಾಕ	(ಮೇ-14)
1752.	ಅನಸೂಯಾ ಮುದುಕಪ್ಪ ಹೊಸಮನಿ, ಗೋಕಾಕ	(ನ-16)
1753.	ಬಿ. ಎಸ್. ಕೋಳೂರ ಮಠ. ಗೋಕಾಕ	(ಡಿ-21)
1754.	ಬಸೆಟ್ಟೆಪ್ಪ. ಪಾಂಡೆಪ್ಪ ಅಂಗಡಿ. ಗೋಕಾಕ	(ಏ-10)
1755.	ಶಾಂತಮ್ಮ ದೇವಪ್ಪಾ ಕಲಬುರ್ಗಿ; ಗೋಕಾಕ	(ಮಾರ್ಚ 21)
1756.	ಬಿ. ಆರ್. ಶಿವನಾಯ್ಕರ C/o V. H. ಮಳ್ಳಿ, ಗೋಕಾಕ	(ಮಾ-21)
1757.	ವಿರುಪಾಕ್ಷಯ್ಯ ಸಿದ್ಧರಾಮಯ್ಯ, ಶಿಂಧೋಳಿಮಠ, ಗೋಕಾಕ	(ಮಾ-21)
1758.	ಮಾರುತಿ ಮಹಾದೇವಪ್ಪ ಕಲಾಲ, ಗೋಕಾಕ	(ಮೇ-10)
1759.	ಶಕುಂತಲಾ ಶಂಕರ ಗೌಡ ಪಾಟೀಲ C/o ಎಸ್. ಎಮ್. ಪಾಟೀಲ. ಗೋಕಾಕ	(ಮಾರ್ಚ-22)

1760. ಪಿ. ಮಲ್ಲಿನಾಥ ಪಿ. ಈರವ್ವಾ ಮತ್ತು ಮಕ್ಕಳು (ಮಾರ್ಚ-22)
ಹಗರಿಬೊಮ್ಮನಹಳ್ಳಿ
1761. ಸಾತಪ್ಪ ಶಂಕರ ನಾಶಿಪುಡಿ. ಗೋಕಾಕ (ಮಾರ್ಚ-22)
1762. ಮಹಾದೇವಪ್ಪ ದುಂಡಪ್ಪ ಕಲಬುರ್ಗಿ. ಗೋಕಾಕ (ಶ್ರಾವಣ ಮಾಸದಲ್ಲಿ)
1763. ವೀರಸಂಗಪ್ಪ ರುದ್ರಪ್ಪ ದೇವನಾಳ. ಘಟಪ್ರಭಾ " "
1764. ಎಸ್. ಡಿ. ಶಿರಸಂಗಿ ಗೋಕಾಕ (ಮಾರ್ಚ-22)
1765. ಶಂಕರಪ್ಪ ಮಲ್ಲಪ್ಪ ಲಿಂಗೋಜಿ. ಗೋಕಾಕ (ಮೇ-8)
1766. ಬಾಳಪ್ಪ ಮಹಾಲಿಂಗಪ್ಪ ಇಂಗಳೆ. ಗೋಕಾಕ (ಮಾರ್ಚ-23)
1767. ಎಮ್. ಎಸ್. ಉತ್ತೂರ. ನಿವೃತ್ತ I.O.S. ಗೋಕಾಕ (ಮಾರ್ಚ-23)
1768. ಮಲ್ಲಮ್ಮ ಎಸ್. ಸನದಿ. ಗೋಕಾಕ (ಮಾರ್ಚ-23)
1769. ಶಿವಾನಂದ ಮಹಾದೇವ ಬನ್ನೂರ, ಗೋಕಾಕ (ಅಕ್ಟೋಬರ್-21)
1770. ದಾನಪ್ಪ ಬಸೆಶೆಟ್ಟೆಪ್ಪ ಶೆಟ್ಟಿ, ಗೋಕಾಕ (ಮಾರ್ಚ-23)
1771. ಬಸವಲಿಂಗವ್ವಾ (ಸರೋಜಾ)
ಸಾತಪ್ಪ ಕಣಗಲಿ, ಗೋಕಾಕ (ಏಪ್ರಿಲ್-13)
1772. ಚಂದ್ರಶೇಖರ ಗುರುಸಿದ್ದಪ್ಪ, ಮಿರ್ಜಿ, ಗೋಕಾಕ (ಮಾರ್ಚ-23)
1773. ಸತ್ಯನಾರಾಯಣ ಕಲ್ಲಪ್ಪ ಖಡಕಭಾವಿ, ಗೋಕಾಕ (ಅಕ್ಷಯ ತೃತೀಯ ದಿನ)
1774. ಪ್ರೊ. ಬಿ. ಕೆ. ಕುಂಬಿ, ಗೋಕಾಕ (ಮಾರ್ಚ-21)
1775. ಸಿದ್ಧರಾಮ ಈರಪ್ಪಾ ಚೌದರಿ, ಗೋಕಾಕ (ಮಾರ್ಚ-24)
1776. ಶಾಂತಾದೇವಿ ಮತ್ತು ಪ್ರೊ. ಬಿ.ಜಿ. ಮಮದಾಪುರ, ಗೋಕಾಕ (ಡಿ-2)
1777. ಶಂಕರ ಶಿ. ಕಮಡಗಿ, ಗೋಕಾಕ (ಮಾರ್ಚ-24
1778. ಲಿಂಗಪ್ಪ ಮಲ್ಲಪ್ಪ ಹೆಗ್ಗಳಗಿ C/o
ಬಸವರಾಜ ಚನ್ನಪ್ಪ ಹತಪಾಕಿ, ರಬಕವಿ, (ಮಾರ್ಚ-24)
1779. ಭೀಮಪ್ಪ ದುರ್ಗಪ್ಪ ಸಂಗಳಾಪುರ, ಗೋಕಾಕ (ಮಾರ್ಚ-24)
1780. ತುಕಾರಾಮ ಕಲ್ಲಪ್ಪ ಬಾಗಾಯಿ, ಗೋಕಾಕ (ಮಾರ್ಚ-24)
1781. ಬಸವಣ್ಣೆಪ್ಪ ಸೆಡ್ಡೆಪ್ಪ ಸಂಗಳಾಪೂರ, ಗೋಕಾಕ (ಮಾರ್ಚ-25)
1782. ರಾಜಶೇಖರ ರಾಚಪ್ಪ ಅಂದಾನಿ, ಗೋಕಾಕ (ಮಾರ್ಚ-25)
1783. ಮಲ್ಲಪ್ಪ ದುಂಡಪ್ಪ ಜೋಳದ, ಗೋಕಾಕ (ಮಾರ್ಚ-25)
1784. ಸರೋಜಿನಿ ಬಾಬುರಾವ ಅಜರೆ, ಗೋಕಾಕ "
1785. ಮಹಾದೇವಪ್ಪ ಬಸವಣ್ಣೆಪ್ಪ ಮುನವಳ್ಳಿ, ಗೋಕಾಕ ಮಾರ್ಚ-25)
1786. ಬಿ. ಪಿ. ಪಾಟೀಲ, ಗೋಕಾಕ (ಮಾರ್ಚ-25)

1787. ಜಿ. ಬಿ. ಕಲ್ಲೋಳಿ, ಜ್ಯೂನಿಯರ್ ಎಂಜಿನಿಯರ್, (ಮಾರ್ಚ-26)
1788. ರಾವಸಾಹೇಬ ರಾಮಣ್ಣ ನೇಗಿನಾಳ, ಗೋಕಾಕ (ಮಾರ್ಚ-2)
1789. ಎಸ್. ಎಸ್. ಉಪ್ಪಿನ, ಗೋಕಾಕ (ಮಾರ್ಚ-26)
1790. ಪರಪ್ಪ ಸಿದ್ಧರಾಮ ಕಮತೆ, ಬೆಳಗಾವಿ (ಮಾರ್ಚ-26)
1791. ಮಹಾದೇವ ಕೆಂಚಪ್ಪ ಕರೆಪ್ಪಗೋಳ, ಗೋಕಾಕ (ಮಾರ್ಚ-26)
1792. ಡಾ॥ ವಿಶ್ವನಾಥ ವೀರಭದ್ರಪ್ಪ ಬಾಗಲಕೋಟ, ಗೋಕಾಕ (ಮಾರ್ಚ-27)
1793. ಗುಪ್ತ ಕಾಣಿಕೆ (ಮಾರ್ಚ-27)
1794. ಪ್ರೊ. ಎಮ್. ಕುದರಿ, ಗೋಕಾಕ (ಮಾರ್ಚ-27)
1795. ಅನುಸೂಯಾ ಅಂದಾನಪ್ಪ ಚುನಮುರಿ, ಗೋಕಾಕ (ಮಾರ್ಚ-27)
1796. ಸೋಮಲಿಂಗಪ್ಪ ಚನಮಲ್ಲಪ್ಪ ಚಿನಗುಡಿ, ಗೋಕಾಕ (ಮಾರ್ಚ-27)
1797. ಪ್ರೊ॥ ಬಿ. ಜಿ. ಪಾಟೀಲ, ಗೋಕಾಕ (ಮಾರ್ಚ-27)
1798. ಎಮ್. ಎಚ್. ಉತ್ತೂರು Rtd J.O.S. ಗೋಕಾಕ (ಮಾರ್ಚ-28)
1799. ಪ್ರಿನ್ಸಿಪಲ್ ಪ್ರೊ॥ ಸಂಕಣ್ಣನವರ ಸಾಗರ, ಗೋಕಾಕ (ಮಾರ್ಚ-28)
1800. ಎಮ್. ಎಸ್. ವಾಲಿ, ಯರಗಟ್ಟಿ (ಮಾರ್ಚ-28)
1801. ಬಸವಲಿಂಗಪ್ಪ ಶಿವಕುಮಾರ ಘನವಟ್ಟಿ, ಗೋಕಾಕ (ಮಾರ್ಚ-28)
1802. ಶಾಂತಪ್ಪ ಶಂಕರ ನಾಶಿಪುಡಿ, ಗೋಕಾಕ (ಮಾರ್ಚ-28)
1803. ಬಿ. ಎ. ತುಂಬಚಿ, ಗೋಕಾಕ (ಮಾರ್ಚ-29)
1804. ಪ್ರೊ॥ ಎಮ್. ಜಿ. ಸಂಕಣ್ಣನವರ, ಗೋಕಾಕ (ಮಾರ್ಚ-29)
1805. ದುಂಡಪ್ಪ ಹನುಮಂತಪ್ಪ ಸಂಶುದ್ಧಿ, ಗೋಕಾಕ (ಮಾರ್ಚ-29)
1806. ಶಿವನಗೌಡ ಚನ್ನಬಸಪ್ಪ ಪಾಟೀಲ, ಗೋಕಾಕ (ಮಾರ್ಚ-29)
1807. ಸಿ. ಎಚ್. ಕಟಗೇರಿ, ಗೋಕಾಕ (ಮಾರ್ಚ-29)
1808. ಬಾಳಗೌಡ ಪರಗೌಡ ಪಾಟೀಲ, ಗೋಕಾಕ (ಮಾರ್ಚ-30)
1809. ಬಿ. ಎಮ್. ಬುಜಣ್ಣನವರ, ಗೋಕಾಕ (ಮಾರ್ಚ-30)
1810. ರಾಜಶೇಖರ ಶಾಂತಪ್ಪ ಬೆಳ್ಳಂಕಿ, ಗೋಕಾಕ (ಮಾರ್ಚ-30)
1811. ಎಂ. ದೇವರಾಜ, ವಿಜಯಪುರ (ಮಾರ್ಚ-30)
1812. ಚಂದ್ರಪ್ಪ C/o ನಂಜುಂಡಪ್ಪ, ವಿಜಯಪುರ (ಮಾರ್ಚ-30)
1813. ಬಿ. ಕೃಷ್ಣಪ್ಪ, ರೇಷ್ಮೆ ನಿರೀಕ್ಷಕರು. ಕೋಲಾರ (ಮಾರ್ಚ-31)
1814. ನಾಗರತ್ನಮ್ಮ E. L. ಚನ್ನಬಸಪ್ಪನವರು, (ಅಕ್ಟೋಬರ-18)
ಬೀಚಗಾನಹಳ್ಳಿ

1815. ಎಚ್. ಅನಸೂಯಮ್ಮ ಮತ್ತು ಮಕ್ಕಳು (ಆಗಸ್ಟ-15)
ಚಿಕ್ಕಬಳ್ಳಾಪುರ

1816. ಪವಿತ್ರ ಹೇಮಂತಕುಮಾರ, ಕ್ಯಾತಸಂದ್ರ (ನವಂಬರ-7

1817. ಸ್ವಾಮಂತಿ ಮುಂಡರಗಿ ಸಂಪಮ್ಮ ಶ್ರೀಕಂಠಪ್ಪ ಮತ್ತು (ಮಾರ್ಚ-31)
ಮಕ್ಕಳು, ಶಿವಮೊಗ್ಗ

1818. ಟಿ. ಎಸ್. ನಾಗರತ್ನಸ್ವಾಮಿ, ಶಿವಮೊಗ್ಗ (ಶಿವರಾತ್ರಿ ಅಮಾವಾಸ್ಯೆ)

1819. ನಾಗಭೂಷಣ S/o ರಾಜಶೇಖರಪ್ಪ ಬಿ. ವಿ. (ವಿಜಯದಶಮಿ)
ಭದ್ರಾವತಿ

1820. ಜಿ. ಶಿವಾನಂದಪ್ಪ ಮತ್ತು ಮಕ್ಕಳು, ಭದ್ರಾವತಿ (ಫೆಬ್ರವರಿ-8)

1821. ಗಂಗಾ ಕುಬುಸದ ಮತ್ತು ಡಾ|| ಪ್ರಭು ಕುಬುಸದ (ಮಾರ್ಚ-31)
ಭದ್ರಾವತಿ

1822. ಜಿ. ಪಿ. ಕುಮಾರ, ಭದ್ರಾವತಿ (ಅಕ್ಕನ ಹುಣ್ಣಿಮೆ)

1823. ಗಂಗವ್ವಾ ನಿಂಗಪ್ಪ ಮಳ್ಳಿಕೇರಿ ಅಮರಶೆಟ್ಟಿ, (ಏಪ್ರಿಲ್-16)
ಬೈಲಹೊಂಗಲ

1824. ಎಸ್. ಎ. ಮಿರ್ಜಿ, ನಿಪ್ಪಾಣಿ (ಮಾರ್ಚ-31

1825. ಶ್ರೀಶೈಲಪ್ಪ ರಾಚಪ್ಪನವರ, ಶೇಗುಣಸಿ (ಬಸವ ಪಂಚಮಿ)

1826. ನಾರಾಯಣಮ್ಮ, ಬಿ. ಇ. ಭೀಮಯ್ಯಶೆಟ್ಟಿ, ಸಿರುಗುಪ್ಪ (ಮಾರ್ಚ-31)

1827. ಕಲ್ಯಾಣಿ W/o ರಾಜಕುಮಾರ ಪಾಟೀಲ, ಬೀದರ (ಜನವರಿ-7)

1828. ವೀರಣ್ಣ ಕ. ದಾಟನಾಳ, ಹುಬ್ಬಳ್ಳಿ (ಏಪ್ರಿಲ್-24)

1829. ಜಿ. ಪಿ. ಮಲ್ಲಿಕಾರ್ಜುನಯ್ಯ ಮತ್ತು ಸಹೋದರರು,
ರಂಗಸಮುದ್ರ (ಏಪ್ರಿಲ್-1)

1830. ಸುಜನಾ ಪುಣ್ಯಶೆಟ್ಟಿ C/o ಶಂಕರೆಪ್ಪ ತಗಾರೆ, ಬೀದರ "

1831. ವೆಂಕನಗೌಡರು ರಂಗನಗೌಡರು ಪಾಟೀಲ, ಕಮಡೋಳಿ "

1832. ಬಿ. ಮಲ್ಲಣ್ಣ ಮತ್ತು ಗಂಗಮ್ಮ, ಚಿತ್ರದುರ್ಗ "

1833. ಎಮ್. ಎಸ್. ಶಿವಾನಂದ S/o M. ಶಾಂತಣ್ಣ,
ಹಿಂದುಪುರ

1834. ಶಂಕರಪ್ಪ ದುಂಡಪ್ಪ ಮಹಾಂತಗೋಳ, ರಾಜಾಪುರ (ಜನವರಿ-14)

1835. ಮಹಾದೇವ ನಿಂಗಪ್ಪ ಕುರುಬರ, ಖವಟಕೊಪ್ಪ (ಮಾರ್ಚ-27)

1836. ಎಸ್. ವಿ. ರಾಜು, ಭದ್ರಾವತಿ (ಏಪ್ರಿಲ್-2)

1837. ಬಾಳಪ್ಪ ಈರಪ್ಪ ಪೈರಾಸಿ, ಚೇರ್ಮನ್, ಸಾ|| ಪರಕನಹಟ್ಟಿ "

1838. ಚಂಪವ್ವಾ ಶಿವಬಾಳ ದುಮಾಲೆ, ನಿಪ್ಪಾಣಿ (ಆಗಸ್ಟ-19)

1839. ಶ್ರೀಮತಿ ಕಸ್ತೂರವ್ವ ಕೋರಿ C/o ಬಸವರಾಜ
ಹಡಪದ, ಗೋಕಾಕ (ಶ್ರಾ. ಮಾಸದ ಎರಡನೆಯ ಸೋಮ)

1840. ಜಿ. ತಿಪ್ಪಣ್ಣ ಮತ್ತು ಭದ್ರಮ್ಮ, ತಿಮ್ಮಯ್ಯನಹಳ್ಳಿ (ಏಪ್ರಿಲ್-2)

1841. ಬಿ. ಬಿ. ತೇಗೂರು, ಅಳ್ನಾವರ (ಬಸವ ಪಂಚಮಿ)

1842. ಎಚ್. ಶರಣಪ್ಪಗೌಡ ರಾಯಚೂರು, ಹರವಿ (ಶ. ಮೇ. ದಿನ ದಾಸೋಹ)

1843. ಬಸವಂತರಾವ್ ಪಾಟೀಲ, ಶಹಾಬಾದ (ಫೆಬ್ರವರಿ-1)

1844. ನಾಗಶೆಟ್ಟಿ ಶಹಾಬಾದ (ಮಾರ್ಚ-4)

1845. ಮುತ್ತಪ್ಪ ಶಿವಲಿಂಗಪ್ಪ ಸಂಕಣ್ಣನವರ, ಬಿಜಾಪುರ (ಫೆಬ್ರವರಿ-1)

1846. ಅನಸೂಯಮ್ಮ ಕರ್ನಲ್ ರಾಜಶೇಖರಪ್ಪ, ಶಿವಮೊಗ್ಗ (ಅಕ್ಟೋಬರ-10)

1847. ಎಸ್. ಬಿ. ಮಂದಾಳೆ, ಶಿವಶಾಹಿ (ಏಪ್ರಿಲ್-3)

1848. ಮಹಾದೇವಪ್ಪ ಸಿದ್ಧಪ್ಪ ದುಂಡಗಿ, ಸಂಕೇಶ್ವರ (ಡಿಸಂಬರ್-3)

1849. ವೀರಪ್ಪ (ಬಾಬಣ್ಣ) ವ್ಹಿ. ಉಪ್ಪಿನ, ಬೈಲಹೊಂಗಲ (ನವಂಬರ್-30)

1850. ಭೂದೇವಿ ಬಸವರಾಜ ಶ್ರೇಷ್ಠಿ, ಹುಬ್ಬಳ್ಳಿ (ಅಕ್ಟೋಬರ್-5)

1851. ಬಸಮ್ಮ W/o ಎಸ್. ಎನ್. ಪಾಟೀಲ, ಗುಲಬರ್ಗ (ಏಪ್ರಿಲ್-3)

1852. ಎಸ್. ಮಹಾಬಳೇಶ್ವರಪ್ಪ ಜಗಳೂರು "

1853. ವ್ಹಿ. ಶಾಂತವೀರಪ್ಪ, ಜಗಳೂರು (ಮಾರ್ಚ-14)

1854. ಜಿ. ಎಸ್. ಜಗದೀಶ, ಜಗಳೂರು (ಏಪ್ರಿಲ್-4)

1855. ಟಿ. ಶಿವಲಿಂಗಪ್ಪ, ಕಂಟ್ರಾಕ್ಟರ್, ಜಗಳೂರು "

1856. ಎಚ್. ವೀರಣ್ಣ, ಹೊರಕೆರಿ (ಜನವರಿ-13)

1857. ಜಿ. ಎಲ್. ರಾಜಣ್ಣ, ಹುಲಿಕುಂಟೆ (ಜನವರಿ-31)

1858. ಜೆ. ಎಸ್. ಭ್ರಮರಾಂಬಾ, ಜಗಳೂರು (ಆಗಷ್ಟ-1)

1859. ಟಿ. ವಿರುಪಾಕ್ಷಪ್ಪ, " (ಮಾರ್ಚ-4)


1860. ವೇದಾವತಿ ಮಹಾಬಳೇಶ್ವರಪ್ಪ, " (ಏಪ್ರಿಲ್-5)

[ಮುಂದುವರಿಯುವುದು]

ಪಟ್ಟಿಯು ದೊಡ್ಡದಿದ್ದು, ಮುಂದಿನ ಸಂಚಿಕೆಯಲ್ಲಿ ಮುಂದುವರಿಸಲಾಗುವುದು. ದಾಸೋಹಿಗಳಿಗೆ ದಾಸೋಹದ ದಿನಾಂಕದಲ್ಲಿ ಬದಲಾವಣೆ ಬೇಕಿದ್ದಲ್ಲಿ ಕ್ರಮ ಸಂಖ್ಯೆ ನಮೂದಿಸಿ, ದಿನಾಂಕದ ವಿವರ ತಿಳಿಸಬೇಕು.

ಕಲ್ಯಾಣ ಕಿರಣವು ಅನಿಯಮಿತವಾಗಿ ಬಂದುದರಿಂದಲೂ ಮತ್ತು ಲೇಖನಗಳ (ಮಹಾಚೈತ್ರ) ಬಾಹುಳ್ಯದಲ್ಲಿ ದೇಣಿಗೆ ವಿವರ ಮುದ್ರಿಸಲು ಆಗದ್ದರಿಂದಲೂ, ವಿವರ ಮುದ್ರಿಸಲು ಬಹಳ ವಿಳಂಬವಾಗಿದ್ದಕ್ಕೆ ವಿಷಾದಿಸುತ್ತೇವೆ.

ಪೂಜ್ಯ ಶ್ರೀ ಮಾತಾಜಿ, ಕೂಡಲ ಸಂಗಮ



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸಚ್ಚಿದಾನಂದನ ಶುಭರಕ್ಷೆಯು ತಮಗಿದೆ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಶರಣಾಲಯ (ಗದ್ದುಗೆ) ನಿರ್ಮಾಣಕ್ಕೆ ಧನ ದಾಸೋಹ ಮಾಡಲು ಮನವಿ

ವಿಶ್ವಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಮಣಿಗವಳ್ಳಿಯ ಮಾಣಿಕವಾಗಿ 15-9-1931 ರಂದು ಜನಿಸಿ, ಬಿ. ಎ. ಆನರ್ಸ್ ಪದವೀಧರರಾಗಿ ಬಸವ ಗುರುವಿನ ಪ್ರೇರಣೆಯಿಂದ 25-4-1955 ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ, 19-11-1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ, ಅಂದಿನಿಂದ ಕಡೆಯವರೆಗೂ ಒಂದು ದಿನವೂ ಬಿಡದಂತೆ ಪ್ರವಚನದ ಮೂಲಕ ಜ್ಞಾನ-ದಾಸೋಹ ಮಾಡಿದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು** ಅಪೂರ್ವವಾಗ್ಮಿಗಳು, ಪ್ರತಿಭಾನ್ವಿತ ಚೇತನ, ಪ್ರವಚನ ಪಿತಾಮಹರು.

ವಿಶ್ವಗುರು ಬಸವಣ್ಣನವರು ಬೋಧಿಸಿದ ವಿಶ್ವಧರ್ಮದ ಸಾರವನ್ನು ಪ್ರಚಾರ ಮಾಡಿದ್ದೇ ಅಲ್ಲದೆ, ಹಲವಾರು ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿ, ಅನೇಕ ಸಂಸ್ಥೆಗಳನ್ನು ಕಟ್ಟಿದ ಕ್ರಿಯಾಶೀಲ ಮಹಂತರು. ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಹೆಸರಿನಿಂದ ಸ್ಥಾಪಿಸಿ, ತಮ್ಮ ಕರಕಮಲ ಸಂಜಾತೆ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**ಯವರನ್ನು ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿ, ಸ್ತ್ರೀ ಸಮಾನತಾ ತತ್ತ್ವವನ್ನು ಎತ್ತಿಹಿಡಿದ ಕ್ರಾಂತಿಕಾರಿಗಳು. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯನ್ನು ಸ್ಥಾಪಿಸಿ, ಅದರ ಚೇರ್ಮನ್ನರಾಗಿ ಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿದುದೇ ಅಲ್ಲದೆ, ಇದೀಗ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗ ಸುಂದರವಾಗಿ ಕಟ್ಟಲೋಸುಗ ಬಸವ ಧರ್ಮ ಪೀಠ ಟ್ರಸ್ಟನ್ನು ರಚಿಸಿ, ಬೃಹತ್ ಯೋಜನೆಗಳನ್ನು ಹಾಕಿರುವ ಅವಿಶ್ರಾಂತ ಕ್ರಿಯಾ-

ಮೂರ್ತಿ. ನಾಡಿನಾದ್ಯಂತ ಸಂಚರಿಸಿ, ಜನಮನದಲ್ಲಿ ಬಸವ ತತ್ತ್ವದ ಬೀಜಗಳನ್ನು ಬಿತ್ತಿ, ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು ಒತ್ತಿ ಹಿಂಡಿದರೆ ಭಕ್ತಿ ಎಂಬ ರಸ' ಎಂಬ ವಾತಾವರಣ ಮಾಡಿ, ಬಸವ ಯುಗಕ್ಕೆ ನಾಂದಿ ಹಾಡಿದ ಜಂಗಮ ಜ್ಯೋತಿ.

ಇಂತಹ ಪೂಜ್ಯರು ಬಸವ ಮಹಾಜಗದ್ಗುರು ಪೀಠವನ್ನು ದಿನಾಂಕ 13-1-1992 ರಂದು ಏರಿದರು. ನಾಡಿನ ಉದ್ದಗಲಕ್ಕೂ ಸಂಚರಿಸಿ ವೀರಸೇನಾನಿ ಎಂಬ ಬಿರುದನ್ನು ಪಡೆದರು.

"ಹರಿವ ನದಿಯು ನಿಮ್ಮ ಬಾಳು, ಉರಿವ ಬತ್ತಿ ನಿಮ್ಮ ತ್ಯಾಗ, ಮೊರೆವ ಶಂಖ ನಿಮ್ಮ ವಾಣಿ ಸಚ್ಚಿದಾನಂದ ಖಣಿ" ಎಂಬಂತೆ ಹರಿವ ಜ್ಞಾನವಾಹಿನಿಯಾಗಿ ಅಸಂಖ್ಯಾತ ಜನರ ಮನದಲ್ಲಿ ಭಕ್ತಿಯ ಬೆಳೆ ತೆಗೆದ ಪೂಜ್ಯ ಸ್ವಾಮೀಜಿ ದಿ. 30-6-1995 ರಂದು ಲಿಂಗೈಕ್ಯರಾದರು. ಪೂಜ್ಯರ ಪಾರ್ಥಿವ ಶರೀರವನ್ನು ಅವರ ಸದಿಚ್ಛೆಯಂತೆಯೇ ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆ ಮಹಾಮಠದ ಆವರಣದಲ್ಲಿ ಬಸವಾಲಯದ ಬಲಪಕ್ಕದಲ್ಲಿ ಶರಣ ಮಂಟಪಗಳ ಪರಿಸರದಲ್ಲಿ ಸಮಾಧಿ ಮಾಡಲಾಗಿದೆ. ಇಂತಹ ದಿವ್ಯ ಸಮಾಧಿಯನ್ನು ಸುಂದರವಾಗಿ ಕಮಲದಾಕೃತಿಯ ಮಂಟಪವಾಗಿ ಶರಣಾಲಯ (ಗದ್ದುಗೆ)ವೊಂದನ್ನು ನಿರ್ಮಾಣ ಮಾಡಬೇಕೆಂದು ಶಿಷ್ಯವೃಂದ, ಭಕ್ತವೃಂದ ನಿಶ್ಚಯಿಸಿದೆ. ನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಯೋಜನೆಯೊಂದನ್ನು ಸಿದ್ಧಪಡಿಸಿದ್ದು ಸಹೃದಯರಿಂದ ಉದಾರವಾದ ಧನ ಸಹಾಯ ನಿರೀಕ್ಷಿಸುತ್ತೇವೆ. ಆದ್ದರಿಂದ ದಾನಿಗಳು ಕೆಳಕಂಡಂತೆ ನೆರವು ನೀಡಬಹುದು.

1.	ಮಹಾಪೋಷಕರು	ರೂ. 10,000/-	ಮತ್ತು ಮೇಲ್ಪಟ್ಟು
2.	ಪೋಷಕರು	ರೂ. 5,000/-	ಮತ್ತು ಮೇಲ್ಪಟ್ಟು
3.	ಹಿತೈಷಿಗಳು	ರೂ. 2,000/-	ಮತ್ತು ಮೇಲ್ಪಟ್ಟು
4.	ದಾನಿಗಳು	ರೂ. 1,000/-	ಮತ್ತು ಮೇಲ್ಪಟ್ಟು
5.	ಸಹೃದಯರು	ರೂ. 500/-	ಮತ್ತು ಮೇಲ್ಪಟ್ಟು

ಇನ್ನು ಶಕ್ತ್ಯಾನುಸಾರ-ಭಕ್ತ್ಯಾನುಸಾರ ಎಷ್ಟೇ ಕೊಟ್ಟರೂ ಸಂತೋಷದಿಂದ ಸ್ವೀಕರಿಸಲಾಗುವುದು. ಅಸಂಖ್ಯಾತ ಜನರು ಆಗಮಿಸಿ, ದರ್ಶನ ಪಡೆದು ಆಧ್ಯಾತ್ಮಿಕ ಸ್ಫೂರ್ತಿ-ಚೇತನವನ್ನು ಪಡೆದು ಹೋಗುವ ಶರಣಾಲಯವನ್ನು ಸುಂದರವಾಗಿ, ಚೇತೋಹಾರಿಯಾಗಿ ನಿರ್ಮಾಣ ಮಾಡಬೇಕೆಂಬ ನಮ್ಮೆಲ್ಲರ ಸದಿಚ್ಛೆಯು ಬೇಗನೆ ಸಾಕಾರಗೊಳ್ಳುವಂತೆ ತಾವೆಲ್ಲರೂ ಉದಾರವಾಗಿ ನೆರವು ನೀಡುವಿರಾಗಿ ನಂಬಿದ್ದೇವೆ.

ಬಹಳ ವ್ಯಾಪಕವಾದ ಯೋಜನೆ, ಉದಾತ್ತ ಉದ್ದೇಶಗಳನ್ನು ಹೊಂದಿರುವ ಬಸವ ಧರ್ಮ ಪೀಠಕ್ಕೆ ಧನಸಹಾಯ ಮಾಡಬೇಕೆಂಬ ಸದ್ಭಕ್ತರು ಚೆಕ್, ಡ್ರಾಫ್ಟ್,

ಎಂ.ಟಿ. ಮನಿಯಾರ್ಡರ್, ನಗದು-ಯಾವುದೇ ರೂಪದಲ್ಲಿಯೂ ಹಣವನ್ನು ಕಳಿಸಬಹುದು. ಎಂ.ಟಿ. ಮಾಡುವವರು ಈ ವಿಳಾಸಕ್ಕೆ ಮಾಡಬೇಕು.

ಬಸವ ಧರ್ಮ ಪೀಠ, C & 120 ನೇ ಖಾತೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲ ಸಂಗಮ-587115. ತಾ॥ ಹುನಗುಂದ, ಜಿ॥ ಬಿಜಾಪುರ.

ಬೆಂಗಳೂರು ಶಾಖೆ

ಜನರಿಗೆ ಸಂಪರ್ಕಿಸಲು ಸುಲಭವಾಗಲೆಂದು, ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ. ಅದರ ವಿಳಾಸ ಹೀಗಿದೆ : ಬಸವ ಧರ್ಮ ಪೀಠ, ಬಸವ ಮಂಟಪ, 2035, 20 ನೆಯ ಮುಖ್ಯರಸ್ತೆ, 2 ನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-560010. ದೂರವಾಣಿ ; 3325335. 80 ಜಿ ಇನ್‌ಕಮ್ ಟ್ಯಾಕ್ಸ್ ರಿಯಾಯಿತಿ ನಿರೀಕ್ಷಿಸುವ ದಾನಿಗಳು ಡಿ.ಡಿ./ಚೆಕ್ ಅನ್ನು **"ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಕೂಡಲ ಸಂಗಮ"** ಎಂಬ ಹೆಸರಿಗೆ ಬರೆಯಬೇಕು.

ಕಟ್ಟಡ ಕೆಲಸವು ತ್ವರಿತಗತಿಯಲ್ಲಿ ನಡೆಯುತ್ತಿರುವುದರಿಂದ ಸಹೃದಯವಂತ ಧರ್ಮಾಭಿಮಾನಿಗಳು, ತನು, ಮನ, ಧನಗಳಿಂದ ಉದಾರವಾದ ಧನ ಸಹಾಯ ಮಾಡಲು ಮುಂದೆ ಬರುವಿರಾಗಿ ನಂಬುತ್ತೇವೆ.

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
ಉಪಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.),
ಕೂಡಲ ಸಂಗಮ — ಮಹಾಮನೆ ಮಹಾಮಠ, ಕೂಡಲ ಸಂಗಮ-587115
ದೂ ; 08351-74-838 — ತಾ॥ ಹುನಗುಂದ, ಜಿ॥ ಬಿಜಾಪುರ.

ಶರಣಾಲಯ ನಿರ್ಮಾಣಕ್ಕೆ ದೇಣಿಗೆ

ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ ಶರಣಾಲಯ [ಗದ್ದುಗೆ] ನಿರ್ಮಾಣಕ್ಕೆ ದೇಣಿಗೆ ನೀಡಿದ ಧನ ದಾಸೋಹಿಗಳು.

ಶರಣರುಗಳಾದ :

೧	ಗುಪ್ತ ಭಕ್ತರು	25000-00
೨	ಹೆಚ್. ವಿ. ನಾಗರತ್ನಮ್ಮ, ಬೆಂಗಳೂರು	10000-00
೩	ಇಂದುಶೇಖರ್, ಬಿ. ಎಸ್. ಓಂಕಾರಸ್ವಾಮಿ, ಬೆಂಗಳೂರು	10000-00
೪	ಪುಟ್ಟಸಿದ್ಧಪ್ಪ ಮತ್ತು ಶಕುಂತಲಾ, ಬೆಂಗಳೂರು	5000-00
೫	ಆರ್. ಬಿ. ಹೆಬ್ಬಳ್ಳಿ, ಮುಂಬಯಿ	5000-00
೬	ರೇವಮ್ಮ ಮತ್ತು ಎಸ್. ಈಶ್ವರಪ್ಪ, ಬೆಂಗಳೂರು	5000-00
೭	ಸರೋಜಮ್ಮ ಎಂ. ನಾಗರಾಜು, ಮೈಸೂರು	5000-00
೮	ಧರೆಪ್ಪಾ ಗಿರಿಯಪ್ಪಾ ಚೌಗಲಾ, ಖವಟಕೊಪ್ಪ	5000-00
೯	ಎಂ. ಆಯ್. ಮುನವಳ್ಳಿ, ಮೀರಜ್	4000-00
೧೦	ರಾಚಪ್ಪ ಸಂಗಪ್ಪ ರಾಜಮನಿ, ಹುನಗುಂದ	1111-00
೧೧	ವೀರಣ್ಣ ಕಾಸಾರ, ಜಮಖಂಡಿ	1011-00
೧೨	ಜಿ. ಜಿ. ದೊಡ್ಡವಾಡ, ಧಾರವಾಡ	1001-00
೧೩	ಎಸ್. ಬಿ. ಸುಲ್ತಾನಪುರಿ, ಬೆಳಗಾಂವ	1111-00
೧೪	ಜಿ. ಜಿ. ಪಾಟೀಲರು, ಕೂಡಲ ಸಂಗಮ	1001-00
೧೫	ಶಿವಪ್ಪ ಸಂಗನಬಸಪ್ಪ ಅಂಗಡಿ, ಬಾಗಲಕೋಟೆ	1001-00
೧೬	ಧರೆಪ್ಪ ಗುರುನಿಂಗಪ್ಪ ಚೌಗಲಾ, ಖವಟಕೊಪ್ಪ	1001-00
೧೭	ಛಾಯಾ ಜಯರಾಜ, ಬೆಂಗಳೂರು	1001-00
೧೮	ಸುಮಂಗಲಿ ಸೇವಾಶ್ರಮ, ಬೆಂಗಳೂರು	1051-00
೧೯	ಚಂದ್ರಕಲಾ ಬಸವರಾಜು, ತುಮಕೂರು	1001-00
೨೦	ಸಿದ್ಧಮ್ಮ ಬಸವರಾಜು, ಚಿಕ್ಕಮಗಳೂರು	1001-00
೨೧	ಗವೀರಪ್ಪ, ದೊಡ್ಡನಲ್ಲೂರುಹಳ್ಳಿ	1001-00
೨೨	ಶಂಕರಪ್ಪ ಅಂಗಡಿ, ಜಮಖಂಡಿ	501-00
೨೩	ಬಸವರಾಜ ಲುಕ್ಕ್, ಬಾಗಲಕೋಟ	501-00
೨೪	ದೇವಕಿ ಸೂಳೀಭಾವಿ, "	501-00
೨೫	ಎಂ. ಆರ್. ಹುಲ್ಯಾಳ "	501-00
೨೬	ಪಿ. ಎಂ. ಜಲಪುರ, ಬಾಂಬೆ	501-00
೨೭	ಖವಟಕೊಪ್ಪ ಗ್ರಾಮಸ್ಥರ ಸಂಗ್ರಹ	12000-00
೨೮	ನಾಗಪ್ಪ ಪರಪ್ಪ ಕರೆಪ್ಪನವರು, ಶೇಗುಣಸಿ	2001-00
೨೯	ಕೃಷ್ಣಪ್ಪ ಶ್ರೀಶೈಲಪ್ಪ ರಾಚಪ್ಪನವರು, ಶೇಗುಣಸಿ	1001-00

[ಮುಂದುವರಿಯುವುದು]

ಈ ಎಲ್ಲ ಧನ ದಾಸೋಹಿಗಳಿಗೆ ಶುಭವನ್ನು ಹಾರೈಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕೂಡಲ ಸಂಗಮ — ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ ಒಂಭತ್ತನೆಯ

ಶರಣ ಮೇಳ

1996 ನೆಯ ಜನವರಿ
12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ 1988 ನೆಯ ಇಸವಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ, ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು, ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವಕ್ರಾಂತಿ ದಿನ(ಮಕರ ಸಂಕ್ರಾಂತಿ)ದ ಅಂಗವಾಗಿ ನಡೆಯಲಿದ್ದು ಒಂಭತ್ತನೆಯ ಶರಣ ಮೇಳವು 1996ನೇ ಇಸವಿಯ ಜನವರಿ 12, 13, 14 ಮತ್ತು 15 ರಂದು ಏರ್ಪಾಡಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮ ಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ, ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

✻ ಶರಣರ ಬರವೆಮಗೆ ಪ್ರಾಣಜೀವಾಳ ✻

ಬೆಂಗಳೂರು ವಿಳಾಸ:
ಬಸವ ಮಂಟಪ, 2035.
2ನೇ ಬ್ಲಾಕು, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-560010

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ.
ಕೂಡಲ ಸಂಗಮ-587115.
ತಾ-ಹುನಗುಂದ, ಜಿಲ್ಲೆ-ಬಿಜಾಪುರ

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ತತ್ತ್ವಾನುಯಾಯಿಗಳ ಜಾಗತಿಕ ಉತ್ಸವವಾಗುವುದರಿಂದ ಎಲ್ಲೆಡೆಯಿಂದಲೂ ಜನರು ಸಹಸ್ರ ಸಹಸ್ರಗಟ್ಟಳೆ ಸಂಖ್ಯೆಯಲ್ಲಿ ಬರುವರು. ಆದ್ದರಿಂದ ಈ ಉತ್ಸವವು ವರ್ಷ ವರ್ಷಕ್ಕೂ ವ್ಯವಸ್ಥಿತವಾಗಿ ಜರುಗಬೇಕಾದರೆ ಸ್ವಯಂಪ್ರೇರಣೆಯ ಕೊಡುಗೆ ನೀಡಿರಿ.

1. ಮಹಾಪೋಷಕರು 5000 ರೂ ಮತ್ತು ಮೇಲೆ ಕೊಟ್ಟವರು.
2. ದಾನಿಗಳು 1000 ರೂ. ಮತ್ತು ಮೇಲೆ ಕೊಟ್ಟವರು.
3. ಹಿತೈಷಿಗಳು 500 ರೂ.
4. ಸ್ವಾಗತ ಸಮಿತಿ ಸದಸ್ಯತ್ವ 125 ರೂ, (ಒಬ್ಬರಿಗೆ ಊಟ ವಸತಿ)
5. ಪ್ರತಿನಿಧಿ ಶುಲ್ಕ 100 ರೂ.

ಪ್ರತಿ ವರ್ಷವೂ ತಮ್ಮ ದೇಣಿಗೆಯು ಶರಣ ಮೇಳದಲ್ಲಿ ಸಲ್ಲಬೇಕು ಎನ್ನುವವರು 5000 ರೂಗಳ ನಿಧಿಯನ್ನಿಟ್ಟು, ಆ ಮುದ್ದಂಬಟ್ಟಿನ ಬಡ್ಡಿ ನಿರಂತರವಾಗಿ ಬರುವಂತೆ ವ್ಯವಸ್ಥೆ ಮಾಡಲು ಯೋಜನೆಯಿದೆ. ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ" ಎಂದು ಬರೆದು ಕೂಡಲ ಸಂಗಮದ ವಿಳಾಸಕ್ಕೆ ಕಳಿಸಬೇಕು. ವಿಳಾಸ ಹಿಂದಿನ ಪುಟದಲ್ಲಿದೆ. *State Bank of India, Koodala-Sangama* ದ ಡ್ರಾಫ್ಟ್‌ಗಳನ್ನೇ ತೆಗೆಸಬೇಕು.

ವಿ. ಸೂ : ಶರಣ ಮೇಳದಲ್ಲಿ ಭಾಗಿಗಳಾಗುವ ಎಲ್ಲ ಶರಣ ಶರಣೆಯರ ಪವಿತ್ರ ಮೇಲ್ವಸ್ತ್ರ (ಸ್ಕಾರ್ಫ್) ಬೆಲೆ 16 ರೂ. ಕಡ್ಡಾಯವಾಗಿ ಧರಿಸಬೇಕು, ಶರಣರು ಷಟ್ಕೋನ ಲಾಂಛನವಿರುವ ಟೋಪಿ (ಬೆಲೆ 13 ರೂ) ಯನ್ನೂ ಧರಿಸಬೇಕು.

ಬಸವ ಧರ್ಮದ ಮಹಾಜಗದ್ಗುರು ಪೀಠ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿದ್ದು, ಅನೇಕ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಯಾತ್ರಾರ್ಥಿಗಳಿಗಾಗಿ ನಿತ್ಯ ದಾಸೋಹವನ್ನು ನಡೆಸುತ್ತಿದೆ. ಬಂದ ಪ್ರವಾಸಿಗಳು ಉಳಿದುಕೊಳ್ಳಲು ಮೂರು ಅಂತಸ್ತಿನ ಅತಿಥಿ ಗೃಹವನ್ನು ನಿರ್ಮಿಸಿದೆ. ಕೂಡಲ ಸಂಗಮವನ್ನು ಅಂತರರಾಷ್ಟ್ರೀಯ ಖ್ಯಾತಿಯ ಕ್ಷೇತ್ರವನ್ನಾಗಿ ರೂಪಿಸುವ ಯೋಜನೆ ಹೊಂದಿರುವುದೇ ಅಲ್ಲದೆ, ವಿವಿಧ ಭಾಷೆಗಳಲ್ಲಿ ಸಾಹಿತ್ಯವನ್ನು ಪ್ರಕಟಿಸುತ್ತಲಿದೆ. ಸಂಗಮ ಕ್ಷೇತ್ರದ ಮಹಾಮನೆ ಆವರಣದಲ್ಲಿ ಧಾರ್ಮಿಕ ಸಾಹಿತ್ಯ, ಶರಣರ ಭಾವಚಿತ್ರ, ಪ್ರವಚನ, ಭಕ್ತಿಗೀತೆಗಳ ಆಡಿಯೋ ಮತ್ತು ವೀಡಿಯೋ ಕೆಸೆಟ್ಟುಗಳನ್ನು ಮಾರಾಟಕ್ಕೆ ಇಡಲು ಏರ್ಪಾಡು ಮಾಡಿದೆ.

ಒಂಭತ್ತನೆಯ ಶರಣ ಮೇಳ

ಚಿಂತನ ಸಭೆ— ಕೂಡಲ ಸಂಗಮದಲ್ಲಿ

1996 ನೆಯ ಜನವರಿ 12 ರಿಂದ 15 ರ ವರೆಗೆ ನಡೆಯಲಿರುವ 9 ನೆಯ ಶರಣ ಮೇಳವನ್ನು ಯಶಸ್ವಿಗೊಳಿಸಲು ಕಾರ್ಯಕ್ರಮವನ್ನು ರೂಪಿಸಲೋಸುಗ ಒಂದು ಸಭೆಯನ್ನು ಕೂಡಲ ಸಂಗಮದ ಬಸವ ಧರ್ಮಪೀಠದ ಮಹಾಮನೆ ಮಹಾಮಠದಲ್ಲಿ ಕರೆಯಲಾಗಿದೆ. **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ** ದಿವ್ಯ ಸನ್ನಿಧಿಯಲ್ಲಿ 1995 ರ ಅಕ್ಟೋಬರ 14 ಮತ್ತು 15 (ಎರಡನೆ ಶನಿವಾರ ಮತ್ತು ಭಾನುವಾರ) ನಡೆಯಲಿರುವ ಈ ಸಭೆಗೆ 1) ಶರಣ ಮೇಳದ ಉತ್ಸವ ಸಂಚಾಲಕ ಸಮಿತಿ ಸದಸ್ಯರು 2) ರಾಷ್ಟ್ರೀಯ ಬಸವ ದಳದ ಪ್ರತಿನಿಧಿಗಳು 3) ಶರಣ ಮೇಳಕ್ಕೆ ದೇಣಿಗೆ ಸಂಗ್ರಹಿಸಲು ಆಸಕ್ತಿ ಇರುವ ಶರಣರು ಮತ್ತು ಶರಣ ಮೇಳದ ಬಗ್ಗೆ, ಸಿದ್ಧತೆಯ ಬಗ್ಗೆ ಸಲಹೆ ಸೂಚನೆ ಕೊಡುವವರು ಆಗಮಿಸಬೇಕು.

ಶನಿವಾರ, ದಿ. 14-10-1995 ಬೆಳಿಗ್ಗೆ 10-30 ಕ್ಕೆ - ಪ್ರಥಮ ಸಭೆ
" " ಮಧ್ಯಾಹ್ನ 4 ಕ್ಕೆ ಎರಡನೆಯ ಸಭೆ
ಭಾನುವಾರ, ದಿ. 15-10-1995 ಬೆಳಿಗ್ಗೆ 10-30 ಕ್ಕೆ ಸಮಾರೋಪ ಸಭೆ

ಪ್ರಸ್ತುತ ಸಮಾವೇಶದಲ್ಲಿ ಚರ್ಚಿಸುವ ವಿಷಯ

೧. ಶರಣ ಮೇಳದ ದೇಣಿಗೆ ಸಂಗ್ರಹ ಮತ್ತು ವ್ಯಾಪಕ ಪ್ರಚಾರ
೨. ಶರಣ ಮೇಳ ಪ್ರಚಾರಕರನ್ನು ಕಳಿಸುವ ಕುರಿತು.
೩. 12-1-95 ರಿಂದ 15-1-95 ರ ವರೆಗೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ರೂಪುರೇಷೆ.
೪. ಶರಣ ಮೇಳ ಸೇವಾಕಾರ್ಯ ಕುರಿತು ಜವಾಬ್ದಾರಿ ಹಂಚಿಕೆ.
೫. ಸ್ವಯಂ ಸೇವಕರ ಕ್ರೋಢೀಕರಣ.
೬. ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಶರಣ ಮೇಳದ ಯಾತ್ರಾರ್ಥಿಗಳಿಗೆ ಸೌಲಭ್ಯ ಏರ್ಪಡಿಸುವ ಕುರಿತು. ಇತ್ಯಾದಿ ;

ಸಭೆಯಲ್ಲಿ ಭಾಗಿಗಳಾಗುವ ಸದಸ್ಯರ ಸಲಹೆಯ ಮೇರೆಗೆ ಮತ್ತಷ್ಟು ವಿಷಯ ಚರ್ಚಿಸಬಹುದಾಗಿರುತ್ತದೆ.

1995 ರ ಅಕ್ಟೋಬರ 14-15 ಕ್ಕೆ ಮತ್ತು ಇನ್ನೂ ಮೊದಲಿಗೇ ಪ್ರಚಾರ ಸಾಮಗ್ರಿ ಸಿದ್ಧವಾಗಿರುವುದು. ದಿ. 15-9-1995 ಕ್ಕೆಲ್ಲ ಪ್ರಚಾರ ಸಾಮಗ್ರಿಗಳಾದ ಕರಪತ್ರ, ಭಿತ್ತಿಪತ್ರ, ಸಿನಿಮಾ ಸ್ಲೈಡ್, ಸಿದ್ಧವಾಗಿರುತ್ತವೆ. ದೇಣಿಗೆ ಸಂಗ್ರಹಕ್ಕೆ-ರಸೀತಿ ಪುಸ್ತಕಗಳೂ ಸಿದ್ಧವಾಗಿರುತ್ತವೆ. ಈ ಪ್ರಚಾರ ಸಾಮಗ್ರಿ ಬೆಂಗಳೂರಿನ ಬಸವ ಮಂಟಪ, ಕೂಡಲ ಸಂಗಮದ ಮಹಾಮನೆ ಮಹಾಮಠ ಎರಡರಲ್ಲೂ ದೊರೆಯುತ್ತವೆ.

ದಿ. 14 ಮತ್ತು 15 ರಂದು ಶರಣ ಮೇಳದ ಸಿದ್ಧತಾ ಸಭೆಯಲ್ಲಿ ಭಾಗವಹಿಸುವವರಿಗೆ ಪ್ರಚಾರ ಸಾಮಗ್ರಿ-ರಸೀತಿ ಪುಸ್ತಕ ವಿತರಿಸಲಾಗುವುದು. ಅನಿವಾರ್ಯ ಕಾರಣಗಳಿಂದ ಬರಲಾಗದಿದ್ದವರಿಗೆ ನಂತರ ಅಂಚೆಯಲ್ಲಿ ಕಳಿಸಲಾಗುವುದು. ಶರಣ ಬಂಧುಗಳಿಂದ ನಮಗೆ ಹಲವಾರು ಸಲಹೆ-ಸೂಚನೆ ಬೇಕಾಗಿರುವುದರಿಂದ ತಾವು ದಯವಿಟ್ಟು ಬರಲೇ ಬೇಕೆಂದು ಕೋರುತ್ತೇವೆ.

ಶರಣ ಮೇಳ ಉತ್ಸವ ಸಮಿತಿ. **ಶರಣ. ವಿಜಯಾನಂದರು**
ಕೂಡಲ ಸಂಗಮ-587115 ಸಂಚಾಲಕರು

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಒಂಭತ್ತನೆಯ ಶರಣ ಮೇಳ
ಪ್ರಚಾರ ಪ್ರವಾಸ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ (ಲಿಂಗಾಯತ) ಧರ್ಮ ಸಂಸ್ಥಾಪನಾ ದಿನ (14-1-1153) ದ ನಿಮಿತ್ತವಾಗಿ ಬಸವ ಧರ್ಮೀಯರ ವಾರ್ಷಿಕ ಮಹಾಗಣ ಸಮಾವೇಶವಾದ ಒಂಭತ್ತನೆಯ ಶರಣ ಮೇಳವು 1996 ರ ಜನವರಿ 12 ರಿಂದ 15 ರ ವರೆಗೆ ನಡೆಯುತ್ತದೆಯಷ್ಟೆ. ಇದರ ಪ್ರಚಾರಾರ್ಥ ಅಂದರೆ ಇದರ ಮಹತ್ವವನ್ನು ತಿಳಿಸಿಕೊಟ್ಟು ಹೆಚ್ಚು ಜನರನ್ನು ಆಕರ್ಷಿಸುವಂತೆ ಮಾಡಲು, ಧರ್ಮ ತತ್ತ್ವಗಳನ್ನು ಬೋಧಿಸಲು, ದೀಕ್ಷಾ ವಿಧಿ ಮುಂತಾಗಿ ನೆರವೇರಿಸಲು, ಶರಣ ಮೇಳದ ವ್ಯವಸ್ಥೆ-ದಾಸೋಹಕ್ಕೆ ದೇಣಿಗೆ ಸಂಗ್ರಹಿಸಲು **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ** ಯವರ ಪ್ರವಾಸವನ್ನು ಈ ರೀತಿಯಲ್ಲಿ ಯೋಜಿಸಲು ಪ್ರಾಯೋಗಿಕವಾಗಿ ರೂಪುರೇಷೆ ಹಾಕಲಾಗಿದ.

ಕ್ರ. ಸಂ.	ಊರು ಹೆಸರುಗಳು.	ಮತ್ತು ವಾರ ದಿನಾಂಕಗಳು
1	ಚನ್ನಪಟ್ಟಣ (ಬೆಂಗಳೂರು ಜಿಲ್ಲೆ)	27, 28 ಅಕ್ಟೋಬರ್ 1995.
2.	ನೆಲಮಂಗಲ (")	29-10-95, 30-10-95
3.	ವಿಜಯಪುರ (ಬೆಂಗಳೂರು ಜಿಲ್ಲೆ)	31-10-1995 ಭಾನುವಾರ ದಿಂದ 11-11-1995 ರವರೆಗೆ, ವಿಜಯಪುರ ಬೀಚಗಾನಹಳ್ಳಿ, ಶರಣರ ಜವಾಬ್ದಾರಿ.
4.	ತುಮಕೂರು	12-11-1995, 13-11-1995.
5.	ತಿಪಟೂರು	14-11-1995, 15-11-1995.
6.	ಹಂದ್ರಾಳು	16-11-1995
7.	ಚಿಕ್ಕಮಗಳೂರು	17-11-1995
8.	ಭದ್ರಾವತಿ	18-11-1995, 19-11-1995.
9.	ಶಿವಮೊಗ್ಗ	20-11-95 ರಿಂದ 25-11-95 ಬೇರೆ ಬೇರೆ ಸ್ಥಳಗಳಲ್ಲಿ.
10.	ಚಿತ್ರದುರ್ಗ	26-11-1995, 27-11-95.
11.	ಚಳ್ಳಕೆರೆ	28-11-1995, 29-11-1995
12.	ಹಿರಿಯೂರು	30-11-1995, 1-12-1995.
13.	ಗನ್ನಾಯ್ಯನಹಳ್ಳಿ	2-12-1995.
14.	ಪ್ರಯಾಣ.	3-12-1995.
15.	ಧಾರವಾಡ ಹಾಲ್ಟ್	3-12-1995.
16.	ಬೆಳಗಾಂವ	4-12-1995, ರಿಂದ 7-12-1995
17.	ಬೈಲಹೊಂಗಲ	8-12-1995, 9-12-1995.
18.	ಗೋಕಾಕ	10-12-1995, 11-12-1995.
19.	ಗಡಹಿಂಗ್ಲಾಜ್ (ಮಹಾರಾಷ್ಟ್ರ)	12-12-1995, 13-12-1995.
20.	ಈಚಲ ಕರಂಜಿ.	14-12-95 ರಿಂದ 19-12-95 ರವರೆಗೆ
21.	ಪ್ರಯಾಣ. ಸೊಲ್ಲಾಪುರ (ಹಾಲ್ಟ್)	20-12-1995, (4 ದಿವಸ ಸಮೀಪದ ಸ್ಥಳಗಳಲ್ಲಿ)
22.	ಸೊಲ್ಲಾಪುರ	21-12-1995, 22-12-1995
23.	ಉಮರ್ಗಾ	23-12-1995, 24-12-1995.
24.	ನೀಲಂಗಾ	25-12-1995
25.	ಬೀದರ	26-12-1995, 27-12-1995.
26.	ಭಾಲ್ಕಿ	28-12-1995
27.	ಕಂಸನೂರು	29-12-1995
28.	ಹೈದರಾಬಾದ	30-12-1995, ರಿಂದ 3-1-1996 ರವರೆಗೆ (5 ದಿವಸ)
29.	ಗುಲಬರ್ಗಾ	4-1-1996, 5-1-1996.
30.	ಸಿಂದಗಿ	6-1-1996, 7-1-1996.
31.	ಬಿಜಾಪುರ	8-1-1996, 9-1-1996.
	ಪ್ರಯಾಣ, ಕೂಡಲ ಸಂಗಮ	10-1-1996.

ಈ ವಿವರ ಓದಿದ ನಂತರ ಕಾರ್ಯಕ್ರಮ ಹಾಕಿಕೊಳ್ಳ ಬಯಸುವ ಸದಸ್ಯರು ಅವರಿಗೆ ಕೊಟ್ಟ ದಿನಾಂಕ ಹೊಂದುವುದೇ ಎಂಬುದನ್ನು ಮತ್ತು ಕಾರ್ಯಕ್ರಮ ವ್ಯವಸ್ಥೆ ಮಾಡುವ ಬಗ್ಗೆ ಖಚಿತವಾಗಿ ಪತ್ರ ಬರೆಯಬೇಕು. ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಮೂರೂ ರಾಜ್ಯಗಳ ಸಂದರ್ಶನ ಇರುವುದರಿಂದ ಸಮಯದ ಅಭಾವ ಬಹಳ ವಿರುತ್ತದೆ. ಒಂದು ವೇಳೆ ಯಾವುದೇ ಕಾರಣದಿಂದ ತಮ್ಮಲ್ಲಿ ಕಾರ್ಯಕ್ರಮ ಏರ್ಪ-ಡಿಸಲು ಆಗದಿದ್ದರೆ ಮೊದಲಿಗೇ ಸ್ಪಷ್ಟಪಡಿಸಬೇಕು, ಆ ಸಮಯವನ್ನು ಬೇರೆ ಊರಿಗೆ ಕೊಡಲಾಗುವುದು.

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ವಾಸ್ತವ್ಯ ಒಂದು ದಿವಸ, ಎರಡು ದಿವಸ ಮಾತ್ರ ಇರುವುದರಿಂದ ಮೊದಲೇ ಸ್ಥಳೀಯವಾಗಿ ಕರಪತ್ರ ಮುದ್ರಿಸಿ, ಹೆಚ್ಚಿನ ಪ್ರಚಾರ ಮಾಡಿರ ಬೇಕು. ಎರಡು ದಿವಸ ವಾಸ್ತವ್ಯ ಇದ್ದಲ್ಲಿ ಪೂಜ್ಯರು ಬಂದ ಮರುದಿವಸ ದೀಕ್ಷಾ ಕಾರ್ಯಕ್ರಮವನ್ನು ಏರ್ಪಡಿಸಬಹುದು.

ರಾಷ್ಟ್ರೀಯ ಬಸವ ದಳಗಳ ಸಂಘಟನೆ, ಪುನಶ್ಚೇತನಕ್ಕೆ ಈ ಕಾರ್ಯಕ್ರಮ.ವನ್ನು ಸದುಪಯೋಗ ಮಾಡಿಕೊಳ್ಳಬೇಕು. ಈ ಪ್ರಕಟಣೆಗೆ ಉತ್ತರವನ್ನು ಕೂಡಲ ಸಂಗಮದ ವಿಳಾಸಕ್ಕೆ ಕಳುಹಿಸಿರಿ. ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರಾದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು** ಒಂದು ಮಹಾನ್ ಪ್ರೇರಕ ಶಕ್ತಿಯಾಗಿ ಈ ಬೃಹತ್ ಶರಣ ಮೇಳದ ಹಿಂದೆ ಇದ್ದರು. ಪೂಜ್ಯರು ನಮ್ಮೆಲ್ಲರನ್ನು ಅಗಲಿರುವ ಪ್ರಸ್ತುತ ಸನ್ನಿವೇಶದಲ್ಲಿ ನೀವುಗಳೆಲ್ಲರೂ ಸ್ವಯಂ ಸ್ಫೂರ್ತಿಯಿಂದ, ಉತ್ಸಾಹದಿಂದ ಶ್ರಮಿಸಿ 9 ನೆಯ ಶರಣ ಮೇಳವನ್ನು ಅತ್ಯಂತ ಯಶಸ್ವಿಯಾಗಿ ಮಾಡುವಿರೆಂದು ನಂಬಿದ್ದೇವೆ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಒಂಭತ್ತನೆಯ ಶರಣ ಮೇಳ ಪ್ರಚಾರ ಪ್ರವಾಸ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ (ಲಿಂಗಾಯತ) ಧರ್ಮ ಸಂಸ್ಥಾಪನಾ ದಿನ (14-1-1153) ದ ನಿಮಿತ್ತವಾಗಿ ಬಸವ ಧರ್ಮೀಯರ ವಾರ್ಷಿಕ ಮಹಾಗಣ ಸಮಾವೇಶ ಶರಣ ಮೇಳವು 1996 ರ ಜನವರಿ 12 ರಿಂದ 15 ರ ವರೆಗೆ ನಡೆಯುವುದಷ್ಟೆ. ಇಂತಹ ಶರಣ ಮೇಳದ ಮಹತ್ವವನ್ನು ಮನಗಾಣಿಸಲು ಹೆಚ್ಚಿನ ಜನರನ್ನು ಆಕರ್ಷಿಸಲು, ಧರ್ಮ ಜಾಗೃತಿ-ಪ್ರಚಾರ ಮಾಡಲು, ಶರಣ ಮೇಳದ ವ್ಯವಸ್ಥೆ ಮತ್ತು ದಾಸೋಹಕೆ ದೇಣಿಗೆ ಸಂಗ್ರಹಿಸಲು **ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿಯವರ** ನೇತೃತ್ವದಲ್ಲಿ ಪ್ರಚಾರಕರು ಸಂಚರಿಸುತ್ತಿದ್ದು ಈ ರೀತಿಯಾಗಿ ಮಾರ್ಗವನ್ನು ರೂಪಿಸಲಾಗಿದೆ.

ಕ್ರ.ಸಂ.	ಊರುಗಳು	ದಿನಾಂಕಗಳು. ವಾರಗಳು
	ಈಚಲಕರಂಜಿಯ ಸುತ್ತ ಮುತ್ತ ಪೂರ್ವಭಾವಿ ಸಂಚಾರ	
1.	ಮೀರಜ್	29-10-1995 ಭಾನುವಾರ 30-10-1995 ಸೋಮವಾರ
2.	ಕಾಗವಾಡ	31-10-1995 ಮಂಗಳವಾರ 1-11-1995 ಬುಧವಾರ
3.	ಜುಗುಳ	2-11-1995 ಗುರುವಾರ 3-11-1995 ಶುಕ್ರವಾರ
4.	ಉಗಾರ-ಖುರ್ದ	4-11-1995 ಶನಿವಾರ 5-11-1995 ಭಾನುವಾರ
5.	ಶೇಡಬಾಳ	6-11-1995 ಸೋಮವಾರ 7-11-1995 ಮಂಗಳವಾರ
6.	ನಿಪ್ಪಾಣಿ ಸಮೀಪದ ಹಳ್ಳಿಗಳು	ನವಂಬರ 8, 9, 10, 11, ಬು. ಗು. ಶು. ಶ.
7.	ಸಂಕೇಶ್ವರ	12-11-1995 ಭಾನುವಾರ 13-11-1995 ಸೋಮವಾರ
8.	ಹೆಬ್ಬಾಳ	14-11-1995 ಮಂಗಳವಾರ 15-11-1995 ಬುಧವಾರ

9.	ಧಾರವಾಡ-ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದವರೊಡನೆ ಗರಗ, ತಡಸ, ಅವರಾದಿ, ಇತ್ಯಾದಿ	16-11-1995 ರಿಂದ 28-11-1995 ರ ವರೆಗೆ
10.	ಗದಗ	29-11-95 ರಿಂದ 30-11-95 ರ ವರೆಗೆ
11.	ಕೊಪ್ಪಳ	1-12-95 ರಿಂದ 2-12-1995 ರ ವರೆಗೆ
12.	ಬಳ್ಳಾರಿ	Dec 3, 4, 5, 6, 7.
13.	ಗಂಗಾವತಿ	9-12-1995 ಶನಿವಾರ 10-12-1995 ಭಾನುವಾರ
14.	ಶಿರಗುಪ್ಪ	11-12-1995 ಸೋಮವಾರ 12-12-1995 ಮಂಗಳವಾರ 13-12-1995 ಬುಧವಾರ
15.	ಸಿಂಧನೂರು	14-12-1995 ಗುರುವಾರ 15-12-1995 ಶುಕ್ರವಾರ
16.	ರಾಯಚೂರು	16-12-1995 ಶನಿವಾರ 17-12-1995 ಭಾನುವಾರ 18-12-1995 ಸೋಮವಾರ
17.	ದೇವದುರ್ಗ	19-12-1995 ಮಂಗಳವಾರ 20-12-1995 ಬುಧವಾರ
18.	ಗಣಜಲಿ	21-12-1995 ಗುರುವಾರ 22-12-1995 ಶುಕ್ರವಾರ
	ಪ್ರಯಾಣ-ಜಮಖಂಡಿ ವಾಸ್ತವ್ಯ	23-12-1995 ಶನಿವಾರ
19.	ಜಮಖಂಡಿ	24-12-1995 ಭಾನುವಾರ 25-12-1995 ಸೋಮವಾರ
20.	ಹುನ್ನೂರು	26-12-1995 ಮಂಗಳವಾರ
21.	ತೇರದಾಳ	27-12-1995 ಬುಧವಾರ 28-12-1995 ಗುರುವಾರ
22.	ಮಹಾಲಿಂಗಪುರ	29-12-1995 ಶುಕ್ರವಾರ
23.	ಮುಧೋಳ	30-12-1995 ಶನಿವಾರ 31-12-1995 ಭಾನುವಾರ

24. ಖೋಜನವಾಡಿ	1-1-1996	ಸೋಮವಾರ
	2-1-1996	ಮಂಗಳವಾರ
25. ನದಿ ಇಂಗಳಗಾಂವ	3-1-1996	ಬುಧವಾರ
26. ಐಗಳಿ	4-1-1996	ಗುರುವಾರ
27. ಚೊಳಚಗುಡ್ಡ	5-1-1996	ಶುಕ್ರವಾರ
28. ಬಾದಾಮಿ	6-1-1996	ಶನಿವಾರ
	7-1-1996	ಭಾನುವಾರ
29. ಇಳಕಲ್	8-1-1996	ಸೋಮವಾರ
	9-1-1996	ಮಂಗಳವಾರ

ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ ಮತ್ತು ಸಂಗಡಿಗರ ಸಂಚಾರದ ಕಾಲದಲ್ಲಿ ಪ್ರವಚನ ಕಾರ್ಯಕ್ರಮ, ದೀಕ್ಷಾವಿಧಿ ಮುಂತಾಗಿ ಇರಿಸಿಕೊಳ್ಳಬಹುದು. ಸ್ಥಳೀಯವಾಗಿ ಕರಪತ್ರಗಳನ್ನು ಮುದ್ರಿಸಿ ಪ್ರಚಾರ ಮಾಡಿರಬೇಕು. ಕಾರಣಾಂತರದಿಂದ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡಲು ಆಗದೆ ಇದ್ದಲ್ಲಿ ಮೊದಲೇ ಕಾರ್ಯಾಲಯಕ್ಕೆ ತಿಳಿಸಿದರೆ, ಅವರ ಸಮಯವನ್ನು ಬೇರೆ ಊರಿಗೆ ಕೊಡಲಾಗುವುದು.

ಶರಣ ಬಂಧುಗಳೊಡನೆ ವಿಚಾರ ವಿನಿಮಯ ನಡೆದು, ದಿನಾಂಕಗಳಲ್ಲಿ ವ್ಯತ್ಯಾಸವಾಗಬಹುದು. ಈ ಮಾರ್ಗಕ್ಕೆ ಸಮೀಪದಲ್ಲಿರುವ ಊರುಗಳವರು ತಮ್ಮ ಊರಿಗೆ ಆಹ್ವಾನಿಸಬೇಕೆಂದಿದ್ದರೆ ತಿಳಿಸಬೇಕು. ಯಾವುದಾದರೂ ರದ್ದಾಗಿ ದಿನಾಂಕ ಸಿಕ್ಕರೆ ಬೇಡಿಕೆ ಇರುವ ಊರಿಗೆ ಸಮಯ ಒದಗಿಸಲಾಗುವುದು.

ವಿಶೇಷ ಸೂಚನೆ

ಕಾರ್ಯಕ್ರಮ ಏರ್ಪಡಿಸುವ ಶರಣ ಬಂಧುಗಳಿಂದ ಖಚಿತವಾದ ಉತ್ತರ ಬಂದ ನಂತರ, ಅಂತಿಮ ಯಾದಿಯನ್ನು ಸಿದ್ಧಪಡಿಸಲಾಗುವುದು. ಮತ್ತು ಮೊದಲಿಗೇ ಸುತ್ತೋಲೆಯನ್ನು ಕಳಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115
ತಾ-ಹುನಗುಂದ, ಜಿಲ್ಲೆ-ಬಿಜಾಪುರ,

ವಾಸ್ತವ್ಯ-ಕೂಡಲ ಸಂಗಮ,
16-8-95

[8 ನೇ ಪುಟದಿಂದ ಮುಂದುವರಿದದ್ದು]

ಯುಳ್ಳವರು. ಮಹಾಚೈತ್ರದ ಶಿವಪ್ರಕಾಶರನ್ನು ಈ ಎರಡು ವರ್ಗಗಳಲ್ಲಿ ಯಾವುದಕ್ಕೆ ಸೇರಿಸಬೇಕೋ ಎಂಬುದಿನ್ನೂ ಸಂದಿಗ್ಧವಿದೆ.

ವಿಜ್ಞಾನ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮುಂತಾದವನ್ನು ಓದಿ ಪಾಂಡಿತ್ಯಗಳಿಸಿ ಪುಸ್ತಕಗಳನ್ನು ಬರೆಯಬಹುದು. ಆದರೆ ಧಾರ್ಮಿಕರಂಗದಲ್ಲಿ ಉನ್ನತಿಯನ್ನು ಪಡೆದ ಮಹಾಪುರುಷರ ಬಗ್ಗೆ ಬರೆಯುವಾಗ ಲೇಖಕರಿಗೆ ಆ ದಿಶೆಯಲ್ಲಿ ಗತಿ ಬೇಕು. ತನ್ನ ತಂದೆ-ತಾಯಿ, ಅವರ ಸಂಬಂಧ, ಅವರ ವ್ಯವಹಾರ ರೀತಿ-ನೀತಿ, ಅವರು ತಮ್ಮ ಮಕ್ಕಳಿಗೆ ಕಲಿಸುವ ಮೌಲ್ಯಗಳು, ಆದರ್ಶಗಳು ಎಲ್ಲವೂ ಬರಹಗಾರನ ಚಿಂತನೆಯ ದಿಕ್ಕನ್ನು ನಿರ್ಧರಿಸುತ್ತವೆ. ಅದೇ ರೀತಿ ತಾನು ಬದುಕುವ ಬಗೆ, ಒಡನಾಡುವ ಜನ, ಇರುವ ಪರಿಸರ ಸಹ ವ್ಯಕ್ತಿಯ ಚಿಂತನೆಯ ದಿಶೆಯನ್ನು ನಿರ್ಧರಿಸುತ್ತವೆ, ನಿಯಂತ್ರಿಸುತ್ತವೆ. ಕೆಸರಿನ ಮಡುವಿನಲ್ಲಿ ಹುಟ್ಟಿ, ಬೆಳೆದು, ಅದನ್ನೇ ಭುಂಜಿಸಿ, ಅಲ್ಲಿಯೇ ಸಂಸಾರ ಮಾಡಿ, ಅಲ್ಲಿಯೇ ಸತ್ತು ಹೋಗುವ ಕ್ರಿಮಿಗೆ ಒಂದು ಪ್ರಶಾಂತ ಉದ್ಯಾನ; ಅಲ್ಲಿ ಅರಳಿರುವ ಹೂವುಗಳು, ಬೀಸುವ ತಂಗಾಳಿ, ನೆರಳು ಹರಡಿಕೊಂಡು ಬೆಳೆದ ವೃಕ್ಷಗಳು, ಅದರ ನೆರಳಿನಲ್ಲಿ ಧ್ಯಾನಮಗ್ನನಾದ ಯೋಗಿ, ಅಥವಾ ಅದರ ನೆರಳಿನಲ್ಲಿ ಕುಳಿತು ಧರ್ಮಬೋಧೆ ಮಾಡುವ ಪ್ರವಾದಿಯ ಕಲ್ಪನೆಯಾದರೂ ಹೇಗೆ ಬಂದೀತು. ಹಾಗೆ ಕೆಲವು ಬರಹಗಾರರಿಗೆ ಸಿಗರೇಟೇ ಪ್ರಾಣವಾಯು; ಮದ್ಯವೇ ಸರ್ವ-ಸಂಪತ್ತು, ನೀತಿ-ಧರ್ಮ ಮುಂತಾದುವು ಮರೆತೂ ಹತ್ತಿರ ಸುಳಿಯುವುದಿಲ್ಲ. ಒಂದು ಪವಿತ್ರ ಜೀವನದ ಬಗೆಯನ್ನು ಊಹಿಸಲೂ ಆರರು. ಇಂಥವರು ಹಿಮಶುಭ್ರದಂತಹ ಪಾವನಾತ್ಮರುಗಳ ಬಗ್ಗೆ ಬರೆಯಲು ಹೊರಟು, ಪವಿತ್ರಾತ್ಮರನ್ನು ವಿಡಂಬನೆ ಮಾಡಿದರೆ ಆಗ ಧರ್ಮವಂತರು ಸಾತ್ವಿಕತೆಯ ಸೋಗಿನಲ್ಲಿ ಹೇಡಿಗಳಾಗಿ ಕುಳಿತುಕೊಳ್ಳ-ಬೇಕೆ? ರಾಷ್ಟ್ರರಕ್ಷಣೆ ಹೇಗೆ ಪ್ರತಿ ಪ್ರಜೆಯ ಕರ್ತವ್ಯವೋ ಹಾಗೆ ಧಾರ್ಮಿಕ ಮಹಾನುಭಾವಿಗಳ ಚಾರಿತ್ರ್ಯ ರಕ್ಷಣೆ ಆ ಧರ್ಮದ ಅನುಯಾಯಿಗಳದ್ದು. ಆದ್ದರಿಂದ ಇಂಥ ಪರಮ ಕರ್ತವ್ಯವನ್ನು ಅಹಂಕಾರ ಪ್ರೇರಿತ ಅಪಕ್ವ ಬರಹಗಾರರು ಮೂಲಭೂತವಾದ ಎಂದ ಮಾತ್ರಕ್ಕೆ ಧರ್ಮವಂತರು ಅಂಜಬೇಕಾಗಿಲ್ಲ, ಅಳುಕಬೇಕಾಗಿಲ್ಲ.

ಒಮ್ಮೆ ಸೆಕ್ಸ್ ಲೈಫ್ ಆಫ್ ಜೀಸಸ್ ಎಂದು ಓರ್ವ ವ್ಯಕ್ತಿ ಸಿನೆಮಾ ತೆಗೆದ. ಅವನ ಉದ್ದೇಶ ಈ ಶೀರ್ಷಿಕೆಯಿಂದ ಕುತೂಹಲಗೊಂಡು ಜನರು ಹೆಚ್ಚು ನೋಡು-ವರು ಎಂದು. ತಾವೇನು ಪಾಪ ಮಾಡುತ್ತೇವೆ ಎಂಬ ಅರಿವೂ ಇಲ್ಲದ ಜನರಿವರು. ತಮ್ಮ ಅಲ್ಪಾಕಾಂಕ್ಷೆ, ಧನ ದಾಹಕ್ಕಾಗಿ ಏನು ಮಾಡಲೂ ಹೇಸದ ಜನರು. ಇಂಥ ಕೊಳಕು ಬುದ್ಧಿ-ಕೊಳಕು ಕೈಗಳ ಕಡೆಯಿಂದ ಉತ್ತಮವಾದುದನ್ನು ಹೇಗೆ ನಿರೀಕ್ಷಿ-

ಸಲು ಸಾಧ್ಯ ? ಊರ ಬಣವೆಗೆ ಬೆಂಕಿ ಹಚ್ಚಿ ತಮ್ಮ ಕೈಕಾಯಿಸಿಕೊಳ್ಳಬೇಕೆಂಬ ಅತಿ ಬುದ್ಧಿವಂತ ಜನರಿವರು. ಪ್ರಜಾಪ್ರಭುತ್ವದ ತಾಯಿ ಎನಿಸಿಕೊಂಡ ಇಂಗ್ಲೆಂಡಿನ ಸರ್ಕಾರ ಈ ಚಲನಚಿತ್ರವನ್ನು ತನ್ನ ದೇಶಕ್ಕೆ ಬರಗೊಡಲೇ ಇಲ್ಲ. ನಿತ್ಯಾನಿತ್ಯ ವಿವೇಕ ಪ್ರಜ್ಞೆ ಇಲ್ಲದ ಬರಹಗಾರರ ಕೃತಿಗಳು ಮತ್ತು ಚಲನಚಿತ್ರಗಳ ಮೇಲೆ ಅನಿವಾರ್ಯ ಸನ್ನಿವೇಶ ಬಂದಾಗ ಸರ್ಕಾರವು ಅಸಂಖ್ಯಾತ ಜನ ಧಾರ್ಮಿಕ ಅನುಯಾಯಿಗಳ ಭಾವನೆಗಳಿಗೆ ಸ್ಪಂಧಿಸಿ ನಿರ್ಬಂಧ ಹೇರಲೇಬೇಕಾಗುತ್ತದೆ. ಅದು ಸರ್ಕಾರದ ಕರ್ತವ್ಯ !

"ಬಸವಣ್ಣನವರೊಬ್ಬರೇ ವೀರಶೈವ ಧರ್ಮದ ಸ್ಥಾಪಕರಲ್ಲ. ಆತ ಒಂದು ಚಳುವಳಿಯ ಪ್ರಮುಖನಾಗಿದ್ದ ಎಂಬುದನ್ನು ಗುರುತಿಸಿದರೆ ಅವರಲ್ಲಿ ಈ ಭಯಕ್ಕೆ ಕಾರಣವಿರುವುದಿಲ್ಲ" ಎಂಬುದು ಭೈರಪ್ಪನವರ ಊವಾಚ. ಇವರಿಗೆ ಮತ್ತು ಕನ್ನಡ ಸಾಹಿತ್ಯ ಕ್ಷೇತ್ರದ ಅನೇಕ ಬರಹಗಾರರಿಗೆ ಚಳುವಳಿ ಎಂದರೇನು ? ಧರ್ಮವೆಂದರೇನು ? ಮತವೆಂದರೇನು ? ಒಂದು ಧರ್ಮವು ರೂಪುಗೊಳ್ಳುವ ಬಗೆ ಹೇಗೆ ? ಎಂಬ ಬಗ್ಗೆ ಏನೇನೂ ಗೊತ್ತಿರುವುದಿಲ್ಲ ಎಂದು ಹೇಳಿದರೆ ಇದು ನಮ್ಮ ಅಹಂಕಾರದ ಮಾತು ಎಂದು ಯಾರೂ ಭಾವಿಸಬಾರದೆಂದು ಕೋರುತ್ತೇನೆ.

ಚಳುವಳಿ–movement ಒಂದು ಉದ್ದೇಶದಿಂದ ಹುಟ್ಟುತ್ತದೆ, ಬೆಳೆಯುತ್ತದೆ. ಆ ಉದ್ದೇಶ ಪೂರ್ಣಗೊಳ್ಳುತ್ತಲೇ ಅದು ನಿಂತುಬಿಡುತ್ತದೆ. ಉದಾಹರಣೆಗೆ ಭಾರತ-ಆಫ್ರಿಕಾಗಳ ಸ್ವಾತಂತ್ರ್ಯ ಚಳುವಳಿ ಸ್ವಾತಂತ್ರ್ಯ ಸಿಗುತ್ತಲೇ ಅವು ನಿಂತವು. ಈ ಚಳುವಳಿಗಳ ಹಿಂದೆ ಅನೇಕರು ದುಡಿದರೂ ಅವರು ಒಂದು ಸಂಘಟನಾತ್ಮಕ ಧಾರ್ಮಿಕ ಗುಂಪು ಆಗಿರುವುದಿಲ್ಲ. ಆ ಚಳುವಳಿಯ ನಂತರ ಆ ಗುಂಪು (ಅಥವಾ ಸಂಘ) ಚದುರುತ್ತದೆ ಮತ್ತು ಆ ತಂಡದ ಸದಸ್ಯರಲ್ಲಿ ಶಾಶ್ವತವಾದ, ಧಾರ್ಮಿಕ ಸಂಬಂಧ ಇರುವುದಿಲ್ಲ. ಆ ಚಳುವಳಿಯ ಅನುಯಾಯಿಗಳ ಪರಂಪರೆ ಸಾಗಿ ಬರುವುದಿಲ್ಲ. ಪೂಜ್ಯ ಬಾಪೂಜಿಯವರ ನೇತೃತ್ವದ ಸ್ವಾತಂತ್ರ್ಯ ಹೋರಾಟ ಚಳುವಳಿಯ ಕಾಲದಲ್ಲಿ ಅನೇಕ ಧರ್ಮ, ಜಾತಿ, ಮತ, ಪಂಥ, ಪಂಗಡಗಳವರು ಒಟ್ಟುಗೂಡಿದರು. ಉದ್ದೇಶ ಪೂರೈಸಿದ ನಂತರ ಚದುರಿದರು. ಅವರದೇ ಅನುಯಾಯಿಗಳ ಪರಂಪರೆ ಸಾಗಿಬರಲಿಲ್ಲ. ಚಳುವಳಿಗಾರರಲ್ಲಿ ಪೂರ್ವಾಶ್ರಮದ ವರ್ಣ, ಜಾತಿ ಭೇದ ಅಳಿದಿರುವುದಿಲ್ಲ. ಧರ್ಮಪಿತ ಬಸವಣ್ಣನವರು ಸಮಾನತೆಗಾಗಿ ಹೋರಾಡುತ್ತ ಒಂದು ಚಳುವಳಿ ಮಾಡಿದರಾದರೂ ಆ ಚಳುವಳಿಯ ಅಡಿಪಾಯ ಧರ್ಮವೇ ಆಗಿತ್ತು. ಆದ್ದರಿಂದ ಅವರದ್ದು ಕೇವಲ ಒಂದು ಚಳುವಳಿಯಾಗದೇ ಒಂದು ಸ್ವತಂತ್ರ ಧರ್ಮವನ್ನು. ಧಾರ್ಮಿಕ ಶರಣ ಪರಂಪರೆಯನ್ನು ಲೋಕಕ್ಕೆ ಕಾಣ್ಕೆಯಾಗಿತ್ತಿತ್ತು. ಇದು ಕೇವಲ ಚಳುವಳಿಯಾಗದೆ ಧಾರ್ಮಿಕ ಸಂಘಟನೆಗೆ ನಾಂದಿ ಹಾಡಿತು ಎಂಬುದಕ್ಕೆ ಹೀಗೆ ಉದಾಹರಣೆ ನೀಡಬಹುದು.

1. ಯಾವುದೋ ಒಂದು ಸೀಮಿತ ಉದ್ದೇಶ ಇಟ್ಟುಕೊಂಡ ಚಳುವಳಿಯಾಗದೆ ಲಿಂಗವಂತ ಧರ್ಮವು ಎಂದೆಂದೂ ಮಾನವ ಸಮಾಜಕ್ಕೆ ಸಂಸ್ಕಾರ ನೀಡುವ ಹೊಣೆ ಹೊತ್ತ ಸಾಧನವಾಗಿ ಸಾಗಿ ಬಂದಿತು.
2 ಒಂದು ಶರಣ ಪರಂಪರೆ (Sharana–heritage) ಅಂದಿನಿಂದ ಇಂದಿನವರೆಗೆ ಬೆಳೆದು ಬಂದಿತು.
3. ಜಾತಿ ವರ್ಣ ವರ್ಗ ರಹಿತ–ಧರ್ಮ ಸಹಿತ ಅಖಂಡ ಸಮಾಜ ರಚನೆಗೆ ನಾಂದಿ ಹಾಡಿತು.
4. ದೀಕ್ಷೆ ಪಡೆದವರಲ್ಲಿ ಪೂರ್ವಾಶ್ರಯದ ವರ್ಣ–ವರ್ಗ–ಜಾತಿ ಭೇದಗಳನ್ನು ತೊಡೆದು ಹಾಕಿತು.
5. ಸ್ವತಂತ್ರ ಧರ್ಮವೊಂದರ ಅನುಯಾಯಿಗಳಾದ ಜನರಿಂದ ಕೂಡಿದ ಸಮಾಜವಾಗಿ ಲಿಂಗಾಯತ ಸಮಾಜ ಇಂದಿಗೂ ಅಸ್ತಿತ್ವದಲ್ಲಿದೆ.
6. ಚಳುವಳಿಯ ಸದಸ್ಯತ್ವ ಹುಟ್ಟಿನಿಂದ ಬರದು. ಸ್ವಯಂ ಪ್ರೇರಣೆಯಿಂದ ಚಳುವಳಿಯಲ್ಲಿ ವ್ಯಕ್ತಿ ತೊಡಗುತ್ತಾನೆ. ಆದರೆ ಧಾರ್ಮಿಕತೆಯು ಹುಟ್ಟಿನಿಂದ, ತಾಯಿ ತಂದೆಗಳ ಬಳುವಳಿಯಾಗಿ ಬರುತ್ತದೆ.
7. ಚಳುವಳಿಗೆ ಯಾವುದೇ ಒಂದು ಧಾರ್ಮಿಕ ಸಾಹಿತ್ಯವಿರದು. ಧರ್ಮಕ್ಕೆ ಅತಿ ಮುಖ್ಯವಾದ ಅಂಶ, ಅದರ ಸಂವಿಧಾನಾತ್ಮಕ ಸಾಹಿತ್ಯ. ಈ ದೃಷ್ಟಿಯಿಂದ ಬುದ್ಧ, ಮಹಾವೀರ, ಏಸು, ಮೊಹಮ್ಮದ್, ಬಸವಣ್ಣ, ಗುರುನಾನಕ ಮೊದಲಾದ ಸ್ವತಂತ್ರ ಧರ್ಮ ಸಂಸ್ಥಾಪಕರು ಆರಂಭ ಮಾಡಿ, ಮುನ್ನಡೆಸಿದ್ದು ಕೇವಲ ಚಳುವಳಿಯಲ್ಲ, ಸ್ವತಂತ್ರ ಧರ್ಮಗಳು ; ತಮ್ಮವೇ ಆದ ಸ್ವತಂತ್ರ ಸಾಹಿತ್ಯ ಮತ್ತು ಧಾರ್ಮಿಕ ಅನುಯಾಯಿಗಳ ಸಮಾಜಗಳನ್ನು ಹೊಂದಿವೆ. ಹೀಗಾಗಿಯೇ ಈ ಕೊಡುಗೆಯ ಬೆಲೆಯನ್ನರಿತು ತಮ್ಮ ಪ್ರವಾದಿಗಳ ಕುರಿತು ಅನುಯಾಯಿಗಳು ಅತ್ಯಂತ ಕೃತಜ್ಞರಾಗಿ ಬದುಕುವುದು ಬಲು ಸ್ವಾಭಾವಿಕವಾಗಿದೆ.

"ಇದೇ ರೀತಿ ಅದ್ವೈತಿಗಳು ಶಂಕರಾಚಾರ್ಯರನ್ನು, ವಿಶಿಷ್ಟಾದ್ವೈತಿಗಳು ರಾಮಾನುಜಾಚಾರ್ಯರನ್ನು, ದ್ವೈತಿಗಳು ಮಧ್ವಾಚಾರ್ಯರನ್ನು ಮತ ಸ್ಥಾಪಕ ಸ್ಥಾನದಲ್ಲಿಟ್ಟು ಪೂಜಿಸುತ್ತಾರೆ. ಈ ಆಚಾರ್ಯರುಗಳನ್ನು ಟೀಕಿಸಿದರೆ ಅವರಿಗೂ ಕಸಿವಿಸಿಯಾಗುತ್ತದೆ. ಆದರೆ ಸಂಖ್ಯೆ, ಓಟು, ರಾಜಕಾರಣ ಮತ್ತು ಸಂಸ್ಥೆಗಳ ಬಲ

ವಿಲ್ಲದ್ದರಿಂದ ಅವರು ತಮ್ಮ ಕಸಿವಿಸಿಗಳನ್ನು ಕೇವಲ ಗೊಣಗುವ ಮಟ್ಟದಲ್ಲಿ ಅಭಿವ್ಯಕ್ತಿಸುತ್ತಾರೆ" ಎನ್ನುತ್ತಾರೆ ಭೈರಪ್ಪನವರು.

ಯಾರನ್ನೇ ಆಗಲೀ ವಿಮರ್ಶಿಸುವಾಗ ಅವರು ಕೊಟ್ಟ ತತ್ತ್ವ-ಸಿದ್ಧಾಂತ-ವಿಚಾರ ಧಾರೆಗಳನ್ನು ವಿಮರ್ಶಿಸಬೇಕು. ಅದ್ವೈತದ ದೃಷ್ಟಿಕೋನವೇನು ಪರಿಣಾಮವೇನು ಮುಂತಾಗಿ ಚರ್ಚಿಸಲಿ. ಅದು ಬಿಟ್ಟು ಯಾವುದೇ ಮಹಾಪುರುಷರ ನಿಂದೆ ಮಾಡುವುದು, ಕಪೋಲ ಕಲ್ಪಿತ ಕಥೆ ಕಟ್ಟಿ ದೂಷಿಸುವುದು ಸಲ್ಲದು. ಉದಾಹರಣೆಗೆ ಶ್ರೀ ಶಂಕರಾಚಾರ್ಯರ ತಾಯಿ-ತಂದೆಗೆ ಬಹಳ ಕಾಲ ಮಕ್ಕಳಾಗಲಿಲ್ಲ; ವ್ರತಾಚರಣೆ ಮಾಡಿದರು, ನಂತರ ತೇಜಸ್ವಿ ಮಗು ಹುಟ್ಟಿದ. ಅದೇ ರೀತಿ ಧರ್ಮಪಿತ ಬಸವಣ್ಣನವರ ಜನನದ ಬಗೆ. ಭಾರತೀಯ ಪುರಾಣಕಾರರು ಈ ರೀತಿ ತಾಯಿ-ತಂದೆಗಳ ವ್ರತದ ಫಲವಾಗಿ ಮಗುವನ್ನು ಹುಟ್ಟಿಸಿರಬಹುದು ಎಂದುಕೊಳ್ಳುವಾ ಅಥವಾ ದಂಪತಿಗಳ ಶ್ರದ್ಧೆ-ಭಕ್ತಿ ಫಲ ನೀಡಿವೆ ಎಂದು ಭಾವಿಸೋಣ. ಅದು ಬಿಟ್ಟು ಶಿವಪ್ರಕಾಶರ ಅಧಿಕ ಪ್ರಸಂಗಿತನ, ತಡವಾಗಿ ಮಕ್ಕಳಾದ ಮಾತ್ರಕ್ಕೆ ವ್ಯಭಿಚಾರದಿಂದ ಮಗುವನ್ನು ಹೆತ್ತರು ಎಂದು ಕಥೆ ಕಟ್ಟಿದರೆ, ಈ ಸಾಹಿತಿಗಳು ಸರ್ವಜ್ಞರು, ಇವರು ಬರೆದುದು ಶಾಸನ ಎಂದು ಧಾರ್ಮಿಕರು ತಲೆ ಮೇಲೆ ಹೊರಬೇಕೆ? ನಡೆ-ನುಡಿಗಳೊಂದಾಗಿ ಬದುಕುವ ಧಾರ್ಮಿಕ ಜನರು ನುಡಿವೀರರಾದ ಕೆಲವು ಸಾಹಿತಿಗಳನ್ನೇ ತಮ್ಮ ಗುರುವೆಂದು, ಶಾಸನಕಾರರೆಂದು ನಂಬಬೇಕೆ? ಆದ್ದರಿಂದ ದ್ವೈತಾದ್ವೈತ ವಿಶಿಷ್ಟಾದ್ವೈತ ಮತಾನುಯಾಯಿಗಳೇ ಇರಲಿ, ಕ್ರೈಸ್ತ, ಇಸ್ಲಾಂ, ಲಿಂಗಾಯತ, ಸಿಖ್ ಧರ್ಮೀಯರೇ ಇರಲಿ ಸಾಹಿತಿಗಳು ಸಾಹಿತ್ಯ ವಿಮರ್ಶೆಯ ಎಲ್ಲೆ ದಾಟಿ ಮಹಾಪುರುಷರ ನಿಂದನೆಯಲ್ಲಿ ತೊಡಗಿದಾಗ, ಕುಚೋದ್ಯದ ಕಪೋಲ ಕಲ್ಪಿತ ಬರಹ ಸೃಷ್ಟಿಸಿದಾಗ ಪ್ರತಿಭಟಿಸಲೇ ಬೇಕು. ಇತಿಹಾಸ ತಿರುಚಲು ಯಾರಿಗೂ ಹಕ್ಕಿಲ್ಲ.

ಶ್ರೀ ಭೈರಪ್ಪನವರ ಜಾತಿಪ್ರಜ್ಞೆ ಎಷ್ಟು ಸೂಕ್ಷ್ಮವಾಗಿ ಈ ಮಾತುಗಳಲ್ಲಿ ಹರಿದಿದೆ ಗಮನಿಸಬೇಕು. ಮತಾಚಾರ್ಯರನ್ನು ಟೀಕಿಸಿದರೆ ಅವರ ಅನುಯಾಯಿಗಳಿಗೆ ಕಸಿವಿಸಿಯಾಗುವುದು. "ಆದರೆ ಅವರು (ಬ್ರಾಹ್ಮಣರು) ಸಂಖ್ಯೆ, ಓಟು, ರಾಜಕಾರಣ ಮತ್ತು ಸಂಸ್ಥೆಗಳ ಬಲವಿಲ್ಲದ್ದರಿಂದ ಅವರು ತಮ್ಮ ಕಸಿವಿಸಿಗಳನ್ನು ಕೇವಲ ಗೊಣಗುವ ಮಟ್ಟದಲ್ಲಿ ಅಭಿವ್ಯಕ್ತಿಸುತ್ತಾರೆ" ಎಂದಿದ್ದಾರೆ. ಉಳಿದೆಲ್ಲ ಜನರು ಅದೆಷ್ಟೇ ಸಂಖ್ಯೆಯಲ್ಲಿದ್ದರೂ ನಿಜವಾಗಿಯೂ, ದೇಶವನ್ನು, ಸಂಸ್ಕೃತಿಯನ್ನು ನಿಯಂತ್ರಿಸುತ್ತಿರುವವರು ಯಾರು? ಎಂಬುದನ್ನು ಅರಿಯದಷ್ಟು ಭೈರಪ್ಪನವರು ಮುಗ್ಧರೆ? ಸಮೂಹ ಮಾಧ್ಯಮಗಳಾದ ರೇಡಿಯೋ, ದೂರದರ್ಶನ, ಪ್ರಮುಖ ಪತ್ರಿಕೆಗಳು ಯಾರ ನಿಯಂತ್ರಣದಲ್ಲಿವೆ ಎಂಬುದನ್ನು ಈ ದೇಶದ ಪ್ರತಿಯೊಬ್ಬ ವ್ಯಕ್ತಿಯೂ

ಬಲ್ಲನು. ರೇಡಿಯೋ-ದೂರದರ್ಶನಗಳ ಒಡೆತನ ಸರ್ಕಾರದ್ದು ಇರಬಹುದು, ಆದರೆ ನಿಯಂತ್ರಣ? ಪತ್ರಿಕೆಗಳ ಮಾಲಿಕರು ಶೂದ್ರಾದಿಗಳೇ ಇದ್ದಿರಬಹುದು. ಆದರೆ ಅವುಗಳ ಜುಟ್ಟು ಹಿಡಿದುಕೊಂಡು ಬರೆಯುವ ಸಾಮರ್ಥ್ಯ ಹೊಂದಿ ನಿಯಂತ್ರಿಸುವವರು ಯಾರೆಂಬುದನ್ನು ನಿಚ್ಚಳವಾಗಿ ಕಾಣುವ ಸತ್ಯ. ಲೇಖನಿ ಖಡ್ಗಕ್ಕಿಂತ ಶಕ್ತಿಶಾಲಿ ಎಂಬ ಗಾದೆ ಪ್ರಸಿದ್ಧ. ಉಳಿದೆಲ್ಲ ಜನರು ಸಂಖ್ಯಾಬಾಹುಳ್ಯದಿಂದ ಕೂಡಿದ್ದರೇನಂತೆ [ಇದು ಬುದ್ಧಿ ಇದ್ದವರ ಕಾಲ!] ಮಿದುಳು ಮಂದವಾದ ಶಕ್ತಿಶಾಲಿ ದೇಹದಂತೆ. ಮಿದುಳು ಚುರುಕಾದ ಅಶಕ್ತದೇಹ ಅನ್ಯರನ್ನು ನಿಯಂತ್ರಿಸುವಷ್ಟು ಮಿದುಳು ಮಂದವಾದ ಶಕ್ತಿಶಾಲಿ ದೇಹ ನಿಯಂತ್ರಿಸಲಾರದಷ್ಟೆ? ಬ್ರಾಹ್ಮಣರ ನೋವು-ನಲಿವು ಅಭಿವ್ಯಕ್ತಿಸಲು, ಹಂಚಿಕೊಳ್ಳಲು ಎಲ್ಲ ಪ್ರಮುಖ ಪತ್ರಿಕೆಗಳು ಸನ್ನದ್ಧವಾಗಿರುತ್ತವೆ. ಬಾಕಿಯುವರಂತೂ ಇದ್ದರೆಷ್ಟು ಬಿದ್ದರೆಷ್ಟು, ಸತ್ತರೆಷ್ಟು. ಭೈರಪ್ಪನವರು ತಮ್ಮ ಜಾತಿ ಬಾಂಧವರು ಗೊಣಗಿಕೊಳ್ಳುತ್ತಾರೆ ಮಾತ್ರ ಎಂದಿದ್ದಾರೆ. ಶ್ರೀ ಪೋಲಂಕಿ ರಾಮಮೂರ್ತಿ, ಶ್ರೀ ಭಗವಾನ್ ಮುಂತಾದವರ ಪುಸ್ತಕ ಹೊರಬಿದ್ದಾಗ ನಡೆದ ಪ್ರತಿಭಟನೆ ಎಷ್ಟು? ದಿ। ಬಸವಲಿಂಗಪ್ಪನವರು 'ಬೂಸಾ ಸಾಹಿತ್ಯ' ಎಂದಾಗ ಅವರು ಎದುರಿಸಿದ ವಿರೋಧವೆಷ್ಟು? ಕಸಿವಿಸಿಯಿಂದ ಗೊಣಗಿಕೊಳ್ಳುವ ಮಟ್ಟವನ್ನೂ ಅದು ದಾಟಿದ್ದು ಎಲ್ಲರೂ ಬಲ್ಲರು.

ಒಮ್ಮೊಮ್ಮೆ ಅನಿಸಿದ್ದುಂಟು, ನಾವೂ ಬ್ರಾಹ್ಮಣರಾಗಿ ಹುಟ್ಟಿದ್ದರೆ? ಎಷ್ಟೊಂದು ಪ್ರಶಸ್ತಿ, ಪುರಸ್ಕಾರ, ಬಹುಮಾನಗಳು ಸಾಲುಗಟ್ಟಿ ನಿಂತಿರುತ್ತಿದ್ದವೊ? ಅದು ಜಾಳ್ಪಕ ಸಾಹಿತ್ಯವೇ ಇರಲಿ, ಎ. ಎನ್. ಮೂರ್ತಿರಾಯರು ಬರೆದ ನಾಸ್ತಿಕ ಸಾಹಿತ್ಯವೇ ಇರಲಿ, ಪುರಸ್ಕಾರಕ್ಕೆ ಅರ್ಹತೆ ಸ್ವಯಂ ಸಿದ್ಧ. ಅದಕ್ಕೇನೆ ಅವರ ಕರ್ಮ ಸಿದ್ಧಾಂತ ಹೇಳುವುದು, "ಅನಂತ ಜನ್ಮಗಳ ಪುಣ್ಯದಿಂದ ಬ್ರಾಹ್ಮಣ ಜನ್ಮ ಪ್ರಾಪ್ತಿ" ಎಂದು. "ಇದು ಬ್ರಹ್ಮ ದೇಶ, ಬ್ರಾಹ್ಮಣರು ದೇಶದ ಧರ್ಮ ಸಂತಾನ. ಎಲ್ಲ ಅವರಿಗೇ ಸಲ್ಲಲಿ. ಅದಕ್ಕೇಕೆ ಅಸಂತೋಷ ಪಡುವುದು? ಉಳಿದೆಲ್ಲರೂ ಮಲ-ಮಕ್ಕಳು...."ಎಂದು ಮನಸ್ಸು ಪುನಃ ಸಮಾಧಾನ ಪಟ್ಟುಕೊಳ್ಳುವುದು. ಪುಸ್ತಕಗಳು ಸಿದ್ಧವಾಗುವಾಗಲೇ ಅವಕ್ಕೆ ಪ್ರಶಸ್ತಿ-ಪುರಸ್ಕಾರ ಸಿಗುತ್ತವೆಂದು ಮೊದಲ ಪುಟಗಳನ್ನು ಮುದ್ರಿಸದೆ ಅಗಲೇ ಕಾಯುವಷ್ಟು ಆತ್ಮವಿಶ್ವಾಸ ಸಹ ಕೆಲವರಿಗೆ ಇರುತ್ತದೆ. [ವ್ಯಕ್ತಿಯ ಹೆಸರು ಕಾಣಿಸುವುದು ಅನಗತ್ಯ]

ನಾನು ಹೀಗೆಂದ ಮಾತ್ರಕ್ಕೆ ಪ್ರಶಸ್ತಿ-ಪುರಸ್ಕಾರಗಳ ಆಸೆಗೆ ಮುಂದಿನ ಜನ್ಮದಲ್ಲಿ ಬ್ರಾಹ್ಮಣಳಾ [ನಾ] ಗಿ ಹುಟ್ಟಲು ನಾನು ಹಾತೊರೆಯುತ್ತಿದ್ದೇನೆಂದು ಭಾವಿಸೀರಿ, ಖಂಡಿತಾ ಇಲ್ಲ. ಇವೆಲ್ಲ ಲೌಕಿಕ ಪುರಸ್ಕಾರಗಳು ನಿತ್ಯ ಜೀವನ(immortal life)

ವನ್ನು ದಯಪಾಲಿಸುವವಲ್ಲ. ಆಕಸ್ಮಾತ್ ನಾನು ಬ್ರಾಹ್ಮಣನಾಗಿ ಹುಟ್ಟಿ ಯಾವುದಾದರೊಂದು ಪುಸ್ತಕಕ್ಕೆ ಪುರಸ್ಕಾರ–ಪ್ರಶಸ್ತಿ ಪಡೆದಿರುತ್ತಿದ್ದೆನೆಂದು ಭಾವಿಸಿದರೂ ಸಮಾನತೆಯನ್ನು ಪಡೆಯಲು ಸಾಧ್ಯವಿತ್ತೆ ? ಗುರುತ್ವ ಸಾಧ್ಯವಿತ್ತೆ ? ಎಲ್ಲಕ್ಕಿಂತಲೂ ಪರಮಭಾಗ್ಯವಾದ ಬಸವ ತತ್ತ್ವ ಪ್ರಾಪ್ತಿಯಾಗಿದೆ. ವಚನ ವಾಙ್ಮಯ ಸಿರಿಯು ಲಭ್ಯವಾಗಿವೆ. ಈ ಸಿರಿಯ ವಾರಸುದಾರರು ಇದರ ಧರ್ಮ ಸಂತಾನ ನಾವೆಂಬ ಬೆಲೆಕಟ್ಟಲಾರದ ಅಭಿಮಾನ ತುಂಬಿ ತುಳುಕುತ್ತಿದೆ. ಇದರ ಮುಂದೆ ಉಳಿದೆಲ್ಲ ಪ್ರಶಸ್ತಿ–ಪುರಸ್ಕಾರ ಬಹು ಕ್ಷುಲ್ಲಕ ವಸ್ತುಗಳು. ಲೋಕಾರೂಢಿಗಾಗಿ ಮೇಲಿನ ಮಾತುಗಳನ್ನು ಬರೆದಿದ್ದೇನೆ ಮಾತ್ರ. ಈ ದೇಶದಲ್ಲಿ ನಡೆದಿರುವುದು ಜನರಿಗೆ ತಿಳಿಯಲಿ ಎಂದು ಈ ಮಾತುಗಳನ್ನು ಬರೆದಿರುವುದು. ವೈದಿಕೇತರ ಧರ್ಮ–ಸಂಸ್ಕೃತಿಗಳನ್ನು ಯಾವುದೇ ರೀತಿ ಬೆಳಕಿಗೆ ತರದಿರಲು ವ್ಯವಸ್ಥಿತ ಪ್ರಯತ್ನ ಸದಾ ಸಾಗುತ್ತಿರುವುದನ್ನು ಸೂಕ್ಷ್ಮಗ್ರಾಹಿಗಳು ಗುರುತಿಸಬಹುದು.

ಬಸವಣ್ಣ ಯಾವ ವರ್ಗಕ್ಕೆ ಸೇರಿದವರು ?

ಇದನ್ನು ಸ್ಪಷ್ಟಪಡಿಸಬೇಕೆಂದು ಭೈರಪ್ಪನವರು ನಿರೀಕ್ಷಿಸಿದ್ದಾರೆ. "ಮಾತೆ ಮಹಾದೇವಿಯಂತಹ ನಾಯಕರು ಬಸವಣ್ಣನವರನ್ನು ಮುಕ್ತ ಮನಸ್ಸಿನ ವಿಚಾರವಾದಿ ಎಂದೂ ಹೊಗಳುತ್ತಾರೆ. ಆದರೆ ವಿಚಾರವಾದಿಗೆ ಸಹಜವಾಗಿ ಇರುವ ಮಿತಿಗಳನ್ನು ತೋರಿಸ ಹೊರಟರೆ ಸಿಡಿದು ಬೀಳುತ್ತಾರೆ. ಅವರ ಕಲ್ಪನೆಯ ಬಸವಣ್ಣ ಯಾವ ವರ್ಗಕ್ಕೆ ಸೇರಿದವನೆಂಬುದನ್ನು ಅವರು ಮೊದಲು ಸ್ಪಷ್ಟೀಕರಿಸುವುದು ಒಳ್ಳೆಯದು." ಇವು ಭೈರಪ್ಪನವರ ಮಾತುಗಳು.

ಧರ್ಮಪಿತ ಬಸವಣ್ಣನವರು ಒಬ್ಬ ವಿಚಾರವಾದಿ ನಿಜ; ಆದರೆ ಅವರು ಅಷ್ಟು, ಅಷ್ಟೇ ಆಗಿ ಇರಲಿಲ್ಲ. ವಿಚಾರವಾದಿಗಳು ಎಂದು ಕರೆದುಕೊಳ್ಳುವ ಕೆಲವರು ಪ್ರತಿಪಾದಿಸುವ ಅವರ ವಿಚಾರ ವೈಭವಗಳನ್ನು ಕೇಳಿ ಮಾತ್ರ ಹೆಮ್ಮೆಪಡಬೇಕು. ಆ ಬರಹಗಳ ಆಚೆಗಿನ ನಿತ್ಯ ಜೀವನದ ವಿಮರ್ಶೆಗೆ ಅಥವಾ ಅನುಕರಣೆಗೆ ಯಾರಾದರೂ ಯತ್ನಿಸಲು ಸಾಧ್ಯವೆ? ಜಗತ್ತಿನ ಮಹಾನ್ ಪ್ರವಾದಿಗಳಾದ ಬುದ್ಧ, ಏಸು, ಮೊಹಮ್ಮದ್, ಬಸವಣ್ಣ ಮುಂತಾದವರು ಮಹಾನ್ ವಿಚಾರವಾದಿಗಳಾಗಿದ್ದರೂ, ಬರೀ ವಿಚಾರ ವೈಭವದಿಂದ ಮಾತ್ರ ಕೂಡಿರದೆ ಅನುಕರಣೀಯ ಮಾದರಿ ಜೀವನ ನಡೆಸಿದರು. ಅದರಿಂದಲೇ ಅವರು ನಡೆದುದು ಬಟ್ಟೆಯಾಯಿತು, ನುಡಿದುದು ಶಾಸನ (ಶಾಸ್ತ್ರ) ವಾಯಿತು.

ಧರ್ಮಪಿತ ಬಸವಣ್ಣನವರು ಮುಕ್ತಮನಸ್ಸಿನ ವಿಚಾರವಾದಿ ಎಂದ ಮಾತ್ರಕ್ಕೆ ಅವರನ್ನು ಹಿಗ್ಗಾಮುಗ್ಗಾ ಎಳೆದಾಡಿ, ಇಲ್ಲದ ಆರೋಪಗಳನ್ನು ಹೊರಿಸಿದ ಶಿವಪ್ರಕಾಶರಂಥ ಬರಹಗಾರರ ಕೃತಿಗಳನ್ನು ಸಹಿಸಿ ಕೊಳ್ಳಬೇಕೆ ? ಈ ವಾದ ಹೇಗಿದೆ

ಎಂದರೆ, "ನಮ್ಮಪ್ಪ ಬಹಳ ಒಳ್ಳೆಯವನು. ನಮಗೆ ತುಂಬಾ ಸ್ವಾತಂತ್ರ್ಯ-ಸಲಿಗೆ ಕೊಟ್ಟು ಬೆಳೆಸಿದ್ದಾನೆ. ನಮ್ಮನ್ನು ಬಹಳ ಪ್ರೀತಿಸಿದ್ದಾನೆ. ಅದಕ್ಕೆ ಆತನನ್ನು ಹಿಗ್ಗಾಮುಗ್ಗ ಎಳೆದಾಡಿ ಹೊಡೆಯುತ್ತಿದ್ದೇವೆ" ಎಂಬಂತಿದೆ. ಈ ಟೀಕೆಯನ್ನು ಮಹಾಚೈತ್ರರದ್ದಾದ ಹಿನ್ನೆಲೆಯಲ್ಲಿ ಭೈರಪ್ಪನವರು ಮಾಡಿರುವುದರಿಂದ ನಾನೂ ಆ ಹಿನ್ನೆಲೆಯಲ್ಲೇ ಉತ್ತರ ಕೊಡಬೇಕಾಗಿದೆ. ಧರ್ಮಕರ್ತ ಬಸವಣ್ಣನವರು ವಿಚಾರವಾದಿಯಾದ ಮಾತ್ರಕ್ಕೆ ಅವರ ಬಗ್ಗೆ ಅಲ್ಲಸಲ್ಲದ, ಕಪೋಲ ಕಲ್ಪಿತ ನಿಂದೆಗಳನ್ನು ಶಿವಪ್ರಕಾಶರು ಮಾಡಬಹುದೆ ?

ಧರ್ಮಪಿತ ಬಸವಣ್ಣನವರು ಯಾವ ವರ್ಗಕ್ಕೆ ಸೇರಿದವರೆಂಬುದನ್ನು ಭೈರಪ್ಪನವರ ಅಪೇಕ್ಷೆಯಂತೆ ಈಗ ಸ್ಪಷ್ಟಪಡಿಸುತ್ತೇನೆ. ಇದನ್ನು ಎಲ್ಲ ಸಾಹಿತಿಗಳು, ಬರಹಗಾರರು, ವಿಮರ್ಶಕರು, ಭಾಷಣಕಾರರು ಗಮನಿಸುವುದು ಅತ್ಯಗತ್ಯ.

1. ಬಸವಣ್ಣನವರು ಕೇವಲ ಒಬ್ಬ ವಿಚಾರವಾದಿ ಮಾತ್ರವಲ್ಲ ; ಅವರು ಒಬ್ಬ ಸ್ವತಂತ್ರ ಧರ್ಮ ಒಂದರ ಸಂಸ್ಥಾಪಕರು. ವಿಚಾರವಾದಿತ್ವ ಅವರ ವ್ಯಕ್ತಿತ್ವದ 63 ಗುಣಗಳಲ್ಲಿ ಒಂದು ಅಂಶ ಮಾತ್ರ. ಆದ್ದರಿಂದ ಅವರನ್ನು ಧರ್ಮಗುರು, ಧರ್ಮಕರ್ತ ; ಆದಿಪ್ರಮಥ ಎಂದು ಅವರ ಧರ್ಮಾನುಯಾಯಿಗಳಾದ ನಾವು ಎಲ್ಲರೂ ಆರಾಧಿಸುತ್ತೇವೆ, ಗೌರವಿಸುತ್ತೇವೆ, ಅನುಸರಿಸುತ್ತೇವೆ. ಧರ್ಮಕರ್ತ ಬಸವಣ್ಣನವರು ನಮ್ಮ ಪ್ರಾಣವಾಗಿದ್ದಾರೆ. ಅವರು ಕೊಟ್ಟ ವಿಶ್ವಧರ್ಮದ ಸಂದೇಶಕ್ಕಾಗಿಯೇ ಅಸಂಖ್ಯಾತ ಅನುಯಾಯಿಗಳಾದ ನಮ್ಮೆಲ್ಲರ ತನು–ಮನ–ಧನ–ಸಮಯ–ಅಭಿಮಾನ–ಪ್ರಾಣ ಮೀಸಲಾಗಿವೆ.

2. ಧರ್ಮಪಿತ ಬಸವಣ್ಣನವರ ವ್ಯಕ್ತಿತ್ವವು ಸಮಗ್ರವೂ, ಸರ್ವಾಂಗ ಪರಿಪೂರ್ಣವೂ ಆಗಿದೆ. ಇದನ್ನು ನನ್ನಂತಹ ಒಬ್ಬ ಸಾಮಾನ್ಯ ವ್ಯಕ್ತಿ ಹೇಳಿ, ದೃಢೀಕರಿಸಬೇಕಾಗಿಲ್ಲ. ವೀರ ಶರಣ ಮಡಿವಾಳ ಮಾಚಿದೇವರು ಹೀಗೆ ಹೇಳಿದ್ದಾರೆ :

ಗುರು ಭಕ್ತಿಯಲ್ಲಿಪ್ಪ ಲಿಂಗಭಕ್ತಿಯಲ್ಲಿಪ್ಪ
ಜಂಗಮ ಭಕ್ತಿಯಲ್ಲಿಪ್ಪ ಪ್ರಸಾದದಲ್ಲಿಪ್ಪ
ಜಂಗಮಕ್ಕೆ ಮಾಡುವಲ್ಲಿಪ್ಪ ಮಾಡಿಸಿಕೊಂಬಲ್ಲಿಪ್ಪ
ತನು–ಮನ–ಧನ ಒಂದಾಗಿ ನೀವೆದಿಸುವಲ್ಲಿಪ್ಪ
ಸಂಪೂರ್ಣಾತ್ಮನೆಂದು ನಿತ್ಯಂಗೆ ನೀವು ಕಾರುಣ್ಯವ ಮಾಡಿದಿರಿ.
ನಿಮ್ಮ ಕಾರುಣ್ಯ ಕಟಾಕ್ಷದಲ್ಲಿ ಬಸವಣ್ಣನಲ್ಲದೆ ಮಾಡುವರಿಲ್ಲ
ಆ ಬಸವಣ್ಣ ಹೇಳಿತ್ತ ಮೀರೆ ಕಾಣಾ ಕಲಿದೇವರದೇವಾ [149]

ಧರ್ಮಪಿತ ಬಸವಣ್ಣನವರು **ಸಂಪೂರ್ಣಾತ್ಮರು,** ದೇವನ ಕಾರುಣ್ಯಕ್ಕೆ ಪಾತ್ರರಾದ ಮಹಾನುಭಾವರು. ಆದ್ದರಿಂದ ಅವರ ಮಾತು ಅನುಯಾಯಿಗಳಿಗೆ ದಿವ್ಯ ಆದೇಶ ಎನ್ನುತ್ತಾರೆ ಮಾಚಿದೇವರು. ಅವರನ್ನು ಯಾವುದಾದರೊಂದು ಗುಂಪಿಗೆ ವರ್ಗೀಕರಿಸುವುದು ಕಷ್ಟಸಾಧ್ಯದ ಕೆಲಸ. ನಾನು ಅವರ ಗುಣಗಳನ್ನು ಕೊಡುತ್ತೇನೆ. ಭೈರಪ್ಪನವರಂತಹ ಸಾಹಿತಿಗಳೇ ವರ್ಗೀಕರಿಸಲಿ.

1. ಮಹಾಪ್ರವಾದಿ. 2. ಕಾರಣಿಕ. 3. ಇಷ್ಟಲಿಂಗದಾತ ಮಹಾಗುರು. 4. ಮಂತ್ರಪುರುಷ-ಮುಕ್ತಿದಾಯಕ. 5. ಯುಗಪುರುಷ 6. ಆದಿಪ್ರಮಥ. 7. ಅನುಭಾವಿ. 8. ದಾರ್ಶನಿಕ. 9. ಸಂವಿಧಾನ ಕರ್ತೃ. 10. ಗಾನ ವಿಶಾರದ. 11. ತತ್ತ್ವಜ್ಞಾನಿ. 12. ಸೇಶ್ವರವಾದಿ. 13. ಭಕ್ತಿಯೋಗಿ. 14. ಜ್ಞಾನ ಯೋಗಿ. 15. ರಾಜಯೋಗಿ. 16. ಕುಂಡಲಿನಿ ಯೋಗಿ. 17. ಕಾಯಕ-ಯೋಗಿ 18. ಶಿವಯೋಗಿ. 19. ಪರಿಪೂರ್ಣ ಸಾಕ್ಷಾತ್ಕಾರಿ. 20. ಸರ್ವಾಂಗಲಿಂಗಿ. 21. ಪವಾಡ ಪುರುಷ. 22. ಪರುಷ ವ್ಯಕ್ತಿ. 23. ಸಂಸಾರ–ಯೋಗಿ. 24. ಪರಮ ವಿರಕ್ತ. 25. ನೀತಿವಾದಿ. 26. ಸ್ಥಿತಪ್ರಜ್ಞ. 27. ಪ್ರಸಾದಿಕ. 28. ಜೀವನ್ಮುಕ್ತ. 29. ಇಚ್ಛಾ ಮರಣಿ. 30. ಏಕದೇವೋಪಾಸಕ. 31. ಮೂಢ ನಂಬಿಕೆಯ ವಿರೋಧಿ. 32. ಲೋಹ ಚುಂಬಕ ವ್ಯಕ್ತಿ. 33. ಸಂಸ್ಥಾನಿರ್ಮಾತೃ. 34. ಜಗದ್ಗುರು ಪೀಠ ಸಂಸ್ಥಾಪಕ. 35. ಜಂಗಮ ರೂಹಾರಿ. 36. ವಿಶ್ವ ಕುಟುಂಬಿ. ಇವು ಅಧ್ಯಾತ್ಮಿಕ ನಿಲುವಿಗೆ ಸಂಬಂಧ ಪಟ್ಟುವಾದರೆ ಸಾಮಾಜಿಕ ನಿಲುವಿಗೆ ಸಂಬಂಧಪಟ್ಟ ಗುಣಗಳು ಇಂತಿವೆ ; 37. ಸಮತಾವಾದಿ. 38. ಶ್ರೇಷ್ಠ ಶಿಕ್ಷಣ ತಜ್ಞ. 39. ಜಾತಿ ಪದ್ಧತಿಯ ವಿರೋಧಿ. 40. ಸ್ತ್ರೀ ಕುಲೋದ್ಧಾರಕ. 41. ಪತಿತೋದ್ಧಾರಕ. 42. ದಲಿತೋದ್ಧಾರಕ. 43. ಹಿಂದು ಸಮಾಜ-ಸಂಘಟಕ. 44. ಮಾನವತಾವಾದಿ. 45. ಸ್ವತಂತ್ರ ವಿಚಾರವಾದಿ–ಕ್ರಾಂತಿ ಪುರುಷ. 46. ರಾಜಕಾರಣ ಮುತ್ಸದ್ದಿ. 47. ಸ್ವಾಮಿನಿಷ್ಠ. 48. ಗಣಿತ ಶಾಸ್ತ್ರಜ್ಞ. 49. ಲಿಪಿತಜ್ಞ. 50. ಅರ್ಥಶಾಸ್ತ್ರಜ್ಞ. 51. ವೈದ್ಯರಾಜ. 52. ಮನಶಾಸ್ತ್ರಜ್ಞ. 53. ಲೋಕ ಸಂಸಾರಿ. 54. ಅಹಿಂಸಾವಾದಿ. 55. ಗಣಾಚಾರಿ. 56 ಸಾಹಿತ್ಯ ಸಾರ್ವಭೌಮ. 57. ಸಾಹಿತಿಗಳ ಸ್ಫೂರ್ತಿ ಗಂಗೋತ್ರಿ. 58. ನವ ಸಮಾಜ ನಿರ್ಮಾಪಕ. 59. ಸಮಾಜ ಸುಧಾರಕ. 60. ಸಮಾಜ ಸೇವಕ. 61. ಲೋಕ ಸಂಗ್ರಹಿ. 62. ಮನುಕುಲೋದ್ಧಾರಿ–ಜಗದ್ಗುರು. 63. ಕಲ್ಯಾಣರಾಜ್ಯ ನಿರ್ಮಾಪಕ.

"ವಿಶ್ವವಿಭೂತಿ ಬಸವಣ್ಣ" ಪುಸ್ತಕದಲ್ಲಿ ಈ ವಿಶೇಷಣಗಳ ವಿವರಣೆ ನೀಡಲಾಗಿದೆ.

"ಪ್ರಾಚೀನ ಹಿಂದು ಧರ್ಮಕ್ಕೆ ಇಂಥ ಯಾವ ಸ್ಥಾಪಕನೂ ಇರಲಿಲ್ಲ" ಎನ್ನುವ ಭೈರಪ್ಪನವರು "ವೇದ ಉಪನಿಷತ್ತಿನ ಋಷಿಗಳು, ಅನಂತರದ ರಾಮ, ಕೃಷ್ಣ ಮೊದಲಾದ ನಾಯಕರುಗಳು ಕೂಡ ಈ ಧರ್ಮದ ಸ್ಥಾಪಕರಲ್ಲ. ಹೀಗಾಗಿ ಇವರನ್ನೆಲ್ಲ ನಮ್ಮ ಪರಂಪರೆಯಲ್ಲಿ ಸಾಕಷ್ಟು ವಿಮರ್ಶಿಸಿದ್ದಾರೆ, ಟೀಕಿಸಿದ್ದಾರೆ" ಎನ್ನುತ್ತಾರೆ. ಭೈರಪ್ಪನವರಿಗೆ ಧರ್ಮದ ಲಕ್ಷಣ, ಅದರ ಉಗಮದ ಪ್ರಕ್ರಿಯೆ ಈ ಬಗ್ಗೆ ಹೆಚ್ಚಿನ ಅಧ್ಯಯನ, ಚಿಂತನೆ ಇದ್ದಂತೆ ತೋರದು.

1. ಹಿಂದು ಒಂದು ಧರ್ಮವೇ ಅಲ್ಲ. ಅದು ಸಮುದಾಯ ಸೂಚಕ ಜನಾಂಗವಾಚಕ ಪದವಾಗಿ ರೂಢಿಗೆ ಬಂದಿತು. ಸಿಂಧು ನದಿಯ ಈಚೆಯುಬದಿಗೆ ಇದ್ದ ಜನರನ್ನು ಸಿಂಧುಗಳು ಎಂದು ಆಚೆಯ ಪರ್ಷಿಯನ್ನರು ಕರೆದಾಗ ಈ ಪದ ಬಳಕೆಗೆ ಬಂದಿತು. ಆ ಮೊದಲು ಶೈವರು, ಶಾಕ್ತರು, ವೈಷ್ಣವರು, ಬೌದ್ಧರು, ಜೈನರು ಎಂದೆಲ್ಲ ಕರೆಯಲಾಗುತ್ತಿತ್ತು. ಆಹಿಂದು ಧರ್ಮಗಳು ಈ ದೇಶಕ್ಕೆ ಕಾಲಿಟ್ಟಾಗ ಇಲ್ಲಿದ್ದವರನ್ನೆಲ್ಲ ಒಂದು ಪದದಿಂದ ಕರೆಯುವ ಪ್ರಯತ್ನದಲ್ಲಿ ಹಿಂದು ಪದವು ಪ್ರಚಲಿತವಾಯಿತು. ಅದು ಒಂದು ಧರ್ಮವೇ ಅಲ್ಲ ಎಂದಾಗ ಒಬ್ಬ ಸ್ಥಾಪಕನನ್ನು ಹೊಂದಿರಲು ಹೇಗೆ ಸಾಧ್ಯ ?

2. ಇಂದಿನ ಸಮಾಜ ರಚನೆಯ ಹಿನ್ನೆಲೆಯಲ್ಲಿ ಹಿಂದೂ ಒಂದು ಜನಾಂಗವಾಚಕ ಪ , ಸಂಸ್ಕೃತಿ ಸೂಚಕಪದ, ಹಲವಾರು ಧರ್ಮಗಳ ಒಕ್ಕೂಟ.

3. ಯಹೂದಿ ಧರ್ಮವು ಒಂದು ನೈಸರ್ಗಿಕ ಧರ್ಮವಾದಂತೆ ವೈದಿಕ ಧರ್ಮವೂ ಒಂದು ನೈಸರ್ಗಿಕ ಧರ್ಮ. ಅದಕ್ಕಾಗಲೀ, ಇದಕ್ಕಾಗಲಿ ಓರ್ವ ಸ್ಥಾಪಕರಿರುವುದಿಲ್ಲ, ಅನೇಕ ದಾರ್ಶನಿಕರು ಕೊಟ್ಟ ಅನುಭವದ ಮಾತುಗಳೆಲ್ಲ, ಕೆಲವೊಮ್ಮೆ ಪುರೋಹಿತ–ಪಂಡಿತರ ಮಾತೂ ಸೇರಿ ಶಾಸ್ತ್ರಗಳು ಸಾಗಿಬರುತ್ತವೆ. ಹೀಗಾಗಿಯೇ ಪರಸ್ಪರ ವಿರೋಧಾಭಾಸವಾದ ನಂಬಿಕೆ–ಆಚರಣೆಗಳು ಸೇರಿ ನೈಸರ್ಗಿಕ ಧರ್ಮಗಳು ಗೊಂದಲದ ಬೀಡಾಗಿರುತ್ತವೆ.

4. ಹಾಗೆ ಸರಿಯಾಗಿ ಅಧ್ಯಯನ ಮಾಡಿ ಗುರುತಿಸಿ, ಹಿಂದು ತತ್ತ್ವ[Hinduism] ವನ್ನು ಒಂದು ಧರ್ಮವನ್ನಾಗಿ ಚೌಕಟ್ಟಿಗೆ ಒಳಪಡಿಸುವುದಾದಲ್ಲಿ ಅದಕ್ಕೆ ಒಬ್ಬ ಸ್ಥಾಪಕನುಂಟು. ಆತನೆ ಯೋಗಿರಾಜ ಶಿವ. ಮಧ್ಯ ಏಷಿಯಾದಿಂದ ಆರ್ಯರು ಬರುವ ಪೂರ್ವದಲ್ಲೇ ಪ್ರಭಾವಶಾಲಿಯಾಗಿದ್ದ ಶೈವ ಧರ್ಮದ ಜನಕನಾತ. ಜಗತ್ತಿನ ಮೊಟ್ಟ ಮೊದಲ ಯೋಗಿ, ಧರ್ಮಸ್ಥಾಪಕನಾತ, ಮುಂದೆ ಆರ್ಯರು ಬಂದಾಗ ಮೂಲಧರ್ಮವನ್ನು ವಿರೋಧಿಸಿ ಸೆಣಸಿದರೂ, ಕಾಲಾನಂತರದಲ್ಲಿ ಉಭಯತರ ಮಧ್ಯೆ ರಾಜಿಯಾಗಿ ಅವರದಿಷ್ಟು–ಇವರದಿಷ್ಟು ಸಮ್ಮಿಶ್ರಗೊಂಡು 'ಹಿಂದು' ಎಂದು ಕರೆಯಬಹುದಾದ ಒಂದು ಸಮ್ಮಿಶ್ರ ಧಾರ್ಮಿಕ ಸಂಸ್ಕೃತಿ ಮೈದಳೆಯಿತು.

5. ವೈದಿಕ ಸಂಸ್ಕೃತಿ–ಧರ್ಮಕ್ಕೆ ಒಬ್ಬ ಸ್ಥಾಪಕರಿಲ್ಲ. ವೇದೋಪನಿಷತ್ತಿನ ಋಷಿಮುನಿಗಳಿಂದ ಹಿಡಿದು, ರಾಮ, ಕೃಷ್ಣ ಮುಂತಾದವರ ಮೂಲಕ ವೈದಿಕ ಪರಂಪರೆ ಸಾಗಿ ಬಂದಿತು. ವೇದಗಳು, ಶೃತಿ–ಸ್ಮೃತಿಗಳನ್ನು ಸಾರಿದ ತತ್ತ್ವಗಳು, ರೂಢಿಗೊಳಿಸಿದ್ದ ವ್ಯವಸ್ಥೆ, ಬೋಧಿಸಿದ ಆಚರಣೆಗಳನ್ನು ಚಾಚೂ ತಪ್ಪದೆ ಪಾಲಿಸಿದವರು ಶ್ರೀರಾಮ, ಶ್ರೀಕೃಷ್ಣರು ವರ್ಣಾಶ್ರಮ ವ್ಯವಸ್ಥೆ–ಯನ್ನು ಉಳಿಸಲು, ಬಲಪಡಿಸಲು ಹೆಣಗಿದ ನಾಯಕರು ಅವರು.

ವ್ಯವಸ್ಥೆಯ ಪ್ರೇರಕರು, ಪಾಲಕರು, ಪೋಷಕರು ಆದ ಶ್ರೀರಾಮ, ಶ್ರೀಕೃಷ್ಣರೊಡನೆ, ಜಾತಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ ಸತ್ಯ ಸ್ಥಾಪನೆಗೆ ಹೋರಾಡಿದ ಬಸವಣ್ಣನವರನ್ನು ಹೋಲಿಸುವುದು ಸಲ್ಲದು. ಉಭಯತರ ಚಿಂತನೆಯ ದಾಟಿಯೇ ಬೇರೆ.

"ರಾಮ, ಕೃಷ್ಣ ಮುಂತಾದವರನ್ನು ಸಹ ನಮ್ಮ ಪರಂಪರೆಯಲ್ಲಿ ಸಾಕಷ್ಟು ವಿಮರ್ಶಿಸಿದ್ದಾರೆ, ಟೀಕಿಸಿದ್ದಾರೆ" ಎಂದಿರುವ ಭೈರಪ್ಪನವರು ಹಾಗೆಯೇ ಬಸವಣ್ಣನವರನ್ನು ಟೀಕಿಸಲು ಅವಕಾಶ ಕೊಡಿರಿ ಎಂದು ನಮಗೆ ಅಪ್ರತ್ಯಕ್ಷವಾಗಿ ಬುದ್ಧಿ ಹೇಳುತ್ತಿದ್ದಾರೆ. ಆದರೆ ಈ ಬುದ್ಧಿವಾದ ಅರ್ಥವಿಲ್ಲದ್ದು. ಏಕೆಂದರೆ ವ್ಯಕ್ತಿತ್ವ ದೃಷ್ಟಿಯಿಂದಲಾಗಲೀ, ತತ್ತ್ವ ದೃಷ್ಟಿಯಿಂದಲಾಗಲೀ ಹೋಲಿಕೆ ಎಷ್ಟೂ ಸಲ್ಲದು. ನಾವು ಜೀವನ–ಚರಿತ್ರೆ–ಸಾಧನೆ–ಸಂದೇಶಗಳನ್ನು ಪರಸ್ಪರ ಹೋಲಿಸುವುದಾದಲ್ಲಿ ಬಸವಣ್ಣ–ಬುದ್ಧ–ಏಸು–ಮೊಹಮ್ಮದ್–ಗುರುನಾನಕ–ಅಂಬೇಡ್ಕರ್ ಇಂಥವರನ್ನು ಹೋಲಿಸಬಹುದೇ ವಿನಾ ರಾಮ–ಕೃಷ್ಣರೊಡನೆ ಅಲ್ಲ. "ಯುದ್ಧ ಮತ್ತು ಪ್ರಣಯದಲ್ಲಿ ಯಾವ ನೀತಿ–ನಿಯಮವೂ ಇಲ್ಲ" ಎಂಬ ದೃಷ್ಟಿಕೋನ ಅವರದಾದರೆ, ನೀತಿ-ನಿಯಮ ಎಲ್ಲ ಸಂದರ್ಭದಲ್ಲೂ ಇರಲೇಬೇಕು ಮಹಾತ್ಮರು ನೀತಿ–ನಿಯಮಗಳ ಚೌಕಟ್ಟು ಮುರಿಯಬಾರದು ಎಂಬುದು ಈ ಧರ್ಮ ಸಂಸ್ಥಾಪಕರುಗಳ ನಂಬಿಕೆ. ಅದರಂತೆ ಅವರು ದಯೆ–ಮಾನವೀಯತೆ–ಸತ್ಯ ವಿಶ್ವಾಸದ ಮೇಲೆ ದೃಢವಾಗಿ ನಡೆ-ದರು. ಶ್ರೀ ರಾಮ ಮನೋಹರ ಲೋಹಿಯಾ ಹೇಳುತ್ತಾರೆ :

"ನಮ್ಮ ದೇಶದಲ್ಲಿ ದೇವರು ಹಾಗೂ ಧಾರ್ಮಿಕ ಆದರ್ಶಗಳನ್ನು ಅನೇಕ ವೇಳೆ ತಪ್ಪಾಗಿ ತಿಳಿದಿದ್ದೇವೆ. ಅನೇಕ ದೇವರ ಆರಾಧನೆಯುಳ್ಳ ಈ ದೇಶದಲ್ಲಿ ದೇವದೇವನಾದ ಕೃಷ್ಣನೂ ಕೊಲೆ, ಸುಳ್ಳು–ಸುಲಿಗೆ ಇತ್ಯಾದಿ ಸಕಲ ಅಪರಾಧಗಳನ್ನು ಮಾಡಲಿಲ್ಲವೆ ? ವಿಚಿತ್ರವೆಂದರೆ ಇವನ್ನೆಲ್ಲ ಆತನು ತನ್ನ ಸಂಪೂರ್ಣ ನಿಸ್ವಾರ್ಥದಿಂದ ಸತ್ಯ ಹಾಗೂ ಪ್ರೇಮಗಳಿಗಾಗಿ ಮಾಡಿದನಂತೆ !" [ಬಸವಣ್ಣ ಮತ್ತು ಲೋಹಿಯಾ-ಪುಟ–60]

'ದೇವರು' ನಿರಾಕಾರ-ನಿರ್ಗುಣ ಅವನಿಗೆ ರೂಪವಿಲ್ಲ. ನಾಮ-ರೂಪ-ಕ್ರಿಯಾತೀತ, ನಿರಂಜನ. ರಾಮ–ಕೃಷ್ಣರು ನಾಮ ರೂಪ ಕ್ರಿಯೆಯುಳ್ಳವರು. ಆದ್ದರಿಂದ ಅವರು ದೇವರು [ಸೃಷ್ಟಿಕರ್ತ] ಅಲ್ಲ. ಇನ್ನು ಮಹಾತ್ಮರೇ ? ಸಹನೆ, ತಾಳ್ಮೆ, ಸಮತೆ, ಮಾನವೀಯತೆ, ಸತ್ಯನಿಷ್ಠೆ, ಸಂಯಮ, ದೀನ-ದಲಿತರು ಮಾನವರ ಬಗ್ಗೆ ಅನುಕಂಪ ಎಲ್ಲಿದೆ ? ಹಾಗಾದರೆ ಅವರು ಏನು ? ಭೈರಪ್ಪನವರು ವರ್ಗೀಕರಿಸಲು ಸಹಾಯ ಮಾಡಿದರೆ ಒಳ್ಳಿತು.

"ಮೂಲ ಹಿಂದೂ ಧರ್ಮಕ್ಕಿರುವ ವೈಚಾರಿಕ ಸ್ವಾತಂತ್ರ್ಯ ಈ ನೆಲೆಯದು. ಹೇಳಿರುವ ತತ್ತ್ವವನ್ನು ಅನುಭವದಿಂದ ಸಾಕ್ಷಾತ್ಕರಿಸಿಕೊಳ್ಳುವ ತನಕ ನಂಬಬೇಡ ಎನ್ನುವ ಸ್ವಾತಂತ್ರ್ಯವನ್ನು ಗುರುತಿಸುವುದು ಈ ಧರ್ಮದ ವೈಶಿಷ್ಟ್ಯ." ನಮ್ಮ ಮೂಲಭೂತವಾದವನ್ನು ವಿಮರ್ಶಿಸುತ್ತ ಶ್ರೀ ಭೈರಪ್ಪನವರು ಸಮಾರೋಪ ಮಾಡಿರುವುದು ಹೀಗೆ. ಕೆಲವು ಪದಬಂಧಗಳು ಅತ್ಯಂತ ಆದರ್ಶನೀಯವೂ ರಂಜನೀಯವೂ ಆಗಿ ತೋರುತ್ತವೆ. ಆದರೆ ಅವನ್ನು ಹಿಂಜಿ ನೋಡಿದಾಗ ಅವು ಟೊಳ್ಳಾಗಿ ಕಾಣಬಹುದು. ಇಲ್ಲವೇ ತದ್ವಿರುದ್ಧವಾದ ಒಂದು ಅಭಿಪ್ರಾಯವನ್ನೇ ಹೊರಹಾಕಬಹುದು. ಸಾಮಾನ್ಯವಾಗಿ ಹಿಂದು ಧರ್ಮ ಎಂದು ಭೈರಪ್ಪನವರು ಊಹಿಸಿಕೊಂಡು ಮಾತನಾಡುತ್ತಿರುವ ಈ ಸಮಾಜದ ಸಾಂಸ್ಕೃತಿಕ, ಶಾಸ್ತ್ರೀಯ ಚೌಕಟ್ಟಿನಲ್ಲಿ ವೈಚಾರಿಕ ಸ್ವಾತಂತ್ರ್ಯವಿದೆಯೆ ? ಸಾಕ್ಷಾತ್ಕರಿಸಿಕೊಳ್ಳುವ ತನಕ ನಂಬ-ಬೇಡ ಎಂಬುದಾಗಲೀ ಸಾಕ್ಷಾತ್ಕರಿಸಿಕೊಂಡ ಬಳಿಕ ದೃಢವಾಗಿ ನಂಬು ಎನ್ನುವು-ದಾಗಲೀ ಕೇವಲ ಶಾಸ್ತ್ರಗತವಾಗಿ ಉಳಿದಿವೆ ಮಾತ್ರವಲ್ಲ ಅಧ್ಯಾತ್ಮಿಕ ವಿಚಾರಗಳಿಗೆ-ಅಂದರೆ ದೇವರು–ಆತ್ಮ–ಸಾಕ್ಷಾತ್ಕರ ಮುಂತಾದುವಕ್ಕೆ ಅನ್ವಯಿಸುತ್ತವೆ. ಸಾಮಾ-ಜಿಕ ಚಿಂತನೆಗೆ ಇವು ಅನ್ವಯಿಸುವುದೇ ಇಲ್ಲ, ವಿಶ್ವಗುರು ಬಸವಣ್ಣನವರು ತಮ್ಮ ವಚನದಲ್ಲಿ ಪುನಃ ಪುನಃ ಹೇಳುತ್ತಾರೆ; "ನಿಮ್ಮ ಶಾಸ್ತ್ರಗಳು ಜಾತಿಭೇದ ಮಾಡು-ತ್ತವೆ ; ಅಂತ್ಯಜನು (ಅಥವಾ ಶೂದ್ರನು) ತಪಸ್ಸಿಗೆ, ದೇವರ ಒಲುಮೆಗೆ ಅರ್ಹನಲ್ಲ ಎನ್ನುತ್ತವೆ. ಆದರೆ ಶರಣರು ಸಾಧಿಸಿ ತೋರಿಸಿದ್ದಾರೆ. ನಂಬಿರಿ. ನಿಮ್ಮ ಶಾಸ್ತ್ರಗಳನ್ನು ತಿದ್ದುಪಡಿ ಮಾಡಿಕೊಳ್ಳಿ" ಎನ್ನುತ್ತಾರೆ. ಶಾಸ್ತ್ರ ದಾಸ್ಯ, ಪುರಾಣಗಳ ಅವಲಂಬನೆ ಈ ದೇಶದಲ್ಲಿ ಹಿಂದುಗಳಲ್ಲಿ ಇದ್ದಷ್ಟು ಬೇರೆಲ್ಲೂ ಇಲ್ಲ. ಕೆಲವೊಮ್ಮೆ ಅಶಿಸ್ತನ್ನು, ಅವ್ಯವಸ್ಥೆಯನ್ನೇ ವಿಚಾರ ಸ್ವಾತಂತ್ರ್ಯ ಎಂದು ಭಾವಿಸುವುದುಂಟು, ಹೊಗಳುವುದುಂಟು.

ಹಿಂದುಗಳಲ್ಲಿ ಏಕರೂಪದ ಆಚಾರ–ವಿಚಾರಗಳಿಲ್ಲ, ಕ್ರಮವಿಲ್ಲ–ಶಿಸ್ತಿಲ್ಲ. ಎಲ್ಲರಿಗೂ ಕಡ್ಡಾಯವಾದ ಒಂದು ಧಾರ್ಮಿಕ ನಿಯಮವಾಗಲೀ, ಪ್ರವೇಶವಾಗಲೀ ಇಲ್ಲ. ಅತ್ಯಂತ ನಿಕೃಷ್ಟವಾದ ಪ್ರಾಣಿ ಬಲಿಯಿಂದ ಸೂಕ್ಷ್ಮಾತಿ ಸೂಕ್ಷ್ಮವಾದ ಯೋಗ

ದವರೆಗೆ ಇರುವುದಾದರೂ ಮೂಢನನ್ನು, ಅಜ್ಞಾನಯುಕ್ತವಾದ ಆಚರಣೆಯಲ್ಲಿರುವವರನ್ನು ಅವನಿಗೆ ಒಂದು ಶ್ರೇಷ್ಠ, ಸದ್ಧರ್ಮವನ್ನು ಕೊಟ್ಟು, ಆ ಕೂಪದಿಂದ ಮೇಲಕ್ಕೆತ್ತುವ ಕಳಕಳಿಯಿಲ್ಲ.

ಇಂಥ ಅಮಾನವೀಯ ನಿರ್ಲಿಪ್ತತೆಯನ್ನು 'ಅಂಥ ಆಚರಣೆಗಳನ್ನೂ ನಾವು ಟೀಕಿಸುವುದಿಲ್ಲ' ಎಂದು ಸಮರ್ಥಿಸಿಕೊಳ್ಳುವುದುಂಟು. ಇದು ಹೇಗೆಂದರೆ ಕೈಲಿ ಬಾಳೆಯಹಣ್ಣು ಹಿಡಿದು ತಿನ್ನುವ ಓರ್ವನು ಮಣ್ಣನ್ನು ತಿನ್ನುತ್ತಿರುವ ಮಗುವನ್ನು ಕುರಿತು "ನೋಡಿ ಅದು ಮಣ್ಣು ತಿನ್ನುತ್ತಿದ್ದರೂ ನಾವು ಬೇಸರ ಪಡುವುದಿಲ್ಲ, ಟೀಕಿಸುವುದಿಲ್ಲ" ಎಂದಂತೆ. ನಿಜವಾಗಿ ಅವನು ಮಾಡಬೇಕಾದ್ದು ಮಣ್ಣು ತಿನ್ನುವುದನ್ನು ಯಾವುದಾದರೊಂದು ಉಪಾಯದಿಂದ ಬಿಡಿಸಿ ತನ್ನ ಕೈಲಿರುವ ಹಣ್ಣು ಕೊಟ್ಟು ತಿನ್ನಿಸಿ ಆನಂದಿಸುವುದು. ಆ ಅಜ್ಞಾನಿ, ಬಡ ಮಗುವನ್ನು ಮಣ್ಣು ತಿನ್ನಲು ಬಿಡುವುದು ಸ್ವಾತಂತ್ರ್ಯವಲ್ಲ, ಅದರ ವಿಡಂಬನೆ.

ಜಗತ್ತಿಗೆ ಅಜ್ಞಾನವನ್ನು ತೊರೆಸಿ ಉದಾತ್ತವಾದುದನ್ನು ನೀಡಲು ಯತ್ನಿಸಿದವರು ಬುದ್ಧ-ಬಸವಣ್ಣನಂತಹವರು. ಅಂಥವರ ಜೀವನ-ಸಾಧನೆ-ಸಂದೇಶಗಳನ್ನು ತಿರುಚಿ, ವಿಕೃತಗೊಳಿಸಿ ಬರೆದಾಗ, ಮಾತನಾಡಿದಾಗ ಪ್ರತಿಭಟಿಸುವುದು ಮೂಲಭೂತವಾದ, ಮತಾಂಧತೆಯಲ್ಲ ಧಾರ್ಮಿಕ ನಿಷ್ಠಾವಂತನ ಆದ್ಯ ಮತ್ತು ಮೂಲಭೂತ ಕರ್ತವ್ಯ. **—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**

☆ ★

ಬಸವ ತತ್ತ್ವ ತರಬೇತಿ ಶಿಬಿರ ಇಲ್ಲ

ಪ್ರತಿ ವರ್ಷವೂ ಅಕ್ಟೋಬರ್ ತಿಂಗಳಲ್ಲಿ ನಡೆಯುತ್ತಿದ್ದ "ಬಸವ ತತ್ತ್ವ ತರಬೇತಿ ಶಿಬಿರ"ವು ಈ ವರ್ಷ ಇಲ್ಲವೆನ್ನಲು ವಿಷಾಧಿಸುತ್ತೇವೆ. ನನ್ನ ಸಮಯವು ಸಪ್ಟೆಂಬರ್ ತಿಂಗಳಿಂದಲೂ "ಮಹಾಚೈತ್ರ"ದ ಹೋರಾಟಕ್ಕೆ, ನಂತರ ಬೆಂಗಳೂರು ಸಮ್ಮೇಳನದ ಸಿದ್ಧತೆಗೆ ವ್ಯಯವಾಗಿರುವ ಕಾರಣ ಶಿಬಿರವನ್ನು ರದ್ದು ಮಾಡಲಾಗಿದೆ. ಶರಣ ಮೇಳದ ಭಿತ್ತಿಪತ್ರ, ಕರಪತ್ರ, ಸಿನಿಮಾ ಸ್ಲೈಡು ಮುಂತಾದ ಪ್ರಚಾರ ಸಾಮಗ್ರಿಗಳನ್ನೂ ಮತ್ತು ದೇಣಿಗೆ ಸಂಗ್ರಹಕ್ಕಾಗಿ ರಸೀತಿ ಪುಸ್ತಕಗಳನ್ನೂ ಅಂಚೆಯ ಮೂಲಕ ಕಳಿಸಲಾಗುವುದು ಮತ್ತು ಪ್ರಚಾರ ಸಾಮಗ್ರಿಗಳನ್ನು ಸಪ್ಟೆಂಬರ್ ಮೊದಲನೆಯ ವಾರದೊಳಗೆ ಸಿದ್ಧವಾಗುವಂತೆ ಇಡಲಾಗುವುದು, ಬೆಂಗಳೂರು-ಕೂಡಲ ಸಂಗಮಕ್ಕೆ ಬಂದು ನೇರವಾಗಿ ಒಯ್ಯಬಹುದು.

—ಮಾತಾಜಿ

ಶರಣ ಮೇಳ 1996, ಜನವರಿ 12 ರಂದು
ಬಸವ ಧರ್ಮ ಸಂಸತ್ ಸಭೆಯಲ್ಲಿ
ಚರ್ಚಿಸಲಿರುವ ವಿಷಯಗಳು


1. ಲಿಂಗವಂತ, ಲಿಂಗಾಯತ, ಬಸವ ಧರ್ಮ- ಈ ಮೂರು ಪದಗಳಲ್ಲಿ ಯಾವುದೊಂದನ್ನು ಖಚಿತವಾಗಿ ಬಳಸಬೇಕು, ಪ್ರಚಾರ ಮಾಡಬೇಕು?

2. 'ವೀರಶೈವ' ಪದವು ಗೊಂದಲವನ್ನುಂಟು ಮಾಡುವುದರಿಂದ, ಅದನ್ನು ಕೈಬಿಟ್ಟ ಮಾತ್ರಕ್ಕೆ ನಮ್ಮ ಇಂದಿನ ಸಮಸ್ಯೆಗಳಿಗೆ ಪರಿಹಾರವಿಲ್ಲ. ಲಿಂಗವಂತ ಸಮಾಜವು ಏಕಗುರು ನಿಷ್ಠೆ, ಏಕದೇವ ನಿಷ್ಠೆ ಹೊಂದದಿರುವುದರಿಂದ, ಬರೀ ಪದ ಪ್ರಯೋಗ ಲಿಂಗವಂತ/ಲಿಂಗಾಯತ ಮಾಡಿದ್ದಕ್ಕೆ ಜನರ ಮಾನಸಿಕ ಪರಿವರ್ತನೆಯಾಗದು. "ಓಲ್ಡ್ ವೈನ್ ಇನ್ ನ್ಯೂ ಬಾಟಲ್" ಎಂಬ ಆಂಗ್ಲ ಗಾದೆಯಂತೆ ಆಗುವುದು. ಆದ್ದರಿಂದ ಬಸವ ಧರ್ಮ ಎಂದೇ ನೇರವಾಗಿ ಹೆಸರಿಟ್ಟು ಬಸವ ಗುರು ನಿಷ್ಠೆ, ಏಕದೇವೋಪಾಸನೆ, ವಚನ ಶಾಸ್ತ್ರಪಾಲನೆ ಇವುಗಳನ್ನು ಆಧರಿಸಿದ ಜಾತಿ, ವರ್ಗ, ವರ್ಣ ರಹಿತ ಒಂದು ಶುದ್ಧ 'ಶರಣ ಸಮಾಜ'ವನ್ನು ಕಟ್ಟುವ ಪ್ರಯತ್ನವನ್ನು ಏಕೆ ಮಾಡಬಾರದು? [ಇದು ಓರ್ವ ಲಿಂಗಾಯತೇತರ ವಿದ್ವಾಂಸರ ಸಲಹೆ]


3. ಬೆಳಗಿನ ಸ್ನಾನ ಪೂರೈಸಿ ಇಷ್ಟಲಿಂಗ ಪೂಜೆ ಮಾಡದೆ ಇರುವ ಓರ್ವ ಸದ್ಭಕ್ತನು ದೀಕ್ಷಾ) ಗುರು ಪಾದೋದಕ ಪ್ರಸಾದವನ್ನಾಗಲೀ, ಜಂಗಮ (ತತ್ತ್ವ ಜಂಗಮ) ಪಾದೋದಕವನ್ನಾಗಲೀ ಪಡೆಯಬಹುದೆ?

4. ಧರ್ಮಪಿತ ಬಸವಣ್ಣನವರ ಗಡಿಪಾರು ಫಾಲ್ಗುಣ ದ್ವಾದಶಿಯಂದು, ಹರಳಯ್ಯ-ಮಧುವಯ್ಯಾದಿಗಳ ಬಂಧನ, ಕ್ಷಿಪ್ರ ವಿಚಾರಣೆ ತ್ರಯೋದಶಿಯಂದು, ಅವರ ಎಳೆ ಹೂಟೆ ಚತುರ್ದಶಿಯಂದು, ಬಿಜ್ಜಳನ ವಧೆ ಹುಣ್ಣಿಮೆಯಂದು. ಇವು ಮಹತ್ವದ ದಿನಗಳು. ಏಸುಕ್ರಿಸ್ತನ ಶಿಲುಬೆಯ ಪ್ರಸಂಗದಷ್ಟು ಮಹತ್ವದ್ದು. ಹೋಳಿ ಹುಣ್ಣಿಮೆಯ ಸಮಯವಿದು. ಆದ್ದರಿಂದ ಈ ಸಂಸ್ಮರಣಾ ಕಾರ್ಯಕ್ರಮವನ್ನು ಫಾಲ್ಗುಣದಲ್ಲಿ ಮಾಡಬೇಕೋ ಅಥವಾ ನವರಾತ್ರಿ ಸಮಯದಲ್ಲಿ ಧರ್ಮಪಿತರ "ಮರಣವೇ ಮಹಾನವಮಿ" ಎಂಬ ಉಕ್ತಿಗೆ ಅನುಸಾರವಾಗಿ ಆಗಲೇ ಮಾಡುವುದು ಒಳ್ಳೆಯದೊ ?

—ಮಾತಾಜಿ




ಧ್ಯಾನಾಸಕ್ತ ಸ್ವಾಮೀಜಿ



ನಗುತ್ತಾ ನಗಿಸುತ್ತಾ



ಪ್ರಯಾಣಕ್ಕೆ ಸಿದ್ಧರಾಗಿ



ಪೂಜಾನಂತರ ಅಡ್ಡಾಡುವಾಗ